

ಅಪ್ಪಗೆರೆ ತಿಮ್ಮರಾಜು

ಎಂ.ಬಿ. ಶ್ವೇತಾ



ಅಪ್ಪಗೆರೆ ತಿಮ್ಮರಾಜು

ಎಂ.ಬಿ. ಶ್ವೇತಾ

ವಿಸ್ತರಣೆ ಹಾಗೂ ಸಲಹಾ ಕೇಂದ್ರ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
ಗೊಟಗೋಡಿ – ೫೮೧ ೧೯೭

APPAGERE THIMMARAJU

(Biography of Appagere Thimmaraju)

By
M.B. Shwetha
Assistant Professor
Karnataka Janapada Univerisity, Gotagodi
Mob : 97420 24953

Published by
Prof. S.C. Ramesh
Director
Centre for Extension and Consultancy
Karantaka Janapada University
Gotagodi – 581 197
Shiggavi Taluk, Haveri Dist, Karnataka
Phone: 0836 - 2255180
Pages: xii + 76   Price: ₹ 80/-

www.janapadauni.in
First Impression : 2014
ISBN 978-93-83149-08-7

ಬೆಲೆ : ₹ ೮೦/-
ಮುಖಪುಟ: ಕೆ.ಕೆ. ಮಕಾಳಿ
ಅಕ್ಷರ ಸಂಯೋಜನೆ : ಸಂದೀಪ ಬಿ.ಆರ್ ಮತ್ತು ವಿಶ್ವ ಗುಜ್ಜರ್

ಪುಸ್ತಕ ದೊರೆಯುವ ಸ್ಥಳ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
ಗೊಟಗೋಡಿ ೫೮೧ ೧೯೭,
ಶಿಗ್ಗಾವಿ ತಾಲೂಕು, ಹಾವೇರಿ ಜಿಲ್ಲೆ

ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘದ ಕಟ್ಟಡ
ನಂ. ೨/೧೦೬, ೩ನೇ ಮಹಡಿ, ೧೭ನೇ ಅಡ್ಡರಸ್ತೆ,
ಮಾಗಡಿ ಕಾರ್ಡ್‌ರಸ್ತೆ, ವಿಜಯನಗರ, ಬೆಂಗಳೂರು–೫೬೦ ೦೪೦

ಮುದ್ರಣ :
ರಾಜಾ ಪ್ರಿಂಟರ್ಸ್, ಬೆಂಗಳೂರು
ದೂರವಾಣಿ : 22234066

ದೇಶ ಸುತ್ತು ಕೋಶ ಓದು

ಕನ್ನಡನಾಡು ಅಮೂಲ್ಯ ಹಾಗೂ ಸಮೃದ್ಧ ಜಾನಪದ ಸಂಪತ್ತಿನ ಆಗರವಾ ಗಿದೆ. ಅಪಾರವಾದ ಜ್ಞಾನದ ಅನನ್ಯತೆಯನ್ನು ಶೋಧಿಸುವ, ಸಂರಕ್ಷಿಸುವ ಹಾಗೂ ಸಂವರ್ಧಿಸುವ ಕಾರ್ಯಗಳು ಯಾವ ಕಾಲಕ್ಕೂ ಆಗಬೇಕಾದ ಕಾರ್ಯವೇ ಆಗಿದೆ. ಈ ಮಹತ್ವದ ಉದ್ದೇಶಗಳ ಈಡೇರಿಕೆಗಾಗಿ ಜಾನಪದ ವಿಶ್ವವಿದ್ಯಾಲಯದ ಸ್ಥಾಪನೆಯ ಅಗತ್ಯವಿತ್ತು. ನೆಲದ ಸಂಸ್ಕೃತಿಯನ್ನು ಉಸಿರಾಗಿಸಿಕೊಂಡು ಬದುಕುತ್ತಿರುವ ನಾಡಿನ ಸಮಸ್ತರ ಒಲವು ಮತ್ತು ನಿರೀಕ್ಷೆಗಳು ನಿಜವಾಗಬೇಕೆಂಬ ಮಹದಾಸೆಯೊಂದಿಗೆ ಜಗತ್ತಿನ ಪ್ರಪ್ರಥಮ ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಸ್ಥಾಪನೆಯಾಗಿದೆ. ಇದು ಕನ್ನಡದ ಮಟ್ಟಿಗೆ ಅಷ್ಟೇ ಅಲ್ಲ ದೇಶೀ ಸಂಸ್ಕೃತಿಯ ಮೂಲವನ್ನು ಶೋಧಿಸುವ ಮತ್ತು ಅದರ ಹರವು ವಿಸ್ತಾರಗೊಳ್ಳುವಂತೆ ಮಾಡಬೇಕಾದ ಮಹತ್ವದ ಜವಾಬ್ದಾರಿಯನ್ನು ಹೊತ್ತಿರುವುದರಿಂದ ವಿಶ್ವವಿದ್ಯಾಲಯದ ಸ್ಥಾಪನೆ ಚಾರಿತ್ರಿಕವಾಗಿ ಮಹತ್ವದ್ದೆನಿಸಿದೆ.

ಸಮಾಜದ ಎಲ್ಲ ಸಮುದಾಯಗಳ ಜ್ಞಾನ ಸಂಗ್ರಹಣೆ, ಸಂಪಾದನೆ, ಕಲಿಕೆ, ಪ್ರದರ್ಶನ ಕಾರ್ಯಗಳು ಇನ್ನೂ ತೀವ್ರಗತಿಯಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಹಾಗೂ ಪ್ರಮಾಣ ಬದ್ಧವಾಗಿ ಮತ್ತು ವೈಜ್ಞಾನಿಕವಾಗಿ ನಡೆಸುವ ಉದ್ದೇಶವೇ ವಿಶ್ವವಿದ್ಯಾಲಯದ ಮೂಲ ಧ್ಯೇಯವಾಗಿದೆ. ಬಹುಭಾಷಿಕ ಹಾಗೂ ಬಹುಸಂಸ್ಕೃತಿಗಳು ಇರುವ ನಾಡಿನಲ್ಲಿ ಇನ್ನೂ ಅನಾವರಣಗೊಳ್ಳಬೇಕಾದ ಜ್ಞಾನ ಸಂಪತ್ತು ಅಗಾಧ ಪ್ರಮಾಣದಲ್ಲಿದೆ. ಈವರೆಗೆ ಆದ ಜಾನಪದ ಕ್ಷೇತ್ರ ಸಂಬಂಧೀ ಕಾರ್ಯಗಳ ಬಗೆಗೆ ನಾವು ಅಷ್ಟೇನೂ ಬೀಗುವಂತಿಲ್ಲ. ಇನ್ನೂ ಆಗಬೇಕಾದ ಕೆಲಸ ಕಾರ್ಯಗಳು ಬೇಕಾದಷ್ಟು ಇವೆ ಎಂಬ ವಿನಯದಿಂದಲೇ ಜಾನಪದ ವಿಶ್ವವಿದ್ಯಾಲಯ ಕಾರ್ಯಪ್ರವೃತ್ತವಾಗಿದೆ. ಜನಪದರ ಲೋಕದೃಷ್ಟಿ, ಅವರ ವಿವೇಕ ಹಾಗೂ ಜಾಗತೀಕರಣದಿಂದಾಗಿ ತೀವ್ರಗತಿಯಲ್ಲಿ ಬದಲಾಗುತ್ತಿರುವ ಪ್ರಪಂಚಕ್ಕೆ ಪರ್ಯಾಯ ದೇಶೀ ಜ್ಞಾನ ಆಕರವಾಗಿ ಅದರ ಪ್ರಸ್ತುತತೆಗೆ ವಿಶ್ವವಿದ್ಯಾಲಯ ವಿಶೇಷವಾಗಿ ಗಮನಹರಿಸಿದೆ. ಶಿಷ್ಟ ಭಾಷೆಯ ಯಾಜಮಾನ್ಯಕ್ಕೆ ಭಿನ್ನವಾಗಿ ಮೌಖಿಕತೆಯಲ್ಲಿನ ಸಾಂಸ್ಕೃತಿಕ ಅಭಿವ್ಯಕ್ತಿ ಹಾಗೂ ಮೌಖಿಕ ಸಂಕಥನಕ್ಕೆ ಹೆಚ್ಚು ಒತ್ತು ಕೊಡುವ ಜರೂರತ್ತು ನಮ್ಮ ಮುಂದಿದೆ.

ಜಾನಪದ ಎಂದರೆ ಆಧುನಿಕ ಜ್ಞಾನ ಮತ್ತು ತಂತ್ರಜ್ಞಾನಕ್ಕೆ ವಿರುದ್ಧವಾದುದು ಎಂಬ ತಿಳಿವಳಿಕೆ ಬಲವಾಗಿ ಬೇರೂರಿದೆ. ಅಷ್ಟೇ ಅಲ್ಲ

ಹಳೆಯದನ್ನು ಸಂಗ್ರಹಿಸುವುದು, ಮುಂದಿನ ವರ್ಗಕ್ಕೆ ಕೂಡಿಟ್ಟು ಕೊಡುವುದು ಎಂಬ ಸ್ಥಾಪಿತ ತಿಳಿವಳಿಕೆಯ ಚೌಕಟ್ಟಿನಾಚೆಗೂ, ಜಾನಪದವನ್ನು ವಿಶಾಲ ಮನೋಭೂಮಿಕೆಯಲ್ಲಿ ಅರ್ಥೈಸಿಕೊಳ್ಳಬೇಕಾದುದು ಇಂದಿನ ಅಗತ್ಯವಾಗಿದೆ. ಜಾನಪದವು ಭೂಮಿ ತೂಕದ್ದು, ಆಕಾಶದಷ್ಟು ವಿಸ್ತಾರವಾದುದು, ನೀರಿನಷ್ಟು ಚಲನಶೀಲವಾದುದು, ಗಾಳಿಯಂತೆ ನಮ್ಮ ಉಸಿರು ಎಂಬುದು ನಮ್ಮ ಅರಿವಿಗೆ ಬರಬೇಕಾಗಿದೆ. ಒಟ್ಟಿನಲ್ಲಿ ಜಾನಪದ ಎಂದರೆ ಎಲ್ಲವನ್ನೂ ಅಖಂಡವಾಗಿ ಅನುಸರಿಸಿದ ಒಂದು ಜೀವನ ವಿಧಾನ; ಜ್ಞಾನವನ್ನು ವಿಶೇಷ ರೀತಿಯಲ್ಲಿ ಹಂಚಿಕೊಂಡಿರುವ ಒಂದು ತವನಿಧಿಯಾಗಿದೆ. ಹಾಗಾಗಿ 'ಹೊನ್ನ ಬಿತ್ತೇವು ಹೊಲಕೆಲ್ಲ' ಎಂಬ ಧ್ಯೇಯ ವಾಕ್ಯವನ್ನು ತನ್ನ ಮೂಲಮಂತ್ರವಾಗಿಸಿಕೊಂಡು ವಿಶ್ವವಿದ್ಯಾಲಯ ಕಾರ್ಯೋನ್ಮುಖವಾಗಿದೆ. ಈವರೆಗೆ ಗುಪ್ತನಿಧಿಯಾಗಿದ್ದ ತವನಿಧಿ ಹೊನ್ನು ಈಗ ಜಗತ್ಪ್ರಕಟವಾಗಬೇಕಿದೆ. ವಿದ್ಯೆಯನ್ನು ಬೋಧಿಸುವುದು, ಸಂರಕ್ಷಿಸುವುದು ಅಷ್ಟೇ ಅಲ್ಲ ಹಂಚುವುದು– ಪ್ರಸರಣ ಮಾಡುವುದು ಜ್ಞಾನ ಕೇಂದ್ರವಾದ ವಿಶ್ವವಿದ್ಯಾಲ ಯದ ಮೂಲ ಗುರಿಯಾಗಿರಬೇಕು. ಈ ನಾಡು ಮೊದಲ ಬಾರಿಗೆ ವಿಶ್ವವಿದ್ಯಾಲಯದ ಮೂಲಕ ದೇಸೀ ಜ್ಞಾನಸಂಪತ್ತನ್ನು ಜಾಗತಿಕ ಪರಿಸರದಲ್ಲಿ ಬಿತ್ತುವ ಕಾರ್ಯಕ್ಕೆ ಕಂಕಣಬದ್ಧವಾಗಿದೆ. ಬಿತ್ತುವ, ಬೆಳೆಯುವ ಪ್ರಕ್ರಿಯೆ ಹೊಸಹುಟ್ಟಿಗೆ ನಾಂದಿ ಹಾಡುವುದಲ್ಲದೆ ಜ್ಞಾನಪರಂಪರೆಯ ಸತತ ಮುಂದುವರಿಕೆ ಸಂರಕ್ಷಣೆ, ಅಭಿವೃದ್ಧಿಯ ರೂಪವೂ ಆಗಿದೆ.

ಪಾರಂಪರಿಕ ಜ್ಞಾನ, ಸಮುದಾಯ ಜ್ಞಾನ ಮತ್ತು ಆಚರಣೆಯ ಮೂಲ ನೆಲೆಯಿಂದಲೇ ಈ ಹೊತ್ತಿನ ಜ್ಞಾನಪದ್ಧತಿ ಬೆಳೆದು ಬಂದಿದೆ. ಸಮುದಾಯ ಜ್ಞಾನದಿಂದ ತಂತ್ರಜ್ಞಾನ ಕೌಶಲಗಳ ಬಳಕೆಯನ್ವಯ ನಮ್ಮ ಗ್ರಾಮ ವ್ಯವಸ್ಥೆಯನ್ನು ಹೆಚ್ಚು ಉತ್ಪಾದಕವಾಗಿಯೂ, ಪ್ರಾಯೋಜಕವಾಗಿಯೂ, ದೃಢವಾಗಿಯೂ ರೂಢಿಸಬೇಕಾಗಿದೆ. ಆದರೆ ಇವೊತ್ತಿನ ಜಾಗತೀಕರಣ, ಉದಾರೀಕರಣ, ಖಾಸಗೀಕರಣಗಳ ಪ್ರಭಾವದಿಂದಾಗಿ ಜಾನಪದದಲ್ಲಿ ತೀವ್ರ ಸ್ವರೂಪದ ಬದಲಾವಣೆಗಳು ಆಗಿವೆ. ಅದರಲ್ಲೂ ಉದ್ಯಮಪತಿತ್ವ ತನಗೆ ಬೇಕಾದ ಜ್ಞಾನವನ್ನು ಮಾತ್ರ ಸೆಳೆದುಕೊಂಡು ಲಾಭದಾಯಕವಲ್ಲದ್ದನ್ನು ಹಿಂದಕ್ಕೆ ತಳ್ಳುತ್ತಲೇ ಬರುತ್ತಿದೆ. ಪಾರಂಪರಿಕ ಜ್ಞಾನ –ವಿಜ್ಞಾನ ಕುರಿತು ಅತ್ಯಂತ ವೈಜ್ಞಾನಿಕ ತಳಹದಿಯ ಮೇಲೆ ಹಾಗೂ ವರ್ತಮಾನಕ್ಕೆ ಹೊಂದಿಕೆಯಾಗುವ ಅಧ್ಯಯನ ಮಾದರಿಗಳನ್ನು ರೂಪಿಸಿಕೊಳ್ಳುವುದು ಆವಶ್ಯಕವಾಗಿದೆ. ಬದಲಾದ ಸನ್ನಿವೇಶದಲ್ಲಿ ಜಾನಪದ ಎನ್ನುವುದು ನಿತ್ಯದ ಬದುಕಿನ ಒಡಲಾಳದಿಂದಲೇ ರೂಪಾಂತರವನ್ನು ಹೊಂದುತ್ತಿರುವುದರಿಂದ ಜಾನಪದದಲ್ಲಿಯೇ ಅದಕ್ಕೆ ಪರ್ಯಾಯವಾಗಿ, ಪ್ರತಿರೋಧ ಒಡ್ಡುವ ಶಕ್ತಿ ಇರುವುದನ್ನು ಗುರುತಿಸಬೇಕಾಗಿದೆ. ಈ ನಿಟ್ಟಿನಲ್ಲಿ ನಮ್ಮದೇ ಜ್ಞಾನ, ಸಂಸ್ಕೃತಿಯನ್ನು ಆಧುನಿಕ ಸಂದರ್ಭಕ್ಕೆ ಅನ್ವಯಿಸಿಕೊಂಡು ನೋಡಲು

ಯತ್ನಿಸಬೇಕಾಗಿದೆ. ಜನಪದರ ನಾಣ್ಣುಡಿಯಂತೆ, ಜ್ಞಾನ ಸಂಪಾದನೆಗೆ ಸಾಮಾನ್ಯವಾಗಿ ಅನುಸರಿಸುವ ಮಾರ್ಗಗಳು ಎರಡೇ; ಅವುಗಳಲ್ಲಿ ಒಂದು ದೇಶ ಸುತ್ತುವುದು, ಮತ್ತೊಂದು ಕೋಶ ಓದುವುದು. ಮನುಷ್ಯ ತನ್ನ ಜ್ಞಾನದಾಹವನ್ನು ನೀಗಿಸಿಕೊಳ್ಳಲು ಎರಡೂ ಮಾರ್ಗಗಳನ್ನು ಅನುಸರಿಸುವುದು ಅಗತ್ಯ. ಆದರೆ ಜ್ಞಾನ ಸಂಪಾದನೆಗೆ ಅವೆರೆಡರಲ್ಲಿ ಒಂದನ್ನಾದರೂ ಮಾಡಲೇಬೇಕು. ವಿಶ್ವವಿದ್ಯಾಲಯವು ಮೌಲಿಕವಾದ ಕೋಶಗಳನ್ನು ಪ್ರಕಟಿಸಿ ಓದುವಂತೆ ಪ್ರೇರೇಪಿಸುವ ಮೂಲಕ ಮಹತ್ವದ ಪ್ರಯತ್ನವನ್ನು ಮಾಡುತ್ತಿದೆ. ವಿಶ್ವವಿದ್ಯಾಲಯ ನೆಲಮೂಲವಾದ ಜನಪದ ಕಲೆ, ಸಾಹಿತ್ಯ, ಸಂಸ್ಕೃತಿ ಪರಂಪರೆಗಳ ಕುರಿತು ವಿಶೇಷ ಅಧ್ಯಯನ, ಅಧ್ಯಾಪನ, ಸಂಶೋಧನೆ ಸೇರಿದಂತೆ ಹತ್ತು ಹಲವು ಕಾರ್ಯಯೋಜನೆಗಳನ್ನು ರೂಪಿಸಿಕೊಂಡು ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿ ಕೊಳ್ಳುತ್ತಲಿದೆ. ದೇಶೀ ಎನ್ನಬಹುದಾದ ಎಲ್ಲ ಜ್ಞಾನವನ್ನು ಸಂಗ್ರಹಿಸುವ, ನಿರಂತರವಾಗಿ ಚಲನಶೀಲಗೊಳ್ಳುವ ಜಾನಪದವನ್ನು ಅದೇ ನೆಲೆಯಿಂದಲೇ ಗ್ರಹಿಸಿ, ಹೊಸ ಹೊಸ ಜ್ಞಾನ ಶೋಧದೊಂದಿಗೆ ಜಾನಪದವನ್ನು ಇಟ್ಟು ನೋಡುವ ಮತ್ತೆ ಹೊಸದಾಗಿ ಕಟ್ಟಿಕೊಳ್ಳುವ ಕಾರ್ಯವನ್ನು ನೋಂಪಿಯಂತೆ ಮುನ್ನಡೆಸಿಕೊಂಡು ಹೋಗುವುದೇ ಜಾನಪದ ವಿಶ್ವವಿದ್ಯಾಲಯದ ಮೂಲ ಆಶಯವಾಗಿದೆ. ಅದರ ಭಾಗವಾಗಿ ವಿಶ್ವವಿದ್ಯಾಲಯವು ವಿಸ್ತರಣೆ ಹಾಗೂ ಸಲಹಾ ಕೇಂದ್ರದ ಮೂಲಕ ಜ್ಞಾನ ಪ್ರಸರಣಕ್ಕೆ ಟೊಂಕಕಟ್ಟಿ ನಿಂತಿದ್ದು, ಪುಸ್ತಕ ಪ್ರಕಟಣೆಗೆ ಮುಂದಾಗಿದೆ. ಈ ಮೂಲಕ ಅಂತರ್‌ಶಿಸ್ತೀಯ ಜ್ಞಾನಶೋಧದ ವಿನೂತನ ಮಾರ್ಗಗಳು ತೆರೆದುಕೊಳ್ಳಲು ವಿಶ್ವವಿದ್ಯಾಲಯ ನಾಂದಿ ಹಾಡಿದೆ.

ಜನಪದರ ನರನಾಡಿಗಳಲ್ಲಿ ಹಾಡಿನ ಜೀವದ್ರವ್ಯವೇ ಹರಿದಾಡುತ್ತದೆ. ಅವರ ಜೀವನಾಡಿಯೇ ಹಾಡು. ಅವರ ಪಾಲಿನ ಉಸಿರು ಕೂಡ ಹಾಡೇ ಆಗಿರುತ್ತದೆ. ಕೆಲವು ಕಲಾವಿದರ ಪಾಲಿಗೆ ಜನಪದ ಗೀತೆಗಳು ಜೀವನದ ಪಾಡನ್ನು ಮರೆಯುವ ಉಪಾಯವಾಗಿಯೂ ತೋರುತ್ತವೆ. ಬದುಕಿನ ಹಲವು ಏಳು-ಬೀಳುಗಳ ನಡುವೆಯೂ ಜಾನಪದದ ಹುಚ್ಚು ಹಿಡಿಸಿಕೊಂಡು ಅದರ ಪೋಷಣೆಗೆ ದುಡಿಯುವ ಕಲಾವಿದರು ನಮ್ಮ ಮಧ್ಯೆ ಇರುವುದು ಅಭಿಮಾನಪಡುವ ಸಂಗತಿ. ಜಾನಪದದ ಬಗೆಗೆ ಅಪಾರ ಕಾಳಜಿ, ಕಳಕಳಿಯನ್ನು ಹೊಂದಿದ ವಿರಳ ಕಲಾವಿದರಲ್ಲಿ ಶ್ರೀ ಅಪ್ಪಗೆರೆ ತಿಮ್ಮರಾಜು ಅವರೂ ಒಬ್ಬರು. ತಮ್ಮ ಬದುಕಿನುದ್ದಕ್ಕೂ ಪಟ್ಟ ಪಾಡನ್ನು ಹಾಡುವ ಮೂಲಕ ಮರೆತು ಬದುಕಿನ ಗತಿಯನ್ನು ಬದಲಿಸಿಕೊಂಡ ಶ್ರೀ ಅಪ್ಪಗೆರೆಯವರಿಗೆ ಜಾನಪದವು ಜೀವನದ ಪರಮಸ್ನೇಹಿಯಾಗಿ ಅವರನ್ನು ಪೊರೆದಿದೆ. ಜನಪದ ಹಾಡುಗಳನ್ನು ಸುಶ್ರಾವ್ಯವಾಗಿ ಹಾಡುವ ಮೂಲಕ 'ಅಪ್ಪಗೆರೆಯಿಂದ ಅಮೆರಿಕಾದವರೆಗೂ' ಜಾನಪದದ ಸೊಗಡನ್ನು ಬಿತ್ತರಿಸಿದವರು ಅವರು. ಇಂತಹ ಅಪ್ಪಗೆರೆಯವರ ಹಾಡು ಕೇಳಿದ ನಾಡಿನ

ಜನಕ್ಕೆ ಅವರ ಜೀವನದ ಯಶೋಗಾಥೆಯನ್ನು ಓದಿ ತಿಳಿಯುವ ಭಾಗ್ಯವನ್ನು ಈ ಕೃತಿಯ ಮೂಲಕ ದೊರಕಿಸಿಕೊಟ್ಟ ಕುಮಾರಿ ಎಂ.ಬಿ. ಶ್ವೇತಾ ಅವರು ಅಭಿನಂದನಾರ್ಹರು.

ಗ್ರಂಥವನ್ನು ಅಚ್ಚುಕಟ್ಟಾಗಿ ಹೊರತರುವಲ್ಲಿ ತುಂಬ ಮುತುವರ್ಜಿ ವಹಿಸಿದ ವಿಶ್ವವಿದ್ಯಾಲಯದ ವಿಸ್ತರಣೆ ಹಾಗೂ ಸಲಹಾ ಕೇಂದ್ರದ ನಿರ್ದೇಶಕರು, ಮೌಲ್ಯಮಾಪನ ಕುಲಸಚಿವರೂ ಆದ ಪ್ರೊ. ಸ.ಚಿ. ರಮೇಶ ಹಾಗೂ ಸಿಬ್ಬಂದಿ ವರ್ಗಕ್ಕೆ ಅಭಿನಂದನೆಗಳು.

ಪ್ರೊ. ಅಂಬಳಿಕೆ ಹಿರಿಯಣ್ಣ
ಕುಲಪತಿ

ನಿರ್ದೇಶಕರ ಮಾತು

ಕರ್ನಾಟಕ ಜಾನಪದ ವಿಶ್ವವಿದ್ಯಾಲಯವು ಸಮಾಜದ ಸಮಸ್ತ ಸಮುದಾಯಗಳ ಜ್ಞಾನ ಸಂಗ್ರಹಣೆ, ಅಧ್ಯಯನ, ಅಧ್ಯಾಪನ, ಸಂಶೋಧನೆಯಂಥ ಶೈಕ್ಷಣಿಕ ಕಾರ್ಯಚಟುವಟಿಕೆಗಳನ್ನು ರೂಪಿಸಿಕೊಂಡು ಕಾರ್ಯ ಪ್ರವೃತ್ತವಾಗಿದೆ. ವಿಶ್ವವಿದ್ಯಾಲಯವು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಳ್ಳುವ ಭಾಗವಾಗಿ 'ವಿಸ್ತರಣೆ ಹಾಗೂ ಸಲಹಾ ಕೇಂದ್ರ' ವನ್ನು ಆರಂಭಿಸಿದೆ. ವಿಶ್ವವಿದ್ಯಾಲಯಗಳು ನಿಜವಾದ ಅರ್ಥದಲ್ಲಿ ಜ್ಞಾನದ ಪುನರುತ್ಪಾದನೆಯಲ್ಲಿ ತೊಡಗಿಕೊಳ್ಳಬೇಕು. ಸ್ಥಾಪಿತ ಸಿದ್ಧ ಜ್ಞಾನದ ಸಂಗ್ರಹದ ಜೊತೆಗೆ ನಿತ್ಯ ನೂತನವಾದ ಜನಪದ ಸಂಸ್ಕೃತಿಯನ್ನು ಪುನರ್ ನಿರ್ವಚಿಸುವ, ಹೊಸ ರೀತಿಯಲ್ಲಿ ಸ್ಥಾಪಿತಗೊಳಿಸುವ ಕೈಂಕರ್ಯಕ್ಕೆ ಕೈ ಹಾಕಬೇಕು. ಋತುಮಾನಗಳು ಬದಲಾದಂತೆ ಮನುಷ್ಯ ಬದುಕು ಬದಲಾಗುತ್ತಲೇ ಸಂವೇದನಾಶೀಲಗೊಳ್ಳುತ್ತ ಹೋಗುತ್ತದೆ. ನಮ್ಮ ಜನಪದ ಕಲೆ, ಸಾಹಿತ್ಯ, ಸಂಸ್ಕೃತಿಗಳು ತನ್ನತನದ ಛಾಯೆಯನ್ನು ಕಳೆದುಕೊಳ್ಳುತ್ತ ನಡೆದ ಇವೊತ್ತಿನ ಸಂದಿಗ್ಧತೆಯಲ್ಲಿ ನಾವು ಮಾಡುವ ವಿನೂತನ ಜ್ಞಾನಶೋಧಗಳು, ಪ್ರಯೋಗಗಳು, ಕಳೆಗುಂದುತ್ತಿರುವ ಜನಪದ ಸಂಸ್ಕೃತಿಯನ್ನು ಕಳೆಗಟ್ಟುವಂತೆ ಮಾಡದೇ ಹೋದರೆ ನಮ್ಮ ಪ್ರಯತ್ನಗಳು ನಿರರ್ಥಕ. ಆ ಎಚ್ಚರಿಕೆಯನ್ನು ಇಟ್ಟುಕೊಂಡೇ ಜಾನಪದ ವಿಶ್ವವಿದ್ಯಾಲಯವು ವಿಸ್ತರಣೆ ಹಾಗೂ ಸಲಹಾ ಕೇಂದ್ರದ ಮೂಲಕ ಅತ್ಯುಪಯುಕ್ತ ಕಾರ್ಯ ಯೋಜನೆಗಳನ್ನು ರೂಪಿಸಿದೆ.

ಅಂತರ್‌ಶಿಸ್ತೀಯ ಜ್ಞಾನ ಶಾಖೆಗಳಲ್ಲಿ ಜಾನಪದವೂ ಒಂದು. ನೆಲಮೂಲ ಜೀವನ, ಕಲೆ, ಸಾಹಿತ್ಯ, ಸಂಸ್ಕೃತಿಗೆ ಸಂಬಂಧಿಸಿದ ಹೊಸ ಹೊಸ ಜ್ಞಾನವನ್ನು ಶೋಧಿಸಿ, ಜಗತ್ತಿನ ಮೂಲೆ ಮೂಲೆಗೆ ತಲುಪಿಸುವ ಗುರುತರ ಜವಾಬ್ದಾರಿ ವಿಶ್ವವಿದ್ಯಾಲಯದ ಮೇಲಿದೆ. ಅದನ್ನು ಸಾಧ್ಯವಾಗಿಸುವ ಉದ್ದೇಶ ಇಟ್ಟುಕೊಂಡೇ ಆರಂಭವಾದ ವಿಶ್ವವಿದ್ಯಾಲಯದ ವಿಸ್ತರಣೆ ಹಾಗೂ ಸಲಹಾ ಕೇಂದ್ರವು, ಜಾನಪದ ಕ್ಷೇತ್ರದ ಬಾಹುಳ್ಯತೆ, ವಿಶ್ವವ್ಯಾಪಕತೆ, ಅದರ ಮೂಲ – ಚೂಲಗಳನ್ನು ಕಂಡರಿಸುವ ಪ್ರಯತ್ನ ಮಾಡುವ ಮಹದಾಸೆ ಹೊಂದಿದೆ. ಜೊತೆಗೆ ಹೊಸ ಅಧ್ಯಯನಗಳು, ನೂತನ ಮಾದರಿಯ ಸಂಶೋಧನೆಗಳು, ನಾಡಿನ ಶ್ರೇಷ್ಠ ವಿದ್ವಾಂಸರ ಕೃತಿಗಳನ್ನು ಪ್ರಕಟಿಸುವ ಮೂಲಕ ಜ್ಞಾನ ಪ್ರಸಾರದ ಉದ್ದೇಶಕ್ಕೆ ಒತ್ತಾಸೆಯಾಗಿ ನಿಲ್ಲಲಿದೆ. ಕೇಂದ್ರವು ಜ್ಞಾನ ಪ್ರಸರಣಕ್ಕೆ ಟೊಂಕಕಟ್ಟಿ ನಿಂತಿದ್ದು, ಮೌಲಿಕವಾದ ಪುಸ್ತಕಗಳ ಪ್ರಕಟಣೆಗೆ ಮುಂದಾಗಿದೆ. ನಾವು ಪ್ರಕಟ ಮಾಡುವ ವೈವಿಧ್ಯಪೂರ್ಣವಾದ ಮೌಲಿಕ ಕೃತಿಗಳು ನಾಡಿನ

ಓದುಗರಿಗೆ ತಲುಪಿ, ಅವು ಸದುಪಯೋಗವಾದರೆ ಮಾತ್ರ ನಮ್ಮ ಶ್ರಮ ಸಾರ್ಥಕ ಎಂದು ಭಾವಿಸುತ್ತೇನೆ.

ಶ್ರೀ ಅಪ್ಪಗೆರೆ ತಿಮ್ಮರಾಜು ಈ ನಾಡು ಕಂಡ ಶ್ರೇಷ್ಠ ಜನಪದ ಗಾಯಕ. ಕಡುಬಡತನದ ಮಧ್ಯೆ ಅರಳಿದ ಜಾನಪದ ಪ್ರತಿಭೆ ಅವರು. ತಮ್ಮ ಜೀವನದಲ್ಲಿ ಸಾಕಷ್ಟು ಅಪಮಾನ–ಅವಮಾನಗಳನ್ನು ಅನುಭವಿಸಿಯೂ, ಅದನ್ನು ಮೀರಿ ಬೆಳೆದ ಅವರ ಬದುಕಿಗೆ ಇಂಬುಕೊಟ್ಟದ್ದು ಜಾನಪದ. ಜನಪದ ಗೀತೆಗಳನ್ನು ಹಾಡುತ್ತಲೇ 'ಅಪ್ಪಗೆರೆಯ' ಹೆಸರನ್ನು ಹೊರದೇಶಗಳಲ್ಲೂ ಚಿರಪರಿಚಿತಗೊಳಿಸಿದ ಕೀರ್ತಿಗೆ ಭಾಜನಾರಾದ ಶ್ರೀಯುತರು ಅಪ್ಪಟ ಜನಪದ ಗಾನಕೋಗಿಲೆ. 'ಹೊಟ್ಟೆಯೊಳಗಿನ ಹಾಡ ಬಿಟ್ಟುಬಿಡಲೇ ಸುಮ್ಮನೆ, ಹಾಡಿ ತೀರಿಸಬೇಕಲ್ಲ ಕಲಿತ ಋಣವ' ಎಂದು ಸ್ವತಃ ಕೇಳಿಕೊಳ್ಳುವ ಅಪ್ಪಗೆರೆ ತಿಮ್ಮರಾಜು ಅವರು, ಜಾನಪದದ ಬಗೆಗೆ ವಿಪರೀತ ಮೋಹ ಇರಿಸಿಕೊಂಡವರು. ಜಾನಪದವನ್ನು ಉಳಿಸಿ, ಬೆಳಸಿಕೊಳ್ಳಬೇಕೆಂಬ ಅವರ ತುಡಿತ ಬಹು ದೊಡ್ಡದು. ಇದಕ್ಕಾಗಿ ನಿರಂತರವಾಗಿ ಶ್ರಮಿಸುತ್ತಿರುವ ಅವರ ಜೀವನದ ಮಹತ್ವದ ಘಟನಾವಳಿಗಳು, ಜೀವನಾನುಭವಗಳು, ಕಲಾಬದುಕಿನ ಏಳು–ಬೀಳುಗಳು ಆತ್ಯಂತಿಕವಾಗಿ ಈ ಕೃತಿಯಲ್ಲಿ ಅನಾವರಣಗೊಂಡಿವೆ. ಇಂತಹ ಮಹತ್ವದ ಕೃತಿಯನ್ನು ರಚಿಸಿಕೊಟ್ಟ ಕುಮಾರಿ ಎಂ.ಬಿ. ಶ್ವೇತಾ ಅವರಿಗೆ ವಿಶೇಷವಾಗಿ ಕೃತಜ್ಞತೆಗಳು ಸಲ್ಲಬೇಕು.

ಈ ಕೃತಿಯು ಅಚ್ಚುಕಟ್ಟಾಗಿ ಪ್ರಕಟಗೊಳ್ಳಲು ಸರ್ವ ರೀತಿಯಲ್ಲೂ ಸಹಕಾರ ನೀಡಿದ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಯವರಾದ ಪ್ರೊ. ಅಂಬಳಿಕೆ ಹಿರಿಯಣ್ಣ ಅವರಿಗೆ, ಆಡಳಿತಾತ್ಮಕ ಬೆಂಬಲ ನೀಡಿದ ಮಾನ್ಯ ಕುಲಸಚಿವರಾದ ಪ್ರೊ. ಡಿ.ಬಿ. ನಾಯಕ, ವಿಸ್ತರಣೆ ಕೇಂದ್ರದ ಎಲ್ಲ ಕೆಲಸಗಳಿಗೆ ಬೆಂಬಲವಾಗಿ ನಿಂತಿರುವ ಹಿರಿಯ ಸಂಶೋಧನಾ ಅಧಿಕಾರಿ ಡಾ. ಕೆ. ಪ್ರೇಮಕುಮಾರ, ವಿಶ್ವವಿದ್ಯಾಲಯದ ಡೀನ್‌ರಾದ ಪ್ರೊ. ಎಂ. ಚಂದ್ರ ಪೂಜಾರಿ, ಕರಡು ತಿದ್ದಲು ನೆರವಾದ ಶ್ರೀ ಸಂಗಮೇಶ ಎಸ್. ಗಣಿ, ಡಿಟಿಪಿ ಮತ್ತು ಅಕ್ಷರ ಸಂಯೋಜನೆ ಮಾಡಿದ ಶ್ರೀ ಸಂದೀಪ ಬಿ.ಆರ್. ಮತ್ತು ಶ್ರೀ ವಿಶ್ವ ಗುಜ್ಜರ್, ಅಂದವಾದ ಮುಖಪುಟ ವಿನ್ಯಾಸ ಮಾಡಿಕೊಟ್ಟ ಶ್ರೀ ಕೆ.ಕೆ. ಮಕಾಳಿ, ಕಚೇರಿ ಸಹಾಯಕ ಕೆ.ಎಲ್. ಲಕ್ಷ್ಮಣ ಅವರಿಗೆ ಹಾಗೂ ಪುಸ್ತಕವು ಪ್ರಕಟಗೊಳ್ಳುವಲ್ಲಿ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಶ್ರಮಿಸಿದ ಎಲ್ಲರಿಗೂ ಕೃತಜ್ಞತೆಗಳು.

ಪ್ರೊ. ಸ.ಚಿ. ರಮೇಶ

ನಿರ್ದೇಶಕ

ಕೃತಜ್ಞತೆಗಳು

ಜಾನಪದ ಅಧ್ಯಯನವು ಭಿನ್ನ ಆಯಾಮಗಳನ್ನು ಪಡೆದುಕೊಳ್ಳುತ್ತಾ ಇತ್ತೀಚಿನ ದಿನಗಳಲ್ಲಿ ಒಂದು ಪ್ರಭಾವೀ ಜ್ಞಾನಶಿಸ್ತಾಗಿ ಬೆಳೆಯುತ್ತಿದೆ. ಕರ್ನಾಟಕ ಜಾನಪದ ವಿಶ್ವವಿದ್ಯಾಲಯವು ಈ ನಿಟ್ಟಿನಲ್ಲಿ ತನ್ನದೇ ಆದ ಕೊಡುಗೆಯನ್ನು ಜಾನಪದ ಕ್ಷೇತ್ರಕ್ಕೆ ನೀಡುತ್ತಿದೆ. ಅಪ್ಪಗೆರೆ ತಿಮ್ಮರಾಜು ನಾಡಿನ ಸುಪ್ರಸಿದ್ಧ ಜನಪದ ಹಾಡುಗಾರರು. ಕೆಲವು ವರುಷಗಳಿಂದ ಸಂಗೀತ ಕಾರ್ಯಕ್ರಮಗಳಲ್ಲಿ ಮತ್ತೆ ಮತ್ತೆ ಭೇಟಿಯಾಗುವ ಪ್ರಸಂಗ ಬಂದಾಗಲೆಲ್ಲ "ನಿನ್ನ ದನಿ ಚೆನ್ನಾಗಿದೆ. ಹಾಡುವುದನ್ನು ನಿಲ್ಲಿಸಬೇಡ. ಸಂಗೀತ ಎಲ್ಲರಿಗೂ ಒಲಿಯುವುದಿಲ್ಲ" ಎಂದು ಪದೇ ಪದೇ ಸ್ವಲ್ಪ ಜೋರಾಗಿಯೇ ಹೇಳುತ್ತಾ ಆ ಮೂಲಕ ಸದಾ ಸಂಗೀತದ ಬಗೆಗಿನ ನನ್ನ ಆಸಕ್ತಿಯನ್ನು ಜೀವಂತವಾಗಿರಿಸಿಕೊಳ್ಳುವುದಕ್ಕೆ ಕಾರಣವಾಗಿದ್ದಾರೆ. 'ಪಟ್ಟಾಂಗ' ಕಾರ್ಯಕ್ರಮದ ಅತಿಥಿಯಾಗಿ ಅಪ್ಪಗೆರೆಯವರು ಬಂದಾಗ, ಅವರ ಕುರಿತು ಕೃತಿ ರಚಿಸಬೇಕೆಂಬ ವಿಶ್ವವಿದ್ಯಾಲಯದ ಆದೇಶವನ್ನು ಸಂತೋಷದಿಂದ ಒಪ್ಪಿಕೊಂಡೆ. ಈ ಬರವಣಿಗೆಗೆ ಅಗತ್ಯವಿದ್ದ ಮಾಹಿತಿಗಳನ್ನು ನೀಡಿದ ಅಪ್ಪಗೆರೆಯವರಿಗೆ ಕೃತಜ್ಞಳಾಗಿದ್ದೇನೆ.

ಈ ಕೃತಿ ರಚನೆಯ ಹೊಣೆಯನ್ನು ನನ್ನ ಪಾಲಿಗೊಪ್ಪಿಸಿ, ಅದು ಪ್ರಕಟಗೊಳ್ಳಲು ಕಾರಣರಾಗಿರುವ ನನ್ನ ಗುರುಗಳೂ ಮಾರ್ಗದರ್ಶಕರೂ ಆದ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಪ್ರೊ. ಅಂಬಳಿಕೆ ಹಿರಿಯಣ್ಣ ಅವರಿಗೆ ಋಣಿಯಾಗಿದ್ದೇನೆ. ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಮಾನ್ಯ ಕುಲಸಚಿವರಾಗಿರುವ ಡಾ. ಡಿ.ಬಿ. ನಾಯಕ ಅವರಿಗೆ, ಮಾನ್ಯ ಮೌಲ್ಯಮಾಪನ ಕುಲಸಚಿವರು ಮತ್ತು ವಿಸ್ತರಣೆ ಹಾಗೂ ಸಲಹಾ ಕೇಂದ್ರದ ನಿರ್ದೇಶಕರೂ ಆದ ಪ್ರೊ. ಸ.ಚಿ. ರಮೇಶ ಅವರಿಗೆ, ವಿಶ್ವವಿದ್ಯಾಲಯದ ಹಿರಿಯ ಸಂಶೋಧನಾಧಿಕಾರಿಯಾಗಿರುವ ಡಾ. ಕೆ. ಪ್ರೇಮಕುಮಾರ ಅವರಿಗೂ ಕೃತಜ್ಞತೆಗಳು. ನನ್ನ ಏಳ್ಗೆಯ ಹಿಂದಿರುವ ನನ್ನ ಹೆತ್ತವರಿಗೂ ಋಣಿಯಾಗಿದ್ದೇನೆ.

ಎಂ.ಬಿ. ಶ್ವೇತಾ

ಪರಿವಿಡಿ

೧. ಪೀಠಿಕೆ

ಕನ್ನಡ ನಾಡು ಕಂಡ ಅಪರೂಪದ ಕಲಾವಿದ ಅಪ್ಪಗೆರೆ ತಿಮ್ಮರಾಜು. ಬದುಕಿನಲ್ಲಿ ಹಲವಾರು ಸವಾಲುಗಳಿದ್ದರೂ ಎಲ್ಲವನ್ನೂ ಎದುರಿಸಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿರುವ ಕಲಾವಿದ. ಕರ್ನಾಟಕ ಜಾನಪದ ವಿಶ್ವವಿದ್ಯಾಲಯವು ದೇಸೀ ಮೂಲದ ಕಲಾವಿದರನ್ನು ಹುಡುಕಿ ಅವರಿಗೆ ವೇದಿಕೆಯನ್ನು ಒದಗಿಸುವ ನಿಟ್ಟಿನಲ್ಲಿ ತಿಂಗಳಿಗೊಬ್ಬರು ಅತಿಥಿಗಳನ್ನು ಆಹ್ವಾನಿಸಿ ಅವರೊಂದಿಗೆ 'ಪಟ್ಟಾಂಗ' ಕಾರ್ಯಕ್ರಮವನ್ನು ಏರ್ಪಡಿಸಿದೆ. ವಿಶ್ವವಿದ್ಯಾಲಯದ ನಿಯಮಗಳ ಮಿತಿಯಲ್ಲಿಯೇ ಅನೌಪಚಾರಿಕವಾಗಿ ನಡೆಯುವ ಈ ಕಾರ್ಯಕ್ರಮದಲ್ಲಿ ಈ ನೆಲದ ಮೂಲ ಕಲಾವಿದರಿಗೆ ಅವಕಾಶ ಒದಗಿಸಲಾಗುತ್ತಿದೆ. ಪ್ರತಿ ತಿಂಗಳ ಕೊನೆಯ ವಾರದ ಒಂದು ದಿನದಂದು ನಡೆಯುವ ಈ ಕಾರ್ಯಕ್ರಮದಲ್ಲಿ ಕಲಾವಿದರು ತಮ್ಮ ಬದುಕಿನಲ್ಲಿ ಅನುಭವಿಸಿದ ಸಂಕಷ್ಟ, ನೋವು-ನಲಿವು, ಕಲೆಯನ್ನು ನೆಚ್ಚಿಕೊಂಡಿರುವುದರ ಹಿಂದಿನ ಉದ್ದೇಶ, ಪ್ರಯೋಜನ, ಅದರಿಂದುಂಟಾದ ನಷ್ಟ ಎಲ್ಲವುಗಳ ಕುರಿತು ಮುಕ್ತವಾಗಿ ಸಹೃದಯರೊಂದಿಗೆ ಹಂಚಿಕೊಳ್ಳಲು ಅವಕಾಶವಿದೆ. ಅಪ್ಪಗೆರೆಯಿಂದ ಅಮೇರಿಕಾದವರೆಗೂ ಜನಪದ ಗೀತೆಗಳ ಗಾಯನದ ಮೂಲಕ ಪ್ರತಿಭೆಯನ್ನು ಮೆರೆದಿರುವ ತಿಮ್ಮರಾಜು ಅವರನ್ನು ತಿಂಗಳ ಅತಿಥಿಯಾಗಿ ಅಹ್ವಾನಿಸಲಾಗಿತ್ತು. ತಿಮ್ಮರಾಜು ಅವರ ಬದುಕಿನ ಹಲವು ಮಜಲುಗಳನ್ನು 'ಪಟ್ಟಾಂಗ' ತೆರೆದಿಟ್ಟಿದೆ. ಅವುಗಳನ್ನು ದಾಖಲೆಯಾಗಿ ಉಳಿಸಿಕೊಳ್ಳುವ ಉದ್ದೇಶದಿಂದ ಈ ಪುಟ್ಟ ಕೃತಿ ಹೊರಬರುತ್ತಿದೆ. ಅಪ್ಪಗೆರೆ ತಿಮ್ಮರಾಜು ಅವರ ಕುರಿತು ಈ ಕಿರುಪುಸ್ತಕವನ್ನು ರಚಿಸಲು ಅವಕಾಶ ಮಾಡಿಕೊಟ್ಟ ಸರ್ವರಿಗೂ ಋಣಿಯಾಗಿದ್ದೇನೆ.

೨. ಬಾಲ್ಯ

"ನಿಲ್ಲಿಸದಿರಿ ಅಪ್ಪಾ . . .
ಹಾಕಬೇಡಿ ಗೆರೆಯನು
ಅಳಿಯದಿರಲಿ ಜನಪದ
ಹರಿಯುತಿರಲಿ ನಿಂ ಪದ"

ಎಂ. ವಿಶ್ವನಾಥ (ಅಪ್ಪಗೆರೆಯವರ ಅಭಿಮಾನಿ)

'ಹೊಟ್ಟೆಯೊಳಗಿನ ಹಾಡ ಬಿಟ್ಟು ಬಿಡಲೇ ಸುಮ್ಮನೆ, ಹಾಡಿ ತೀರಿಸಬೇಕಲ್ಲ ಕಲಿತ ಋಣವ?' ಎಂದು ತನ್ನೊಳಗೆ ತಾನೊಂದು ಪ್ರಶ್ನೆಯನ್ನು ಹಾಕಿಕೊಂಡು ಅದಕ್ಕೆ ತನ್ನದೇ ನೆಲೆಯ ಉತ್ತರವನ್ನೂ ಕಂಡುಕೊಂಡು ಬದುಕುತ್ತಿರುವ ವ್ಯಕ್ತಿ ಅಪ್ಪಗೆರೆ ತಿಮ್ಮರಾಜು. ಅತ್ಯಂತ ಸರಳ ವ್ಯಕ್ತಿತ್ವದ ಹಿರಿಯ ಕಲಾವಿದನ ಹಿಂದಿನ ಪ್ರೇರಣೆಗಳು ಹಲವು. ಅಂತಾರಾಷ್ಟ್ರೀಯ ಮಟ್ಟದ ಜನಪದ ಗಾಯಕನಾಗಿ ಗುರುತಿಸಿಕೊಂಡಿರುವ ತಿಮ್ಮರಾಜುರವರ ವ್ಯಕ್ತಿತ್ವದ ಹಿಂದೆ ಅವರ ಬಾಲ್ಯವು ಬಹಳ ಪ್ರಭಾವ ಬೀರಿದೆ. ರಾಮನಗರ ಜಿಲ್ಲೆಯ ಚನ್ನಪಟ್ಟಣ ತಾಲೂಕಿನ 'ಅಪ್ಪಗೆರೆ' ತಿಮ್ಮರಾಜು ಅವರ ಹುಟ್ಟೂರು. ಬೆಂಗಳೂರು–ಮೈಸೂರು ಜಿಲ್ಲೆಗಳ ನಡುವೆ ಇರುವ ಈಗಿನ ರಾಮನಗರ ಜಿಲ್ಲೆಯು ಹಲವು ಮಹತ್ವದ ಕೊಡುಗೆಗಳನ್ನು ಜಾನಪದ ಜಗತ್ತಿಗೆ ನೀಡಿದೆ. 'ಚೆನ್ನಪಟ್ಟಣದ ಗೊಂಬೆಗಳು' 'ಜಾನಪದ ಲೋಕ' ಹೀಗೆ ಸಾಂಸ್ಕೃತಿಕ ಕ್ಷೇತ್ರಕ್ಕೆ ಅನನ್ಯ ಕೊಡುಗೆಯನ್ನು ನೀಡಿದ ಜಿಲ್ಲೆ ರಾಮನಗರ. ಈ ಜಿಲ್ಲೆಯಲ್ಲಿ ಜನಿಸಿ ಕಲಾವಿದರಾಗಿ ಬೆಳೆದ ಅಪ್ಪಗೆರೆ ತಿಮ್ಮರಾಜುರವರು ಕರ್ನಾಟಕ ಜಾನಪದ ಕ್ಷೇತ್ರಕ್ಕೆ ನೀಡಿದ ಸೇವೆ ಅಪಾರವಾದುದು. ೧೯೫೫ ಏಪ್ರಿಲ್ ೮ ರಂದು ಜನಿಸಿದ ಅಪ್ಪಗೆರೆಯವರ ಬಾಲ್ಯವು ಹಲವು ಸಾಂಸ್ಕೃತಿಕ ಅನುಭವಗಳಿಂದ ಪಕ್ವಗೊಂಡಿದೆ. 'ಮನೆಯೇ ಮೊದಲ ಪಾಠಶಾಲೆ' ಎಂಬಂತೆ, ಇವರ ಮನೆಯ ಪರಿಸರ ಒಬ್ಬ ಭವಿಷ್ಯದ ಕಲಾವಿದನನ್ನು ಹುಟ್ಟು ಹಾಕಿತು. ಅಪ್ಪಗೆರೆಯವರ ತಂದೆ ತಿಮ್ಮಯ್ಯ ನೇಕಾರರು. 'ಯಜಮಾನ ತಿಮ್ಮಯ್ಯನ ಮನೆ' ಎಂದೇ ಅವರ ಮನೆ ಆ ಕೇರಿಗೆ ಪ್ರಸಿದ್ಧವಾಗಿತ್ತು. ತಾಯಿ 'ಚಿಕ್ಕ ಬೋರಮ್ಮ'. ಅಪ್ಪಗೆರೆ ಒಂದು ಸಣ್ಣ ಹಳ್ಳಿಯಾದುದರಿಂದ ಹಳ್ಳಿಗೆಲ್ಲ ಬಾಲಕ ತಿಮ್ಮರಾಜು ಪ್ರಿಯರಾಗಿದ್ದರು. ಇಡೀ ಊರೇ ನೇಕಾರರ ಕೇರಿಯಾಗಿತ್ತು. ಅಲ್ಲದೇ, ಹಲವಾರು ಹಬ್ಬ, ಆಚರಣೆಗಳಿಗೆ ಆದ್ಯತೆಯಿದ್ದ ಊರು ಇದಾಗಿತ್ತು. ಇವರ ತಾಯಿಯ ತಾಯಿ, ತಿಮ್ಮರಾಜುರವರ ಅಜ್ಜಿ ಪುಟ್ಟಸಿದ್ದಮ್ಮ. 'ಸೋಬಾನೆ ಪುಟ್ಟಸಿದ್ದಮ್ಮ' ಎಂದೇ ಕೇರಿಯಲ್ಲಿ ಹೆಸರಾಗಿದ್ದ ಅಜ್ಜಿಯ ಅಭಿರುಚಿ ತಿಮ್ಮರಾಜು ಅವರ ಜನಪದ ಕಲಾ ಆಸಕ್ತಿಗೆ ಮೂಲ ಪ್ರೇರಣೆ. ಎಲ್ಲೆಲ್ಲಿ ಮದುವೆ, ಜಾತ್ರೆ–ಉತ್ಸವಗಳು ನಡೆಯುತ್ತಿದ್ದವೋ ಅಲ್ಲೆಲ್ಲಾ ಅಜ್ಜಿಯ ಜೊತೆಗೆ ಓಡಾಡಲು ಇವರಿಗೆ ಅವಕಾಶವಿತ್ತು. ಅಜ್ಜಿಯಿಂದ ಬಾಲ್ಯದಲ್ಲಿ ಕೇಳುತ್ತಿದ್ದ ಹಾಡುಗಳು ಅಪ್ಪಗೆರೆಯವರ ಸಂಗೀತ ಬದುಕಿಗೆ ಅಪೂರ್ವ ಆರಂಭವನ್ನು ನೀಡಿದವು.

ಮನೆಯಲ್ಲಿ ಎಲ್ಲರಿಂದಲೂ 'ದೊಡ್ಡವನೇ' ಎಂದು ಪ್ರೀತಿಯಿಂದ ಕರೆಯಿಸಿಕೊಳ್ಳುತ್ತಿದ್ದರು. ಇವರಿಗೆ ಇಬ್ಬರು ಸಹೋದರರು ಹಾಗೂ ಒಬ್ಬರು ಸಹೋದರಿಯರಿದ್ದು, ಎಲ್ಲರಿಗಿಂತಲೂ ಹಿರಿಯವರಾದುದರಿಂದಲೇ ಇವರನ್ನು ಮನೆಯಲ್ಲಿ ಎಲ್ಲರೂ 'ದೊಡ್ಡವನೇ' ಎಂದು ಸಂಬೋಧಿಸುತ್ತಿದ್ದರು.

ಬಾಲ್ಯದಲ್ಲಿ ನಾವು ಮಾಡುವ ಸಹವಾಸ ನಮ್ಮ ಭವಿಷ್ಯದ ಮೇಲೆ ಮಹತ್ವದ ಪರಿಣಾಮವನ್ನು ಬೀರುತ್ತದೆ ಎಂಬುದಕ್ಕೆ ಈ ಕಲಾವಿದನ ಬದುಕೇ ಸಾಕ್ಷಿ. ಅಜ್ಜಿಯ ಹಾಡುಗಳು ತಿಮ್ಮರಾಜು ಅವರಿಗೆ ತೆರೆದು ತೋರಿಸಿದ ಹಾದಿ ವಿಭಿನ್ನವಾದುದು.

"ಒಳ್ಳೆವರ ಗೆಳೆತಾನ ಕಲ್ಲು ಸಕ್ಕರೆ ಹಾಂಗ
ಖುಲ್ಲರ ಗೆಳೆತನ ಮಾಡಿದರ । ನನಕಂದ
ಸಲ್ಲದ ಮಾತು ಬರುತಾವ॥
ಆಚಾರಕ್ಕರಸಾಗು, ನೀತಿಗೆ ಪ್ರಭುವಾಗು
ಮಾತಿನಲಿ ಚೂಡಾಮಣಿಯಾಗು । ಕಂದಯ್ಯ
ಜ್ಯೋತಿಯೆ ಆಗು ಜಗಕೆಲ್ಲ॥"

ಅಪ್ಪಗೆರೆಯವರ ಕಂಠದಲ್ಲಿ ಸದಾ ಇರುವ ಈ ಹಾಡಿನ ಭಾವ ಅವರ ಬದುಕಲ್ಲೂ ಕಾಣಿಸುತ್ತದೆ. ಬಾಲ್ಯದಲ್ಲಿ ಜೊತೆಗಾರರಾಗಿದ್ದ ಸ್ನೇಹಿತರನ್ನೆಲ್ಲ ತಮ್ಮ ನೆನೆಪಿನಲ್ಲಿ ಇನ್ನೂ ಜೀವಂತವಾಗಿ ಇರಿಸಿಕೊಂಡಿದ್ದಾರೆ. ವೆಂಕಟಾಚಲ, ಶ್ರೀನಿವಾಸ, ಮುನಿಯಪ್ಪ, ಮಾಸ್ಟರ್ ವೆಂಕಟೇಶ್, ದಾಸಪ್ಪ ಇವರುಗಳೆಲ್ಲ ಅಪ್ಪಗೆರೆಯವರ ನೆನಪಿನಲ್ಲಿ ಉಳಿದ ಗೆಳೆಯರ ಬಳಗ. ಸ್ವತಃ ತಿಮ್ಮರಾಜು ಅವರೇ ಹೇಳುವಂತೆ, ಅವರ ಬದುಕು ಕುವೆಂಪು ನಿಲುವುಗಳಿಂದಲೂ ಪ್ರೇರೇಪಿತವಾಗಿದೆ. "ಆ ಕಾಲವೊಂದಿತ್ತು. ದಿವ್ಯ ತಾನಾಗಿತ್ತು" ಎಂಬ ಕುವೆಂಪು ಮಾತಿನಂತೆ ಬಾಲ್ಯವನ್ನು ನೆನಪಿಸಿಕೊಂಡರೆ ಹಲವು ಮಾಸದ ಅನುಭವಗಳ ಒಳಗೆ ತಿಮ್ಮರಾಜು ಸೇರಿ ಹೋಗುತ್ತಾರೆ. ಆದರೂ ಇವರಿಗೆ ದೊರೆತ ಅವಕಾಶಗಳು ಅವರನ್ನು ಇತರ ತನ್ನ ಓರಗೆಯವರಿಗಿಂತ ಭಿನ್ನವಾಗಿ ರೂಪಿಸಿದವು.

"ನಾವು ಆಗ ತುಂಬಾ ಚಿಕ್ಕ ಹುಡುಗರಾಗಿದ್ದೆವು. ಕುರಿ ದನಗಳನ್ನು ಕಾಯೋಕೆ ಹೋಗುತ್ತಿದ್ದೆವು. ನಾನು ತುಂಬಾ ಕಪ್ಪಗಿದ್ದೆ. ಒಳ್ಳೆ ಆಫ್ರಿಕನ್ ಥರಾ ಇದ್ದೆ. ಹಾಗೆ ದನ ಕಾಯೋಕೆ ಹೋಗುತ್ತಿದ್ದಾಗ, ಒಬ್ಬನು ಮನೆಯಿಂದ ರಾಗಿ ಹಿಟ್ಟು ತೆಗೆದುಕೊಂಡು ಬರುತ್ತಿದ್ದ. ಮತ್ತೊಬ್ಬ ಬೇಳೆ ತರುತ್ತಿದ್ದ. ಇನ್ನೊಬ್ಬ ಸಾಂಬಾರ್ ಪುಡಿ ತರುತ್ತಿದ್ದ. ಮತ್ತೊಬ್ಬ ಅಕ್ಕಿ ತೆಗೆದುಕೊಂಡು ಬರುತ್ತಿದ್ದ. ಎಲ್ಲರೂ ಸೇರಿ ರಾಗಿ ರೊಟ್ಟಿ ಮಾಡುತ್ತಿದ್ದೆವು. ಅನ್ನ ಮಾಡುತ್ತಿದ್ದೆವು. ಜೊತೆಯಲ್ಲಿ ಊಟ ಮಾಡುತ್ತಿದ್ದೆವು. ಜಗಳವಾಡುತ್ತಿದ್ದೆವು". ಇವು ತಿಮ್ಮರಾಜು ಅವರ ಬಾಲ್ಯದ ನೆನಪುಗಳು. ಹಳ್ಳಿಯ ಸಹಜ ಬದುಕನ್ನು ಉಸಿರಾಡುತ್ತಾ ಬೆಳೆದು ಬಂದವರು ಅಪ್ಪಗೆರೆ. ಈ ಹಿನ್ನೆಲೆಯಲ್ಲಿಯೇ ಆಧುನಿಕ ಜಗತ್ತಿನಲ್ಲಿ

ಮಕ್ಕಳಿಗೆ ಅನುಭವಕ್ಕೂ ದೊರೆಯದ ಬಾಲ್ಯದ ಕುರಿತು ಅವರ ಆತಂಕವಿದೆ. "ಜ್ಯೋತಿಯೇ ಆಗು ಜಗಕ್ಕೆಲ್ಲ" ಎಂಬ ಜನಪದರ ಆಶಯದ ಹಿಂದೆ, ಕುವೆಂಪುರವರ 'ಓ ನನ್ನ ಚೇತನ, ಆಗು ನೀ ಅನಿಕೇತನ' ಎಂಬ ಭಾವ ಅಡಗಿದೆ ಎಂಬುದು ತಿಮ್ಮರಾಜು ಅವರ ಅಭಿಪ್ರಾಯ. ತಿಮ್ಮರಾಜು ಅವರ ಬಾಲ್ಯದಲ್ಲಿ ಅವರ ಬದುಕಿನ ಹಲವು ನೆನಪುಗಳು ಅಡಗಿವೆ.

"ಎಲ್ಲಿ ಮನಕಳುಕಿರದೋ, ಎಲ್ಲಿ ತಲೆಬಾಗಿರದೋ
ಅಲ್ಲಿ ತಿಳಿವಿಗೆ ತೊಡಕು ತೋರದಿಹುದಲ್ಲಿ"

ಎಂಬ ಠಾಕೂರರ ಕಾವ್ಯ ಸಾಲಿನಂತೆ, ಬಾಲ್ಯವು ಸ್ವತಂತ್ರವಾಗಿರಬೇಕು. ಯಾವುದೇ ಹೇರುವಿಕೆಗಳಿಲ್ಲದೆ ಮಕ್ಕಳು ಬಾಲ್ಯವನ್ನು ಅನುಭವಿಸಬೇಕು. ಬಾಲ್ಯ ನೀಡುವ ಅನುಭವಗಳು ಎಷ್ಟೋ ಬಾರಿ ಭವಿಷ್ಯದ ಗಟ್ಟಿತನಕ್ಕೆ ಕಾರಣವಾಗುತ್ತದೆ. ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣದ ಸಂದರ್ಭದಲ್ಲಿ ಅಪ್ಪಗೆರೆಯವರು ಪಡೆದ ಅನುಭವಗಳೇ ಅವರ ಕಲಾಬದುಕಿಗೆ ಒಳ್ಳೆಯ ತಳಹದಿಯಾದುವು. ಅಪ್ಪಗೆರೆಯಲ್ಲಿ ಯಾವುದೇ ಶಾಲೆಗಳಿರಲಿಲ್ಲ. ಹಾಗಾಗಿ ಬಾಲಕ ತಿಮ್ಮರಾಜು ಚನ್ನಪಟ್ಟಣದಿಂದ ಹೊಂಗನೂರಿಗೆ ಹೋಗುವ ದಾರಿಯಲ್ಲಿ ಇದ್ದಂಥ 'ವೀರೇಗೌಡನ ದೊಡ್ಡಿ'ಯ ಶಾಲೆಗೆ ಹೋಗುತ್ತಿದ್ದರು. ಅವರೇ ಹೇಳುವಂತೆ ಎರಡನೆಯ ತರಗತಿಯನ್ನು ಅವರು ಪೂರೈಸಿದುದೇ ಗೊತ್ತಿಲ್ಲ. ಆಗಿನ ಹಳ್ಳಿಗಳ ಶಾಲಾ ವಾತಾವರಣ ಹಾಗಿತ್ತು. ನಾಡೋಜ ಎಚ್.ಎಲ್. ನಾಗೇಗೌಡರು ಓದಿದ ಶಾಲೆಯಲ್ಲಿಯೇ ತಿಮ್ಮರಾಜು ಅವರ ವಿದ್ಯಾಭ್ಯಾಸವೂ ನಡೆಯಿತೆನ್ನುವುದು ವಿಶೇಷ. ಎಸ್.ಎಸ್.ಎಲ್.ಸಿ. ಯವರೆಗೂ ಇವರಿಗೆ ಶಾಲೆಯ ಬಗೆಗೆ ಆಸಕ್ತಿಯೇ ಇರಲಿಲ್ಲ. ಊರ ಭಜನಾ ಮಂದಿರದಲ್ಲಿ ನಡೆಯುತ್ತಿದ್ದ ಭಜನೆ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದೇ ತಿಮ್ಮರಾಜುವಿಗೆ ಬಹಳ ಪ್ರಿಯವಾದ ಚಟುವಟಿಕೆ. ಸದಾಕಾಲ ಭಜನೆ ಮಂದಿರದತ್ತಲೇ ಇವರ ಮನಸ್ಸು ಎಳೆಯುತ್ತಿತ್ತು. ಅವಕಾಶ ದೊರೆತಾಗಲೆಲ್ಲ ಭಜನಾ ಮಂದಿರದಲ್ಲಿ ಹಾಡು ಹೇಳುತ್ತಾ ಕಾಲ ಕಳೆಯುತ್ತಿದ್ದ ಅವರು ತನ್ನನ್ನು ಈವರೆಗೆ ಬೆಳೆಸಿದ್ದೇ ತನ್ನೂರಿನ ಭಜನಾಮಂದಿರ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ.

ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ತಾವು ಉತ್ತೀರ್ಣರಾದ ಬಗೆಯನ್ನು ಬಹಳ ರಸವತ್ತಾದ ತಮ್ಮ ಬಾಲ್ಯದ ನೆನಪಾಗಿ ತಿಮ್ಮರಾಜುರವರು ವಿವರಿಸುತ್ತಾರೆ. ಭಜನೆ ತಂಡದೊಂದಿಗೆ ಸೇರಿಕೊಂಡಿದ್ದ ಇವರಿಗೆ ತನ್ನ ಓದಿನ ಕಡೆಗೆ ಇದ್ದುದು ಬಹಳ ಕಡಿಮೆ ಆಸಕ್ತಿ. ಹೀಗಾಗಿ ಅವರು ಪರೀಕ್ಷೆಗೆ ಹೋಗುವುದನ್ನೇ ತಪ್ಪಿಸಿಕೊಂಡಿದ್ದರು. "ವಾಚ್ ತಂದುಕೊಟ್ಟರಷ್ಟೇ ಓದುತ್ತೇನೆ" ಎಂಬ ಹಠಮಾರಿತನವನ್ನು ತನ್ನ ಅಮ್ಮನೊಂದಿಗೆ ತೋರಿಸಿದ್ದರು. ಮನೆಯಲ್ಲಿ ಇದ್ದಿದ್ದೇ ಎರಡು ದೀಪ. ದನದ ಕೊಟ್ಟಿಗೆಯಲ್ಲಿ ಒಂದು. ಅಡುಗೆ ಮನೆಯಲ್ಲಿ ಇನ್ನೊಂದು. ಓದಲು ಕುಳಿತಲ್ಲಿ ದೀಪದ ಮೇಲೆ ತೂಕಡಿಸಿ ಬಿದ್ದು ತಲೆ

ಕೂದಲು ಸುಟ್ಟು ಹೋದುದನ್ನು ನೆನಪಿಸಿಕೊಳ್ಳುತ್ತಾರೆ. ಕಲಾಸಕ್ತಿಯನ್ನು ಬಾಲ್ಯದಿಂದಲೂ ರೂಢಿಸಿಕೊಂಡಿದ್ದ ತಿಮ್ಮರಾಜು ಅವರ ಅನುಭವದಲ್ಲಿ ಗಣಿತ ಮತ್ತು ಇಂಗ್ಲಿಷ್ ಕಬ್ಬಿಣದ ಕಡಲೆ. ಚನ್ನಪಟ್ಟಣದಲ್ಲಿ ಇದ್ದ ಡಿ.ಟಿ. ರಾಮು ಎಂಬ ಒಬ್ಬರು ಮೇಷ್ಟ್ರ ಕೈಯಿಂದ ಪಾಠ ಹೇಳಿಸಿಕೊಂಡು ಕೊನೆಗೂ ನಾಲ್ಕನೇ ಬಾರಿಗೆ ಎಸ್.ಎಸ್.ಎಲ್.ಸಿ. ಪಾಸು ಮಾಡಿಕೊಂಡ ನೆನಪು ಮಾಡಿಕೊಳ್ಳುತ್ತಾರೆ. ಒಟ್ಟಿನಲ್ಲಿ ಚಿಕ್ಕವರಿದ್ದಾಗಲೇ ಅವರ ಆಸಕ್ತಿ ಸಂಪೂರ್ಣವಾಗಿ ಹಾಡುಗಾರಿಕೆಯ ಮೇಲಿತ್ತು. ಇವರ ಸಂಗೀತಾಸಕ್ತಿಗೆ ಮುಖ್ಯ ಪ್ರೇರಣೆ ಅವರ ಊರಿನ ಹರಿಕಥೆ ಮೇಷ್ಟ್ರು ನಿಂಗಪ್ಪ. ಇವರು ಸ್ವತಃ ಅಪ್ಪಗೆರೆಯವರ ಚಿಕ್ಕಪ್ಪ. ಶನಿವಾರಗಳಂದು ಚಿಕ್ಕಪ್ಪ ಹರಿಕಥೆಗೆಂದು ಬೇರೆ ಊರುಗಳಿಗೆ ಹೋದಾಗಲೇ ತಿಮ್ಮರಾಜು ಅವರಿಗೆ ಹಾರ್ಮೋನಿಯಂ ದೊರಕುತ್ತಿದ್ದುದು. ಇಂಥ ಸಂದರ್ಭವನ್ನು ಬಳಸಿಕೊಂಡೇ ತಿಮ್ಮರಾಜು ಅವರು ಸಂಗೀತಾಭ್ಯಾಸ ರೂಢಿಸಿಕೊಂಡರು. ಅದು ಬಿಟ್ಟರೆ, ಸಂಗೀತ ಕಲಿಯಲು ಯಾವುದೇ ಇತರ ವ್ಯವಸ್ಥೆಯೂ ಅವರಿಗಿರಲಿಲ್ಲ. ತಮ್ಮ ಕೇರಿಯ ಜನಪದ ಗೀತೆಗಳು, ಭಜನೆ ಪದಗಳು, ಅಜ್ಜಿಯ ಹಾಡುಗಳು ತಿಮ್ಮರಾಜು ಅವರಿಗೆ ಸಂಗೀತ ಕಲಿಯಲು ದೊರೆತ ಗರಿಷ್ಠ ಅವಕಾಶಗಳು. ಹೀಗೆ ಇವರ ಬಾಲ್ಯದಲ್ಲಿ ಒಂದು ಕಡೆ ಸ್ವಚ್ಛಂದವಾದ ಸಾಂಸ್ಕೃತಿಕ ವಾತಾವರಣವಿದ್ದರೆ, ಇನ್ನೊಂದೆಡೆ ಮೂಲಭೂತ ಸೌಕರ್ಯಗಳಿಗೂ ಕೊರತೆಯಿತ್ತು.

"ದಯಮಾಡೋ ರಂಗ ದಯಮಾಡೋ
ದಯಾ ಮಾಡಯ್ಯ ನಿನ್ನ । ದಾಸರು ನಾವೆಂದು
ದಯಮಾಡೋ ....॥

ಎಂದು ಹಾಡಿಕೊಂಡು ಬಾಲ್ಯದಲ್ಲಿ ಅಂಟಿಕೆ–ಪಂಟಿಕೆಗೆಂದು ಕೇರಿಯೆಲ್ಲಾ ಓಡಾಡಿದ ಅನುಭವವನ್ನೂ ಇವರು ನೆನಪಿಸಿಕೊಳ್ಳುತ್ತಾರೆ. ಆರತಿ, ಕೊಳಲು ಮುಂತಾದವುಗಳನ್ನು ಹಿಡಿದು ಗರುಡಗಂಬ ದಾಸಯ್ಯನ ಹಾಗೆ ಒಂದಷ್ಟು ಜನ ಕೇರಿಯ ಹುಡುಗರೆಲ್ಲರ ಜೊತೆ ಸೇರಿಕೊಂಡು ಮನೆ–ಮನೆಗೆ ಹೋಗಿ ಭಿಕ್ಷೆ ಎತ್ತುವುದು ಇಲ್ಲಿಯ ಮುಖ್ಯವಾದ ಕ್ರಿಯೆ. ಕೇರಿಯ ಹೆಣ್ಣು ಮಕ್ಕಳು ದಾಸಯ್ಯಗಳು ಬಂದರೆಂದು ತಿಳಿದು ಭಯ, ಭಕ್ತಿ, ಗೌರವದಿಂದ ಕಾಲಿಗೆ ಬಿದ್ದು ಭಿಕ್ಷೆ ನೀಡುತ್ತಿದ್ದುದು ತಿಮ್ಮರಾಜು ಅವರಿಗೆ ವಿಶೇಷ ನೆನಪು. ವ್ಯಕ್ತಿಯೊಬ್ಬನ ಬಾಲ್ಯವು ಬಾಚಿಕೊಳ್ಳುವ ಅನುಭವಗಳು ಆತನ ಮುಂದಿನ ಅಭ್ಯುದಯಕ್ಕೆ ಕಾರಣವಾಗುವುದನ್ನು ನಾವು ಮಹಾನ್ ವ್ಯಕ್ತಿಗಳ ಜೀವನ ಚರಿತ್ರೆಯಿಂದ ಕಂಡುಕೊಳ್ಳಬಹುದಾಗಿದೆ. ಠಾಗೂರರ 'ನನ್ನ ಬಾಲ್ಯದ ದಿನಗಳು' , ಕುವೆಂಪುರವರ 'ನನ್ನ ಮನೆ', 'ಮರಿ ವಿಜ್ಞಾನಿ' ಮೊದಲಾದ ಸಂಕಲನಗಳು ಈ ಬಗೆಯ ಹಲವು ಚಿತ್ರಣಗಳನ್ನು ಕಟ್ಟಿಕೊಡುತ್ತವೆ.

೩. ಹಾಡುಗಾರನಾಗಲು ದೊರೆತ ಪ್ರೇರಣೆ ಹಾಗೂ ಅವಕಾಶಗಳು

ಚನ್ನಪಟ್ಟಣದಲ್ಲಿ ಪ್ರೌಢಶಾಲಾ ಶಿಕ್ಷಣವನ್ನು ಮುಗಿಸಿದ ಬಳಿಕ ತಿಮ್ಮರಾಜು ಅವರು ಬೆಂಗಳೂರಿಗೆ ಬಂದರು. ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಪದವಿಪೂರ್ವ ವಿದ್ಯಾಭ್ಯಾಸಕ್ಕೆಂದು ಸೇರಿಕೊಂಡರು. ಅಲ್ಲಿ ತಿಮ್ಮರಾಜುರವರಿಗೆ ತಮ್ಮ ಕಲಾಬದುಕನ್ನು ರೂಪಿಸಿಕೊಳ್ಳಲು ದಟ್ಟವಾದ ಅವಕಾಶಗಳು ಒದಗಿ ಬಂದವು. "ಬೆಂಗಳೂರು ಬೀದಿಯನ್ನು ಚಿತ್ರದಲ್ಲೂ ನೋಡದೇ ಇದ್ದವನು ಬೆಂಗಳೂರಿಗೆ ಬಂದೆ" ಎಂದು ತಿಮ್ಮರಾಜು ಬೆಂಗಳೂರಿನ ತಮ್ಮ ಆರಂಭಿಕ ದಿನಗಳನ್ನು ನೆನಪಿಸಿಕೊಳ್ಳುತ್ತಾರೆ. "ನನ್ನ ಚಿಕ್ಕಪ್ಪನ ಮಗ ಶಿವಲಿಂಗಯ್ಯ ಬಿ.ಎಸ್ಸಿ. ಡಿಗ್ರಿ ಓದಿ ಕ್ಲರ್ಕ್ ಆಗಿ ವಿಜಯನಗರದಲ್ಲಿ ಕೆಲಸ ಮಾಡುತ್ತಿದ್ದ. ಅವನ ಮನೆಯಲ್ಲಿ ನಾನು ಉಳಿದುಕೊಂಡಿದ್ದೆ. ಮೆಜೆಸ್ಟಿಕ್‌ನಿಂದ ವಿಜಯನಗರಕ್ಕೆ ೨೦ ಪೈಸೆ ಬಸ್ ದರ. ಆದರೆ ನಾನು ದುಡ್ಡು ಇಲ್ಲದೆ ನಡೆದೇ ಹೋಗುತ್ತಿದ್ದೆ. ನನ್ನ ಚಿಕ್ಕಪ್ಪನ ಮಗ, ಒಳ್ಳೆ ಭಿಕ್ಷುಕರ ತರಹ ಹಾಡ್ತಾ ಹೋಗ್ತೀಯ ಅಂಥ ಆಡಿಕೊಂಡಿದ್ದ. ಅವತ್ತು ನೋವಾಗಿದ್ದರೂ ಜನಪದ ಹಾಡುಗಳೇ ನನ್ನನ್ನು ಬೆಳೆಸೋದು ಅಂತ ತಿಳಿದೆ". ತಿಮ್ಮರಾಜುರವರು ಆರಂಭದಲ್ಲಿ ಅನುಭವಿಸಿದ ಈ ಬಗೆಯ ಸವಾಲುಗಳು ಅವರ ಅನಂತರದ ಬೆಳವಣಿಗೆಗಳಿಗೆ ಪೂರಕವಾದವು. ಸೆಂಟ್ರಲ್ ಕಾಲೇಜಿನಲ್ಲಿ ಪದವಿಪೂರ್ವ ಶಿಕ್ಷಣವನ್ನು ಮುಗಿಸಿ ನಂತರ ಸರ್ಕಾರಿ ಕಲಾ ಮತ್ತು ವಿಜ್ಞಾನ ಕಾಲೇಜಿನಲ್ಲಿ ಬಿ.ಎ. ಪದವಿ ಪಡೆದು ಜಿಯೋಗ್ರಫಿ ಹಾಗೂ ಜಾನಪದದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದರು. ಅಷ್ಟೇ ಅಲ್ಲದೇ ಎಂ.ಇಡಿ ಪದವಿಯನ್ನೂ ಕನ್ನಡ ಸಾಹಿತ್ಯ ಪರಿಷತ್ತಿನಿಂದ 'ಜಾನಪದ' ಡಿಪ್ಲೊಮಾವನ್ನು ಪಡೆದರು. ಸೆಂಟ್ರಲ್ ಕಾಲೇಜಿನಲ್ಲಿ ಲಂಕೇಶ್, ಜಿ.ಪಿ.ರಾಜರತ್ನಂ, ಶಿವರುದ್ರಪ್ಪ ಮೊದಲಾದವರೊಂದಿಗೆ ಬೆರೆಯುವ, ಅವರ ಚಿಂತನೆಗಳನ್ನು ಆಲಿಸುವ ಅವಕಾಶ ದೊರೆತುದುದು ಒಂದು ಅಪೂರ್ವವಾದ ಅನುಭವವೆಂದು ತಿಮ್ಮರಾಜು ಹೇಳುತ್ತಾರೆ.

ಸೆಂಟ್ರಲ್ ಕಾಲೇಜಿನ ವಾತಾವರಣ ಸಾಂಸ್ಕೃತಿಕವಾಗಿ ಹಲವು ಮಹತ್ವದ ಬೆಳವಣಿಗೆಗಳನ್ನು ತಿಮ್ಮರಾಜು ಅವರ ಬದುಕಿನಲ್ಲಿ ಮೂಡಿಸಿದೆ. "ಲಂಕೇಶ್‌ರಂಥ ವ್ಯಕ್ತಿಗಳನ್ನು ಕಂಡಾಗಲೆಲ್ಲ ನನಗೆ ಸಾಧನೆಯ ಕುರಿತು ಅಪಾರವಾದ ಎಚ್ಚರ ಮೂಡುತ್ತಿತ್ತು" ಎನ್ನುತ್ತಾರೆ. ಪಿ.ಯು.ಸಿ. ಹಂತದಲ್ಲಿ ಇರುವಾಗಲೇ ಶಾಲಾ ಕಾಲೇಜುಗಳಲ್ಲಿ ಜನಪದ ಗೀತೆಗಳನ್ನು ಹಾಡಿ ವಿದ್ಯಾಭ್ಯಾಸಕ್ಕೆ ಹಣ ಹೊಂದಿಸಿಕೊಳ್ಳುತ್ತಿದ್ದರು. ಆ ಕಾಲಘಟ್ಟದ ಒಂದು ಅನುಭವವನ್ನು ಅವರು ಹೀಗೆ ಹಂಚಿಕೊಳ್ಳುತ್ತಾರೆ. "ಎಸ್.ಜಿ.ಆರ್. ಕಾಲೇಜಿನಲ್ಲಿ ನಡೆದ ಸ್ಪರ್ಧೆ. ನಾನು ಕೊನೆಯ ಸಾಲಿನಲ್ಲಿ ಕುಳಿತಿದ್ದೆ. ಒಂದು ಬಿಳಿ ಪೈಜಾಮ, ಜುಬ್ಬ, ಎಲ್ಲರೂ ಬಂದು ಜನಪದ ಗೀತೆಗಳನ್ನು ಹಾಡಿ ಹೋದ್ರು. ನಾನು ಮಾತ್ರ ಕೊನೆಯದಾಗಿ ಹೋಗಿ ಹಾಡಿದೆ.

ಬೆಳ್ಳನೆ ಎರಡೆತ್ತು । ಬೆಳ್ಳಿಯ ಬಾರುಗೋಲು
ಬಂಗಾರದ ಸೆಡ್ಡೆ ಬಲಗೈಲಿ । ಹಿಡಿಕೊಂಡು
ಹೊನ್ನ ಬಿತ್ತ್ಯಾರೋ ಹೊಳಿಸಾಲ॥
ಕರಿ ಎತ್ತು ಕಾಳಿಂಗ। ಬಿಳಿ ಎತ್ತು ಮಾಲಿಂಗ
ಸರದಾರ ನನ್ನೆತ್ತು ಸಾರಂಗ। ಬರುವಾಗ
ಭೂ ಮಂಡಲವೆಲ್ಲಾ ನಡುಗಿತೋ ॥
ಆ ವರ್ಷ ಅಂಗಾತು । ಈ ವರುಷ ಹಿಂಗಾತು
ಮುಂದಿನ ವರುಷ ಬೆಳೆ ಬರಲು ಬಸವಣ್ಣ
ಬಂಗಾರದ ಕೊಳ್ಳಿಗೆ ಸಿರಿಗೆಜ್ಜೆ ॥

ಅದು ಪಕ್ಕಾ ಹಳ್ಳಿಯ ಹಾಡಾದ ಕಾರಣ, ಯಾರೂ ನನ್ನ ಹಾಡನ್ನು ಅಷ್ಟೊಂದು ಗಮನಿಸಲಿಲ್ಲ ಎಂದೇ ನನ್ನ ಭಾವನೆ. ಅಲ್ಲಿ ಇದ್ದ ಯಾರೂ ನನ್ನ ಮುಖ ನೋಡಲಿಲ್ಲ. ನಾನು ಬೇರೆ ಒಳ್ಳೆ ಆಫ್ರಿಕಾದವನ ಹಾಗೆ ಕಾಣ್ತಾ ಇದ್ದೆ. ಬಹುಮಾನ ಬರುವುದಿಲ್ಲ ಎಂದು ಎದ್ದು ಹೊರಡುವವನಿದ್ದೆ. ಆದರೆ ಕೊನೆಗೂ ಬಹುಮಾನ ಯಾರಿಗೆ ಬಂದಿದೆ ಎಂದು ತಿಳಿಯೋಣ ಎಂದು ಅಲ್ಲಿಯೇ ಕುಳಿತೆ. ನಾಲ್ಕನೇ ಬಹುಮಾನವನ್ನು ಓದಿದರು. ಮೂರನೆಯ ಬಹುಮಾನವನ್ನು ಪಡೆದವರ ಹೆಸರು ಕೂಗಿದರು. ಎರಡನೆಯ ಬಹುಮಾನ ಪಡೆದವರ ಹೆಸರನ್ನು ಹೇಳಿದರು. ಕೊನೆಗೆ ಮೊದಲನೆಯ ಬಹುಮಾನವನ್ನು ಪಡೆದವರು 'ಅಪ್ಪಗೆರೆ ತಿಮ್ಮರಾಜು' ಎಂದು ಜೋರಾಗಿ ಓದಿದರು. ನನಗದು ಬಹಳ ಸಂತೋಷದ ಗಳಿಗೆಯಾಗಿತ್ತು. ಅಪ್ಪಗೆರೆಯವರು ಮೊದಲಿನಿಂದಲೂ ಮೂಲ ಜನಪದ ಸಾಹಿತ್ಯಕ್ಕೆ ಆದ್ಯತೆ ನೀಡಿ ಹಾಡುಗಳನ್ನು ಹಾಡಲು ತೊಡಗಿದವರು. ಈ ಸ್ಪರ್ಧೆಯೂ ಅದೇ ಕಾರಣಕ್ಕಾಗಿ ತಿಮ್ಮರಾಜು ಅವರಿಗೆ ಪ್ರಥಮ ಬಹುಮಾನವನ್ನು ತಂದು ಕೊಟ್ಟಿತು. ಪದವಿಪೂರ್ವ ಶಿಕ್ಷಣದ ಸಮಯದಲ್ಲಿ, ಮಧ್ಯಾಹ್ನದವರೆಗೆ ಕಾಲೇಜಿನಲ್ಲಿದ್ದುಕೊಂಡು, ಉಳಿದ ಸಮಯದಲ್ಲಿ ಅರೆಕಾಲಿಕ (part time)ವಾಗಿ ಬೆಂಗಳೂರಿನ ಮೈಸೂರು ಸ್ಯಾಂಡಲ್ ಫ್ಯಾಕ್ಟರಿಯಲ್ಲಿ ದುಡಿಯುತ್ತಿದ್ದುದು ಅಪ್ಪಗೆರೆ ಬದುಕಿನ ಇತಿಹಾಸ. ಊರಿಂದ ತಂದೆಯವರು ಓದಿಗಾಗಿ ತಿಂಗಳಿಗೆ ಏಳು ರೂಪಾಯಿಗಳನ್ನು ಮನಿ ಆರ್ಡರ್ ಮಾಡುತ್ತಿದ್ದರೂ ಬೆಂಗಳೂರಿನ ದುಬಾರಿ ಬದುಕಿಗೆ ಸ್ವತಃ ತಿಮ್ಮರಾಜುರವರ ದುಡಿಮೆಯೂ ಅಗತ್ಯವಿತ್ತು.

ತಿಮ್ಮರಾಜು ಅವರ ಬದುಕು ಹಲವು ಎಡರು ತೊಡರುಗಳನ್ನು ಎದುರಿಸಿಕೊಂಡೇ ಬಂದಿದೆ. ಆದರೆ ಸಂಗೀತ ಅವರ ಗಟ್ಟಿತನವನ್ನು ಕಾಯ್ದುಕೊಳ್ಳುವಲ್ಲಿ ಕಾರಣವಾಗಿದೆ ಎಂಬುದು ಅವರದೇ ಮಾತು. ಕಾಳೇಗೌಡ ನಾಗವಾರ ಅವರೊಂದಿಗಿನ ಬಾಂಧವ್ಯವನ್ನು ತಿಮ್ಮರಾಜು ಪ್ರೀತಿಯಿಂದ ನೆನೆಯುತ್ತಾರೆ. "ನಮ್ಮಿಬ್ಬರದು ಒಬ್ಬರನ್ನೊಬ್ಬರು ಅಗಲದೇ ಇರುವಷ್ಟು ಗೆಳೆತನ. ಕಾಳೇಗೌಡರು ಬೆಂಗಳೂರು ವಿಶ್ವವಿದ್ಯಾಲಯದಿಂದ ಆಗ ತಾನೇ

ಮೈಸೂರು ವಿಶ್ವವಿದ್ಯಾಲಯಕ್ಕೆ ವರ್ಗವಾಗಿ ಹೋದ ಸಂದರ್ಭ. ನನಗೂ ಇದೊಂದು ಅಪರೂಪದ ಅವಕಾಶವನ್ನು ಒದಗಿಸಿತು. ಕಾಳೇಗೌಡರು ಬೇರೆ ಬೇರೆ ಶಾಲಾ-ಕಾಲೇಜುಗಳಿಗೆ ಹೋಗಿ ಜಾನಪದಕ್ಕೆ ಸಂಬಂಧಿಸಿದಂತೆ ಕಾರ್ಯಕ್ರಮಗಳನ್ನು ನೀಡುತ್ತಿದ್ದರು. ಒಂದು ದಿನ ತಮ್ಮ ಜೊತೆಯಲ್ಲಿ ಕರೆದೊಯ್ದು ನನ್ನನ್ನು ಸಭೆಗೆ ಪರಿಚಯಿಸುತ್ತಾ, 'ಇವತ್ತು ಒಬ್ಬ ಒಳ್ಳೆಯ ಕಲಾವಿದರು ಬಂದಿದ್ದಾರೆ. ಅವರ ಹಾಡು ಕೇಳಲೇಬೇಕು' ಎಂದು ನನಗೊಂದು ಹೊಸ ವೇದಿಕೆಯನ್ನು ಒದಗಿಸಿಕೊಟ್ಟರು. ಅಲ್ಲಿಂದ ನನ್ನ ಜನಪದ ಗೀತೆಗಳ ಗಾಯನ ಪ್ರತಿಭೆಗೆ ವಿಶೇಷವಾದ ಅವಕಾಶಗಳು ದೊರೆತವು". ಬೆಂಗಳೂರಿನಿಂದ – ಮೈಸೂರಿಗೆ ಒಂದೂವರೆ ರೂಪಾಯಿ ಬಸ್ ದರ ಇದ್ದ ಆ ಕಾಲವನ್ನು ತಿಮ್ಮರಾಜು ನೆನಪಿಸಿಕೊಳ್ಳುತ್ತಾರೆ. ಕಂಸಾಳೆ ಮಹದೇವಯ್ಯನಂಥ ಮಹಾನ್ ಜನಪದ ಕಲಾವಿದರ ಪರಿಚಯವಾಗಿ ಅವರಿಂದ ಕಂಸಾಳೆ ಕಲಿಯುವ ಅವಕಾಶವೂ ತಿಮ್ಮರಾಜು ಅವರಿಗೆ ದೊರೆಯಿತು. "ಕಂಸಾಳೆ ಮಹದೇವಯ್ಯನವರು ಬಹಳ ಎತ್ತರದ ಆಳು. ಅವರು ಬೀಸು ಕಂಸಾಳೆ ಆಡ್ತ ಇದ್ದರೆ, ಆಕಾಶದ ಮೋಡಗಳೂ ಒಡೆದು ಹೋಗಬೇಕು ಅನ್ನುವಷ್ಟರಮಟ್ಟಿಗೆ, ಮಹದೇವಯ್ಯ ದೊಡ್ಡ ಕಲಾವಿದರಾಗಿದ್ದರು. ಅವರ ಕೈಯಿಂದ ಕಂಸಾಳೆ ಕಲಿಯುವುದೇ ಒಂದು ಮಹಾ ಅನುಭವವಾಗಿತ್ತು" ಎಂಬುದು ತಿಮ್ಮರಾಜು ಅವರ ಅನುಭವದ ಮಾತುಗಳು. ಜೀ.ಶಂ.ಪರಮಶಿವಯ್ಯನವರೂ "ಚೆನ್ನಾಗಿ ಹಾಡ್ತೀಯ" ಎಂದು ಹುರಿದುಂಬಿಸುತ್ತಿದ್ದುದು, ತಾನು ಕಲಾವಿದನಾಗಿ ಬೆಳೆಯಲು ಪ್ರೋತ್ಸಾಹಕವಾಯಿತು ಎಂದು ತಿಮ್ಮರಾಜು ನೆನಪಿಸಿಕೊಳ್ಳುತ್ತಾರೆ.

ಲಂಕೇಶ್, ಡಿ.ಆರ್.ಎನ್‌ರಂಥವರು ನೀಡಿದ ಪ್ರೋತ್ಸಾಹವನ್ನೂ ತಿಮ್ಮರಾಜು ಸದಾ ಸ್ಮರಿಸುತ್ತಾರೆ. ಅವಮಾನವನ್ನು ಸವಾಲಾಗಿ ಸ್ವೀಕರಿಸಬೇಕೆಂಬುದು ಬದುಕು ತಿಮ್ಮರಾಜುವಿಗೆ ಕಲಿಸಿದ ಪಾಠ. ಅಪ್ಪಗೆರೆ ತಮ್ಮ ಸಾಧನೆಗೆ ಪ್ರೋತ್ಸಾಹಿಸಿದವರ ದೊಡ್ಡ ಪಟ್ಟಿಯನ್ನೇ ಹೇಳುತ್ತಾರೆ. ಜೀ.ಶಂ.ಪ, ಕಾಳೇಗೌಡ ನಾಗವಾರ, ಬರಗೂರು ರಾಮಚಂದ್ರಪ್ಪ, ಕಂಬಾರ, ಸಿದ್ಧಲಿಂಗಯ್ಯ, ಲಂಕೇಶ್, ದೇವನೂರು ಮಹಾದೇವ, ಅಗ್ರಹಾರ ಕೃಷ್ಣಮೂರ್ತಿ, ಎನ್.ಹನುಮಂತಯ್ಯ, ಶೂದ್ರ ಶ್ರೀನಿವಾಸ್, ಅಂಬಳಿಕೆ ಹಿರಿಯಣ್ಣ, ಯು.ಆರ್. ಅನಂತಮೂರ್ತಿ, ಗೊ.ರು. ಚನ್ನಬಸಪ್ಪ, ಕೇಶವರೆಡ್ಡಿ ಅಂದ್ರಾಳೆ, ಪಿ.ಕೆ. ರಾಜಶೇಖರ, ಬಾನಂದೂರು ಕೆಂಪಯ್ಯ, ಪ್ರೊ. ಬಿ.ಎ. ವಿವೇಕ ರೈ ಇವರುಗಳನ್ನು ತಮ್ಮ ಬೆಳವಣಿಗೆಯ ಹಿನ್ನೆಲೆಯಲ್ಲಿ ಅಪ್ಪಗೆರೆ ನೆನಪಿಸಿಕೊಳ್ಳುತ್ತಾರೆ. ಮಾತ್ರವಲ್ಲದೇ ಭರತಾದ್ರಿ, ಹಿ.ಚಿ. ಬೋರಲಿಂಗಯ್ಯ, ಶ್ರೀಗಂಧ ಶ್ರೀನಿವಾಸಮೂರ್ತಿ, ಮಲ್ಲಿಕಾ ಘಂಟಿ, ಸರಜೂ ಕಾಟ್ಕರ್, ಜೆ. ಸೋಮಣ್ಣ, ಕರೀಗೌಡ ಬೀಚನಹಳ್ಳಿ, ಕೆ.ಬಿ.ಸಿದ್ದಯ್ಯ, ಲಕ್ಷ್ಮೀನಾರಾಯಣ ನಾಗವಾರ, ಡಾ.ಶೇಖರ್, ಎಂ.ಜಿ. ಈಶ್ವರಪ್ಪ, ವೈ.ಕೆ. ಮುದ್ದುಕೃಷ್ಣ, ಡಾ.

ಸೆಲ್ವಿ, ಕಿಕ್ಕೇರಿ ಕೃಷ್ಣಮೂರ್ತಿ, ಆರ್.ಕೆ. ನಾಗರಾಜ್, ಮುಕುಂದರಾಜ್, ಎಚ್.ಎಲ್.ಪುಷ್ಪ, ಜರಗನಹಳ್ಳಿ ಶಿವಶಂಕರ್, ಹನುಮಂತ ರಾಯಪ್ಪ (ವಕೀಲರು), ಮುದೇನೂರು ಸಂಗಣ್ಣ, ಬೈರಮಂಗಲ ರಾಮೇಗೌಡ, ನಲ್ಲೂರು ಪ್ರಸಾದ್, ಕಮಲಾ ಹಂಪನಾ, ಹಂಪಾ ನಾಗರಾಜಯ್ಯ, ಡಾ. ಬಸವರಾಜ ಸಬರದ, ಜಗನ್ನಾಥ ಹೆಬ್ಬಾಳೆ, ಶ್ರೀಪಾದ ಶೆಟ್ಟಿ ಹೀಗೆ ಹಲವಾರು ವ್ಯಕ್ತಿಗಳು ತನ್ನ ಸಾಧನೆಗೆ ಪ್ರೇರಕವಾಗಿರುವುದನ್ನು ತಿಮ್ಮರಾಜು ಸ್ಮರಿಸುತ್ತಾರೆ.

೪. ಬದುಕು: ಬವಣೆ– ಉದ್ಯೋಗ

ಅಪ್ಪಗೆರೆಯವರು ಪದವಿಪೂರ್ವ ಶಿಕ್ಷಣವನ್ನು ಪಡೆಯುತ್ತಿರುವ ಸಂದರ್ಭದಲ್ಲಿಯೇ ಗಳಿಕೆಯ ಹಾದಿಯನ್ನು ರೂಢಿಸಿಕೊಂಡವರು. ಮನೆಯ ಆರ್ಥಿಕ ಸ್ಥಿತಿ ಇದಕ್ಕೆ ಕಾರಣ. ಮೊದಲೇ ತಿಳಿಸಿದಂತೆ, ತಂದೆಯವರು ತಿಂಗಳ ಖರ್ಚಿಗೆಂದು ಕಳುಹಿಸುತ್ತಿದ್ದ ಏಳು ರೂಪಾಯಿಗಳು ಸಾಕಾಗದೆ, ತಾನೇ ಸ್ವತಃ ಬೆಂಗಳೂರಿನ ಮೈಸೂರು ಸ್ಯಾಂಡಲ್ ಫ್ಯಾಕ್ಟರಿಯಲ್ಲಿ ಅರೆಕಾಲಿಕ ಕೆಲಸವನ್ನು ಮಾಡಿದರು. ಇವರು ತಮ್ಮ ಎಂ.ಎ., ಎಂ.ಇಡಿ. ಶಿಕ್ಷಣವನ್ನು ಪೂರೈಸಿದ ನಂತರ, ವಾರ್ತಾ ಇಲಾಖೆಯಲ್ಲಿ ಮತ್ತೆ ಅರೆಕಾಲಿಕ ಕೆಲಸವೊಂದನ್ನು ನಿರ್ವಹಿಸಬೇಕಾಯಿತು. ವಾರ್ತಾ ಇಲಾಖೆಯ 'ಸಂಗೀತ ಮತ್ತು ನಾಟಕ' ವಿಭಾಗದಲ್ಲಿ ಸಂಗೀತದ ಮೇಷ್ಟ್ರಾಗಿ ೨೫ ರೂಪಾಯಿ ಸಂಬಳಕ್ಕೆ ಸೇರಿಕೊಂಡರು. ಅಲ್ಲಿ ಅವರ ಕೆಲಸ ಹಳ್ಳಿ–ಹಳ್ಳಿಗೆ ಹೋಗಿ ಬೇರೆ ಬೇರೆ ಸಾಂಸ್ಕೃತಿಕ ಚಟುವಟಿಕೆಗಳ ಮೂಲಕವಾಗಿ ಜನಸಾಮಾನ್ಯರಿಗೆ ಸರ್ಕಾರದ ಯೋಜನೆಗಳನ್ನು ತಲುಪಿಸುವುದಾಗಿತ್ತು. ಅಲ್ಲಿ ಅಪ್ಪಗೆರೆಯವರಿಗೆ ತಮ್ಮ ಪ್ರತಿಭೆಯನ್ನು ಅನಾವರಣಗೊಳಿಸಲು ಅವಕಾಶವಾಯಿತು. ಸಿ.ಆರ್.ಸಿಂಹ ಅವರು ಇವರೊಂದಿಗಿದ್ದರು. ಸರ್ಕಾರದ ಯೋಜನೆಗಳನ್ನು ಜಾಹೀರಾತು (Advertisement)ಗಳ ಮೂಲಕವಾಗಿ ಪ್ರಚಾರಪಡಿಸಿ ಜನರಲ್ಲಿ ಸಾಮಾಜಿಕವಾಗಿ ಇರಬೇಕಾದ ಜವಾಬ್ದಾರಿಗಳ ಕುರಿತು ಎಚ್ಚರ ಮೂಡಿಸುವ ಈ ಕೆಲಸ ಇವರಿಗೆ ವಿಶೇಷವಾದ ಅನುಭವವನ್ನು ನೀಡಿತು. ಇದೇ ಸಂದರ್ಭದಲ್ಲಿ ಕೊಡಗಿನಲ್ಲಿ ಶ್ರೀಮಂಗಲ ಕಾಲೇಜಿನಲ್ಲಿ ಉಪನ್ಯಾಸಕರ ಹುದ್ದೆಗೆ ಅರ್ಹ ಅಭ್ಯರ್ಥಿಗಳಿಗೆ ಆಹ್ವಾನ ಬಂದಿತ್ತು. ಅಪ್ಪಗೆರೆಯವರು ಅಲ್ಲಿ ಉಪನ್ಯಾಸಕರಾಗಿ ಆಯ್ಕೆಯಾದರು. ಆ ಮೂಲಕ ಶಿಕ್ಷಕ ವೃತ್ತಿಯನ್ನು ಆರಂಭಿಸಿದರು. ಆದರೆ ಅಲ್ಲಿಯ ಪ್ರಾಂಶುಪಾಲರು "ನಿನ್ನ ಕಲೆಯನ್ನು ಬಿಟ್ಟು ಬಿಡಬೇಕಲ್ಲ?" ಎಂದು ತಿಮ್ಮರಾಜು ಅವರಿಗೆ ಸಂಗೀತ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದಕ್ಕೆ ಅಡ್ಡಿಮಾಡಿದರು. ಮಾತ್ರವಲ್ಲ ಕೊಡಗಿನ ಅತಿಯಾದ ಮಳೆಯಿಂದಾಗಿ ಕಾರ್ಯಕ್ರಮಕ್ಕೆಂದು ಬೆಂಗಳೂರಿಗೆ ಹೋಗಿ ಬರುವುದು ಇವರಿಗೆ ಅಸಾಧ್ಯವೆನಿಸಿತು. ಆದರೂ ಸ್ವಲ್ಪ ಕಾಲ ಅಲ್ಲಿ ಸೇವೆ ಸಲ್ಲಿಸಿದರು. ಅಲ್ಲಿ ಉತ್ತಮ ವೇದಿಕೆಯಿಲ್ಲವೆಂಬುದು ಅವರಿಗೆ ಮನವರಿಕೆಯಾಯಿತು. "ಹೊಟ್ಟೆಯೊಳಗಿನ ಹಾಡ ಬಿಟ್ಟುಬಿಡಲೇ ಸುಮ್ಮನೆ, ಹಾಡಿ ತೀರಿಸಬೇಕಲ್ಲ ಕಲಿತ ಋಣವ?" ಎಂದು ತನ್ನನ್ನು ತಾನೇ ಸಮಾಧಾನಿಸಿಕೊಂಡು ಕೊನೆಗೆ ಕೊಡಗನ್ನು ಬಿಟ್ಟರು. ಅಲ್ಲಿಂದ ಮತ್ತೆ ಬೆಂಗಳೂರಿಗೆ ಬಂದು ಬಿ.ಟಿ. ಲಕ್ಷ್ಮಣಗೌಡ ಪದವಿಪೂರ್ವ ಕಾಲೇಜು ಬೊಮ್ಮಸಂದ್ರದಲ್ಲಿ ಅಧ್ಯಾಪಕರಾಗಿ ಕೆಲಸಕ್ಕೆ ಸೇರಿದರು. ಸುಮಾರು ಒಂಭತ್ತು ವರುಷಗಳ ಕಾಲ ಅಪ್ಪಗೆರೆಯವರ ಸೇವೆ ಲಕ್ಷ್ಮಣಗೌಡ ಕಾಲೇಜಿಗೆ ಸಂದಿತು. ಇಷ್ಟರಲ್ಲೇ ಕರ್ನಾಟಕ ಪಬ್ಲಿಕ್ ಸರ್ವೀಸ್ ಕಮಿಷನ್‌ನವರು ನಡೆಸಿದ ಪ್ರವೇಶ(Entrance) ಪರೀಕ್ಷೆಯಲ್ಲಿ ಇವರು

ಉತ್ತೀರ್ಣರಾದರು. ಈ ಹೊತ್ತಿಗಾಗಲೇ ಅಪ್ಪಗೆರೆ 'ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ'ಯ ಸದಸ್ಯರಾಗಿದ್ದರು. ಕೆ.ಪಿ.ಎಸ್.ಸಿ ಕಛೇರಿಯಲ್ಲಿ ತಾವು ಎದುರಿಸಿದ ಮೌಖಿಕ ಪರೀಕ್ಷೆಯ ಅನುಭವವನ್ನು ಅಪ್ಪಗೆರೆ ಹೀಗೆ ತೆರೆದಿಡುತ್ತಾರೆ. "ನಾನು ಕೆ.ಪಿ.ಎಸ್.ಸಿ. ಕಛೇರಿಗೆ ಹೋದಾಗ ಅಲ್ಲಿದ್ದವರೆಲ್ಲ ನನ್ನನ್ನು ಏನೆಂದು ಭಾವಿಸಿದರೋ ಗೊತ್ತಿಲ್ಲ. ನನಗೆ ಕೆಲಸದ ಅನಿವಾರ್ಯತೆ ಬಹಳ ಇತ್ತು. ಅಲ್ಲಿ ಕೆಲವು ಪ್ರಶ್ನೆಗಳನ್ನು ಕೇಳಿದರು. ಉತ್ತರಿಸಿದೆ. ನಾನು ನಂಬಿದ್ದು ಹಾಡನ್ನು ಮಾತ್ರ. ಇದೊಂದು ಒಳ್ಳೆಯ ಅವಕಾಶವೆಂದು ತಿಳಿದೆ.

ತಿಂಗಾಳು ಮುಳುಗಿದವೋ ರಂಗೋಲೆ ಬೆಳಗಿದವೊ
ತಾಯಿ ಚೌಡವ್ವನ ಪೂಜೆಗೆಂದು ಬಾಳೆ ಬಾಗಿದವೊ॥
ಮಾಯ್ಕಾತಿ ಚೌಡವ್ವ ಮಂಡೆಲ್ಲಿ ಒದರೀರಿ
ಮದ್ದೂರಿಂದಾಚೆ ಮಳವಳ್ಳಿ – ತೋಪಲ್ಲಿ
ಹೂಕಂಡು ಮಂಡೆ ಅಲ್ಲೆ ಒದರುವರು॥
ಕರಿಯ ಕಡ್ಡಿಸೀರೆ ನೆರಿಗೆ ಚಿನ್ನದ ಕುಣಿಕೆ
ನಡೆಮಡಿಯ ಮ್ಯಾಲೆ ಬರುವವಳೆ – ಚೌಡವ್ವ
ದೊರೆ ಎದ್ದು ಕೈಯ ಮುಗಿದರು॥
ಕನ್ನಕನ್ನಡಿ ಬಂದೊ ಕಂಚಿನ ಹೆಬ್ಬರೆ ಬಂದೊ
ಸಣ್ಣೇರಿ ಮ್ಯಾಲೆ ಮಡಿ ಬಂದೊ – ಚೌಡವ್ವ
ನಿಮ್ಮ ಮಡಿಯ ತೆಗೆಯೋದು ಬೆಳಗಾದೊ॥
ಕೊಂಡ ಕೊಳನಾದ ಕೆಂಡತವರಾದ
ಕೊಂಡಕ್ ಬಂದ್ ಸೌದೆ ಚಿಗುರೊಡೆದು – ಚೌಡವ್ವ
ನಿಮ್ಮ ಕೊಂಡ ನಾಳೆಂದು ದಯದಾಗೆ॥
ಪಿಲ್ಲಿ ಕಾಲಿನವಳೆ ಪಿರಿಯ ಪಟ್ಟಣದವಳೆ
ಕಲ್ಲಿನ ಮ್ಯಾಲೆ ಕಾಲ ತೊಳೆಯುವಳೆ – ಚೌಡವ್ವ
ನಿಮ್ಮ ಪಿಲ್ಲೀಯ ಸರಕೆ ಬೆಲೆ ಹೇಳೆ ಬಾಳೆ ಬಾಗಿದವೋ॥

ಎಂದು ಎತ್ತರದ ದನಿಯಲ್ಲಿ ಹಾಡಿದೆ. ಹಾಡು ಮುಗಿಯುವಷ್ಟರಲ್ಲಿ ಕೆಲಸ ಮಾಡುತ್ತಿದ್ದ ಅಲ್ಲಿನ ಕೆಲವು ಸಿಬ್ಬಂದಿಗಳು ಅಲ್ಲಿ ಬಂದು ನೆರೆದಿದ್ದರು. ಪರೀಕ್ಷಾ ಕೊಠಡಿಯಿಂದ ಹೊರಬಂದಾಗ ನನ್ನೊಡನೆ ಪರೀಕ್ಷೆಯನ್ನು ಎದುರಿಸಲು ಬಂದವರ ಮುಖದಲ್ಲಿ ಇದ್ದ ಪ್ರಶ್ನಾರ್ಥಕ ಭಾವ ನನಗೆ ಅರ್ಥವಾಗದೇ ಹೋಗಲಿಲ್ಲ. ನಾನೂ ಅಂಥಾ ನಿರೀಕ್ಷೆಯನ್ನೇನೂ ಇಟ್ಟುಕೊಂಡಿರಲಿಲ್ಲ. ಆದರೆ ಫಲಿತಾಂಶ ಬಂದಾಗ ೧೫೦ ಕ್ಕೆ ೧೪೫ ಅಂಕಗಳೊಂದಿಗೆ ನಾನೇ ಎಲ್ಲರಿಗಿಂತಲೂ ಮೊದಲಿದ್ದೆ. ಕೊನೆಗೂ ಸರ್ಕಾರಿ ಕೆಲಸ ದಕ್ಕಿಸಿಕೊಂಡೆ" ಎನ್ನುತ್ತಾರೆ. ಸರ್ಕಾರಿ ಕೆಲಸ ದೊರೆತ ಪ್ರಾರಂಭದಲ್ಲಿ ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನ ಬಾಗಲವಾಡದಲ್ಲಿ ಹೈಸ್ಕೂಲ್ ಮುಖ್ಯೋಪಾಧ್ಯಾಯರಾಗಿ ಸೇವೆ ಪ್ರಾರಂಭಿಸಿದರು. ರಾಜಧಾನಿಯಿಂದ

ಬಹಳಷ್ಟು ದೂರ ಹೋಗಿ ನೆಲೆಸಲು ಇಚ್ಛೆಯಿಲ್ಲದುದರಿಂದ ಸುಮಾರು ಆರು ತಿಂಗಳಿನಲ್ಲಿ ಮತ್ತೆ ಬೆಂಗಳೂರಿಗೆ ವಾಪಾಸಾದರು. ಬೆಂಗಳೂರಿನಲ್ಲಿ 'ಜಿಲ್ಲಾ ಶಿಕ್ಷಣ ಹಾಗೂ ತರಬೇತಿ ಸಂಸ್ಥೆ (DIET)'ಗೆ ಅಧ್ಯಾಪಕರಾಗಿ ವರ್ಗವಾದರು. ಇಂದಿಗೂ ಇದೇ ಸಂಸ್ಥೆಯಲ್ಲಿ ಅಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಬೆಂಗಳೂರಿಗೆ ವಾಪಾಸಾದಲ್ಲಿಂದ ತಿಮ್ಮರಾಜು ಅವರು ತಮ್ಮ ಜನಪದ ಹಾಡುಗಾರಿಕೆಯನ್ನು ಎಲ್ಲೂ ನಿಲ್ಲದ ಹಾಗೆ ಕಾಯ್ದುಕೊಂಡಿದ್ದಾರೆ.

ತಿಮ್ಮರಾಜು ತಾವು ಓದುತ್ತಿದ್ದ ಕಾಲದಿಂದಲೂ ಸ್ವತಂತ್ರವಾಗಿ ತಮ್ಮ ಬದುಕನ್ನು ನಡೆಸಿಕೊಂಡು ಬಂದವರು. ತಮ್ಮ ಜೀವನದ ಸಂತಸವನ್ನು ಸಂಗೀತದ ಮೂಲಕವಾಗಿ ಕಂಡುಕೊಂಡವರು. ಹೀಗಾಗಿ, ಅವರು ತಮ್ಮ ವೈವಾಹಿಕ ಬದುಕಿನ ಕುರಿತು ಬಹುಕಾಲದವರೆಗೆ ಚಿಂತಿಸಲೇ ಇಲ್ಲ ಎಂಬುದನ್ನು ತಾವೇ ಹೇಳಿಕೊಳ್ಳುತ್ತಾರೆ. ಕೆಲಸ ಹುಡುಕಿಕೊಂಡು ಕೊಡಗಿಗೆ ಹೋದಾಗಲೇ ತಿಮ್ಮರಾಜು ಬದುಕಿನಲ್ಲಿ ಹೊಸದೊಂದು ಪರಿವರ್ತನೆಯಾಯಿತು. ಶ್ರೀಮಂಗಲ ಕಾಲೇಜಿನಲ್ಲಿ ಕೆಲಸ ಮುಂದುವರೆಸುವುದು ಅಸಾಧ್ಯವಾದಾಗ, ಶುಂಟಿಕೊಪ್ಪದಲ್ಲಿದ್ದ ಸ್ನೇಹಿತರೊಬ್ಬರ ಶಾಲೆಗೆ ಮುಖ್ಯೋಪಾಧ್ಯಾಯರಾಗಿ ಹೋಗಿದ್ದರು. ಈ ಸಂದರ್ಭದಲ್ಲಿ ಯಾರೋ ಹಿತೈಷಿಗಳಿಂದ ಕುಶಾಲನಗರದಲ್ಲಿ ತಮಗೆ ಸರಿಹೊಂದುವ ಹೆಣ್ಣು ಇರುವ ವಿಚಾರವನ್ನು ತಿಳಿದರು. "ಅದು ಕುಶಾಲನಗರದಲ್ಲಿನ ಹೆಬ್ಬಾಲೆ ಎನ್ನುವ ಒಂದು ಹಳ್ಳಿ. ಸ್ನೇಹಿತರು ತಿಳಿಸಿದ ಮನೆಗೆ ಹೋದಾಗ ಚಿಟ್ಟೆ ಲಂಗ ತೊಟ್ಟುಕೊಂಡಿದ್ದ ಹೆಣ್ಣು ಮಗಳೊಬ್ಬಳು ತಾನು ಯಾವ ಸ್ಥಿತಿಯಲ್ಲಿದ್ದಳೋ ಹಾಗೆಯೇ ಬಂದು, ಬಂದಿರುವ ಅತಿಥಿಗಳಿಗೆ ನೀರು ತಂದು ಕೊಟ್ಟಳು. ಮತ್ತೆ ಒಳಗೆ ಹೋದವಳು ಮೊದಲಿನ ಸ್ಥಿತಿಯಲ್ಲಿಯೇ ಹಾಲನ್ನು ತಂದು ಕೊಟ್ಟಳು. ಆ ಹುಡುಗಿಯ ಸಹಜತೆ, ಮುಗ್ಧತೆ ನನ್ನನ್ನು ಆಕರ್ಷಿಸಿತ್ತು" ಎನ್ನುತ್ತಾರೆ ಅಪ್ಪಗೆರೆ. ಅವಳನ್ನು ತಾನು ಮದುವೆಯಾಗಬೇಕೆಂಬುದಾಗಿ ಅಲ್ಲಿಯೇ ನಿರ್ಧರಿಸುತ್ತಾರೆ. ಅದಾದ ಆರು ತಿಂಗಳಿಗೆ, ತನ್ನ ೩೯ನೆಯ ವಯಸ್ಸಿನಲ್ಲಿ ಅಪ್ಪಗೆರೆಯವರು ತಮ್ಮ ದಾಂಪತ್ಯ ಜೀವನಕ್ಕೆ ಕಾಲಿಡುತ್ತಾರೆ. "ನನಗೆ ತುಂಬಾ ಅಭಿಮಾನಿಗಳಿದ್ದರು. ಆದರೆ ನಾನು ಕೆಳವರ್ಗದವನಾಗಿದ್ದ ಕಾರಣ ಬಹಳ ಭಯ-ಭೀತಿಯನ್ನು ಹೊಂದಿದ್ದೆ. ಮಾತ್ರವಲ್ಲ ರೂಪಕ್ಕೆ ಮರುಳಾಗಿ ಎಲ್ಲೂ ನನ್ನಲ್ಲಿರುವ ಕಲೆಯನ್ನು ಮರೆಯಬಾರದು ಎಂಬುದೇ ನನ್ನ ಉದ್ದೇಶವಾಗಿತ್ತು. ಹಾಗಾಗಿ ನಾನು ಯಾವತ್ತೂ ಹೆಣ್ಣಿನ ಪ್ರೀತಿಗಾಗಿ ಕಾಲವ್ಯಯ ಮಾಡಿದವನೇ ಅಲ್ಲ" ಎಂದು ಇವರು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. "ನನ್ನ ಹೆಂಡತಿ ಮೈತ್ರಿ, ನನ್ನ ಏಳಿಗೆಯ ಹಿಂದೆ ಅವಳಿದ್ದಾಳೆ. ಅವಳನ್ನು ಮದುವೆಯಾಗಲು ನಾನು ಪುಣ್ಯ ಮಾಡಿದ್ದೆ" ಎನ್ನುತ್ತಾರೆ. ಮಗಳು ಗಾನ ಹಾಗೂ ಮಗ ಗಂಧರ್ವ ಇವರ ಸಾಂಸಾರಿಕ ಬದುಕಿನ ಸಂತೋಷಕ್ಕೆ ಕಾರಣರಾಗಿದ್ದಾರೆ.

೬. ಅಪ್ಪಗೆರೆ ಜೊತೆಗೊಂದು ಪಟ್ಟಾಂಗ

ಕರ್ನಾಟಕ ಜಾನಪದ ವಿಶ್ವವಿದ್ಯಾಲಯವು ತಿಂಗಳಿಗೊಂದರಂತೆ ಒಬ್ಬೊಬ್ಬ ಜನಪದ ಕಲಾವಿದರನ್ನು ಅತಿಥಿಗಳನ್ನಾಗಿ ಕರೆದು ಅವರೊಂದಿಗೆ 'ಪಟ್ಟಾಂಗ' ಕಾರ್ಯಕ್ರಮವನ್ನು ನಡೆಸುತ್ತಾ ಬರುತ್ತಿದೆ. ದಿನಾಂಕ೨೩.೦೩.೨೦೧೩ರಂದು ವಿಶ್ವವಿದ್ಯಾಲಯಕ್ಕೆ ದೇಶ–ವಿದೇಶಗಳಲ್ಲಿ ಜನಪದ ಗೀತೆಗಳನ್ನು ಹಾಡಿ ಕರ್ನಾಟಕದ ಹೆಸರನ್ನು ವಿಶ್ವಮಟ್ಟಕ್ಕೆ ಕೊಂಡೊಯ್ದು ಜನಪದ ಹಾಡುಗಾರ ತಿಮ್ಮರಾಜು ಅವರನ್ನು ತಿಂಗಳ ಅತಿಥಿಯಾಗಿ ಆಹ್ವಾನಿಸಲಾಗಿತ್ತು. ಆ ಕಾರ್ಯಕ್ರಮದಲ್ಲಿ ಜನಪದ ಗೀತೆಗಳೊಂದಿಗೆ ಸಾಗಿ ಬಂದ ಅವರ ಬದುಕಿನ ವಿವಿಧ ಅನುಭವಗಳನ್ನು ಹಂಚಿಕೊಳ್ಳಬೇಕೆಂದು ಕೋರಿಕೆಯಿತ್ತು. ಹಸಿರು ಜುಬ್ಬಾ ಬಿಳಿಯ ಪೈಜಾಮ ತೊಟ್ಟಿದ್ದ ಅಪ್ಪಗೆರೆಯವರು ವೇದಿಕೆಯ ಮೇಲಿದ್ದ ಹಿರಿಯರಿಗೂ, ಸಭೆಯಲ್ಲಿ ನೆರೆದಿದ್ದ ಸರ್ವರಿಗೂ ನಮಸ್ಕರಿಸಿ, ಎತ್ತರದ ದನಿಯಲ್ಲಿ ಹಾಡಲು ಆರಂಭಿಸಿದರು.

ಗಾಡಿಯ ದಾರಿ ಸಾಗಲಿ । ನಮ್ಮ
ಊರನು ಬೇಗ ಸೇರಲಿ
ಹೂಡೋದು ಹೊಸ ಬಂಡಿ
ಹೊಡೆಯೋನು ಹಸುಮಗ
ಆಲಿಸಿ ಕೇಳೋ ಬಸವಣ್ಣ।
ಆಲಿಸಿ ಕೇಳೋ ಬಸವಣ್ಣ। ನಿನಬಂಡಿ
ಭೂಮಿ ತಲ್ಲಣಿಸಿ ನಡುಗ್ಯಾವೋ
ಗೆಜ್ಜೆ ಗಲ್ಲೆಂದು ನುಡಿದಾವೋ ॥
ಗಾಡಿಯ ದಾರಿ ಸಾಗಲೀ ನಮ್ಮ
ಊರನು ಬೇಗ ಸೇರಲಿ ।
ಕಬ್ಬುಗಾರುಳ್ಳವನೇ । ಉಬ್ಬು ಏರುಳ್ಳವನೇ
ಗೊಬ್ಬರದ ಬಂಡಿ ಹೊಡೆಯೋನೆ । ನಮ್ಮಣ್ಣ
ಉಬ್ಬಿಗೆ ಇನ್ನೊಂದು ಸರಿಯುಂಟೆ ॥
ಬಂಡಿ ಬಂಡೀ ಚಂದ । ಬಂಡಿಯ ನೊಗ ಚಂದ
ಮುಂದಲೋರಿ ಮುಖರೊಂಬೆ ಚಂದ । ಬಲುಚೆಂದ
ಬಂಡೀಯ ಹೊಡೆಯೋನ ಮುಖ ಚೆಂದ
ಆರು ಸಾವಿರ ಬಂಡಿ। ಧೂಳೆದ್ದು ಹೋಗುವಾಗ
ಧೂಳು ಮುಟ್ಟಿತು ಮುಗೀಲಿಗೆ – ಬಸವನ
ಗೋಳು ತಟ್ಟೈತೆ ಶಿವನಿಗೆ॥
ಬಂಡಿಯ ಹೊಡೆವಾಗ । ಬಾರುಗೋಲು ಬಿದ್ದೋಯ್ತು
ಕಂಡ ಗೆಳೆಯಾರೆ ಕೊಡಿರಣ್ಣ । ನಮ್ಮೆತ್ತು
ಮುಂದಕ್ ಮೂರೆಜ್ಜೆ ನಡೆಯಾವು॥

ಗಾಡಿಯ ದಾರಿ ಸಾಗಲೀ । ನಮ್ಮ
ಊರನು ಬೇಗ ಸೇರಲಿ ॥

ಈ ಹಾಡಿನೊಂದಿಗೆ ತಮ್ಮ ಮಾತುಗಳನ್ನು ಆರಂಭಿಸಿದ ಅಪ್ಪಗೆರೆ 'ಪಟ್ಟಾಂಗ'ದಲ್ಲಿ ಒಬ್ಬ ಸಾಮಾಜಿಕ ಚಿಂತಕರಾಗಿ ಕಂಡರು. "ಹಿಂದೆ ಎತ್ತುಗಳು ನಡೆಯುವಾಗ ಭೂಮಿ ತಲ್ಲಣಿಸಿ ನಡುಗುತ್ತಿದ್ದವು. ಇಂದು ಯಂತ್ರಗಳು ನಡೆಯುವಾಗ ಕಂಪಿಸುವ ಭೂಮಿಯನ್ನು ಕಾಣುವಂತಾಗಿದೆ. ಜಾಗತೀಕರಣ ತಂದು ಒಡ್ಡಿರುವ ಬದಲಾವಣೆಯ ಗಾಳಿಗೆ ಜನಪದ ಸಂಸ್ಕೃತಿ, ವಿಚಾರ ತತ್ತರಿಸುವ ಸ್ಥಿತಿ ಉಂಟಾಗಿದೆ. ಟಿ.ವಿ.ಯಂಥ ಮಾಧ್ಯಮಗಳು ಜನರ ಜ್ಞಾನದ ಹರಿವನ್ನು ಬೇರೆಡೆಗೆ ತಿರುಗಿಸಿವೆ. ಮನೆಗೆ ಬಂದ ಹೆಮ್ಮಾರಿಯ ಪೆಟ್ಟಿಗೆಯು (ಟಿ.ವಿ) ಹೊರ ಹಾಕುತ್ತಿರುವ ಸಂಸ್ಕೃತಿಯು ನಮ್ಮನ್ನು ಕಾಡಿಸುತ್ತಿದೆ, ನಮ್ಮ ಜಾನಪದವನ್ನು ಮರೆಸುತ್ತಿದೆ" ಎಂಬುದು ಇವರ ಆತಂಕ. ಹಿಂದಿನಿಂದ ಆಚರಿಸಿಕೊಂಡು ಬಂದ ಹಬ್ಬ ಹರಿದಿನಗಳು ಜನಪದರ ಬದುಕಿನ ಅವಿಭಾಜ್ಯ ಅಂಗಗಳೆನಿಸಿವೆ. ಆ ಕಾರಣದಿಂದಲೇ ಜನಪದರು ಪ್ರತಿಯೊಂದಕ್ಕೂ ಹಾಡು ಕಟ್ಟಿದ್ದಾರೆ. ಹಬ್ಬಗಳನ್ನೆಲ್ಲ ಜನರು ಮತ್ತೆ ಮತ್ತೆ ನೆನಪಿಸಿಕೊಳ್ಳುವಂತೆ ಮಾಡುವಲ್ಲಿ ಜನಪದ ಗೀತೆಗಳು ಬಹುಮುಖ್ಯವಾದ ಪಾತ್ರವನ್ನು ವಹಿಸುತ್ತವೆಂಬುದು ತಿಮ್ಮರಾಜು ಅವರ ಅಭಿಪ್ರಾಯ.

ಆಷಾಢಮಾಸ ಬಂದೀತವ್ವಾ । ಖಾಸಾದ ಅಣ್ಣ ಬರಲಿಲ್ಲ
ಎಷ್ಟು ನೆನೆಯಲಿ ಅಣ್ಣನ ದಾರಿಯ
ಸುವ್ವೋನಾರಿ । ಸುವ್ವಾರಿ
ಕೆಂದೆತ್ತು ಕೈಯಲ್ಲಿ ಕೆಂಪಂಗಿ ಮೈಯಲ್ಲಿ
ಚಿನ್ನದ ಬಾವುರಿಯ ತಕ್ಕೊಂಡು
ಚಿನ್ನದ ಬಾವುರಿಯ ತಕ್ಕೊಂಡು । ಅಣ್ಣ ಬಂದ
ತಂಗಿಯನ್ನು ಕರೆಯೋಕೆ।
ಅರಕೆರೆ ಬನ್ನೂರು ಅಂದು ನನ್ನ ತವರೂರು
ಸರಕಾನೆ ಕೂಗಿದರೆ ಬರುತೀಯೊ । ಅಣ್ಣಯ್ಯ
ಸರಿಕಾಣೊ ನಿನ್ನ ದೊರೆತನ
ತೌರೂರು ಹಾದೀಲಿ ಕಲ್ಲಿಲ್ಲ ಮುಳ್ಳಿಲ್ಲ
ಸಾಸಿವೆಯಷ್ಟು ಮರಳಿಲ್ಲ । ಅಣ್ಣಯ್ಯ
ಬಿಸಿಲಿನ ಬೇಗೆಯು ಸುಡಲಿಲ್ಲ
ಬೇಸಿಗೆ ಬಿಸಿಲಿಗೆ ಬೇವಿನ ಮರತಂಪು
ಭೀಮರಥಿ ಎಂಬ ಹೊಳೆತಂಪು । ಅಣ್ಣಯ್ಯ
ನೀ ತಂಪು ನನ್ನ ತವರಿಗೆ ।
ಹೆಣ್ಣಿನ ತವರೂರು ರಸಬಾಳೆ ಹಣ್ಣಂತೆ
ಮಲೆನಾಡು ತುಡುಬೇವು । ತಾಯಿಯ

ಎದೆಹಾಲು ರುಚಿಯ ಸವಿದಂತೆ
ಆಷಾಢ ಮಾಸ ಬಂದೀತವ್ವಾ।
ಖಾಸದ ಅಣ್ಣ ಬರಲಿಲ್ಲ ॥

"ಹಿಂದೆ ಪಂಚಮಿಯಂಥ ಹಬ್ಬಗಳಿಗೆ ಅಣ್ಣ ತಂಗಿಯನ್ನು ಕರೆದೊಯ್ಯಲು ಎತ್ತಿನ ಗಾಡಿ ಹೂಡಿಕೊಂಡು ಬರುತ್ತಿದ್ದ. ಆದರೆ ಈಗ ಅಂಥ ಹಬ್ಬಗಳು ಅಪರೂಪವಾಗುತ್ತಿವೆ". ಫೋನ್‌ನಂಥ ತಂತ್ರಜ್ಞಾನವು ತಂದೊಡ್ಡಿದ ಸಾಂಸ್ಕೃತಿಕ ಬದಲಾವಣೆಗಳನ್ನು ಅಪ್ಪಗೆರೆ ಬಹುವಾದ ಟೀಕೆಗೆ ಒಳಪಡಿಸುತ್ತಾರೆ. ತವರಲ್ಲಿ ಏನೇ ಕಾರ್ಯಕ್ರಮಗಳು ನಡೆದರೂ ಹೆಣ್ಣು ಮಕ್ಕಳನ್ನು ತವರಿಗೆ ಕರೆಯಬೇಕಾದು ತವರಿನ ಧರ್ಮ. ತವರಲ್ಲಿ ನಡೆಯುವ ಹಬ್ಬ, ಮದುವೆ, ಮುಂಜಿ ಎಲ್ಲವುಗಳಿಗೂ ಹೆಣ್ಣು ಮಕ್ಕಳನ್ನು ಕರೆಯುತ್ತಾರೆ. ಆಧುನಿಕ ಸಮಾಜ ಈ ಬಗೆಯ ಬಾಂಧವ್ಯಗಳನ್ನು ಕಳೆದುಕೊಳ್ಳುತ್ತಿರುವುದೇ ದುರಂತ. ಅಣ್ಣನೊಬ್ಬ ತಂಗಿಯನ್ನು ತನ್ನ ಮಗಳ ಮದುವೆಗೆ ಬರುವಂತೆ ಹೀಗೆ ಕೇಳಿಕೊಳ್ಳುತ್ತಾನೆ.

ಅಣ್ಣ: ಕುದುರೇನ ತಂದೀವ್ನಿ
ಜೀನಾವ ಬಿಗಿದೀವ್ನಿ
ಬರಬೇಕು ತಂಗೀ ಮದುವೇಗೆ ॥

ತಂಗಿ: ಅಂಗ್ಳ ಗುಡಿಸೋರಿಲ್ಲ
ಗಂಗ್ಳ ತೊಳೆಯೋರಿಲ್ಲ
ಹೆಂಗೇ ಬರಲಣ್ಣಾ ಮದುವೆಗೆ ॥

ಅಣ್ಣ: ಅಂಗ್ಳಾಕೆ ಆಳಿಡುವೆ
ಗಂಗ್ಳಾಕೆ ತೊಟ್ಟಿಡುವೆ
ಬರಬೇಕು ತಂಗಿ ಮದುವೇಗೆ ॥

ತಂಗಿ: ಮಳೆಯಾರ ಬಂದೀತು
ಹೊಳೆಯಾರ ತಂಬಿತು
ಹೆಂಗೆ ಬರಲಣ್ಣಾ ಮದುವೇಗೆ ॥

ಅಣ್ಣ: ಚಿನ್ನದ ಹರಿಗೋಲ್ಗೆ
ರನ್ನದ ಹುಟ್ಹಾಕಿ
ಜೋಕೇಲಿ ನಿನ್ನ ಕರೆದೊಯ್ವೆ ॥

ತಂಗಿ: ಅಪ್ಪ ಇದ್ದರೆ ನನ್ನ ಸುಮ್ಮನೆ ಕಳುಹಾನೆ
ಅವ್ವ ಇಲ್ಲದ ಮನೆಯಾಗೆ
ಬಂದಾರೆ ಬಂದೇನು। ಅಂಗ್ಳದಾಗೆ ನಿಂದೇನು
ಕಂದಾಗೆ ಧಾರೆ ಎರೆದೇನು ॥

ಮೇಲಿನ ಗೀತೆಯು ಅಣ್ಣ ತಂಗಿಯರ ನಡುವಿನ ಬಾಂಧವ್ಯವನ್ನಷ್ಟೇ ಹೇಳುವುದಿಲ್ಲ. ತನ್ನ ತವರಿನ ಕುರಿತು ಹೆಣ್ಣಿಗಿರುವ ಪ್ರೀತಿ ಮತ್ತು ತವರಿನ ಕುರಿತ ಅವಳ ನಿರೀಕ್ಷೆಯನ್ನೂ ಹೇಳುತ್ತದೆ. ಆರಂಭದಲ್ಲಿ ಅವಳು ಕೊಡುವ ಕಾರಣಗಳಾದ "ಅಂಗ್ಯ ಗುಡಿಸೋರಿಲ್ಲ, ಗಂಗ್ಯ ತೊಳೆಯೊರಿಲ್ಲ, ಮಳೆಯಾರ ಬಂದೀತು । ಹೊಳೆಯಾರ ತುಂಬೀತು" ಇವೆಲ್ಲವೂ ತವರಿಗೆ ಹೋಗುವುದನ್ನು ನಿರಾಕರಿಸುವುದಕ್ಕೆ ಅವಳಿಗೆ ಇರುವ ನೆಪ ಮಾತ್ರ. ಅಪ್ಪ-ಅಮ್ಮನಿಲ್ಲದ ತವರಿಗೆ ತಾನು ಹೋಗಬಾರದು ಎಂಬುದೇ ಅವಳ ನಿರಾಕರಣೆಯ ಮೂಲ ಕಾರಣ. ಇದು ಹಾಡಿನ ಕೊನೆಯಲ್ಲಿ ಅರ್ಥವಾಗುತ್ತದೆ. "ಅಂಗ್ಳಾಕೆ ಆಳಿಡುವೆ ಗಂಗ್ಳಾಕೆ ತೊಟ್ಟಿಡುವೆ, ಚಿನ್ನದ ಹರಿಗೋಲ್ಗೆ ರನ್ನದ ಹುಟ್ಹಾಕಿ ಜೋಕೇಲಿ ಕರೆದೊಯ್ಯುವೆ" ಎಂದೆಲ್ಲಾ ತಂಗಿಯನ್ನು ರಂಬಿಸಿ, ತಂಗಿಯ ಬೇಡಿಕೆಗಳನ್ನು ಈಡೇರಿಸುವ ಅಣ್ಣನು, ಅಪ್ಪ-ಅಮ್ಮ ಇಲ್ಲದ ಕೊರತೆಯನ್ನು ತಂಗಿಯು ತನ್ನ ಮುಂದಿಟ್ಟಾಗ ಮೌನವಾಗುತ್ತಾನೆ. ಕೊನೆಗೂ ತಾನು ಭರವಸೆಯನ್ನು ನೀಡದೇ, "ಬಂದಾರೆ ಬಂದೇನು ಅಂಗ್ಳಾದಾಗೆ ನಿಂದೇನು। ಕಂದಾಗೆ ಧಾರೆ ಎರೆದೇನು" ಎಂದು ನಿರ್ದಾಕ್ಷಿಣ್ಯವಾಗಿ ಮಾತನಾಡುತ್ತಾಳೆ. ಈ ಬಗೆಯ ಹಾಡುಗಳಿಗೆ ಅದ್ಭುತವಾಗಿ ಜೀವತುಂಬಿ ಹಾಡುತ್ತಾರೆ ತಿಮ್ಮರಾಜು.

"ನಾನೊಬ್ಬ ಶಾಸ್ತ್ರೀಯ ಸಂಗೀತ ಕಲಾವಿದ ಆಗಬಹುದಿತ್ತು. ಆದರೆ ನನ್ನ ಕುಟುಂಬ ನನ್ನನ್ನು ಜಾನಪದ ಕ್ಷೇತ್ರದಲ್ಲಿ ವಿಶಿಷ್ಟ ಜವಾಬ್ದಾರಿಯನ್ನು ನಿರ್ವಹಿಸಲು ಬೇಕಾದ ಬುನಾದಿಯನ್ನು ಹಾಕಿಕೊಟ್ಟಿತ್ತು. ನಮ್ಮ ಅಜ್ಜಿಯ ಪ್ರಭಾವದಿಂದ ನಾನು ಜನಪದ ಗಾಯಕನಾದೆ. ಅಜ್ಜಿಯ ಸೋಬಾನೆ ಹಾಡುಗಳ ಆಕರ್ಷಣೆ ಆ ಮಟ್ಟಿಗೆ ನನ್ನ ಮೇಲೆ ಪ್ರಭಾವ ಬೀರಿತು.

ಕಲ್ಯಾಣವೇ ರಾಮ್ರಾ ಕಲ್ಯಾಣವೇ
ಕಲ್ಯಾಣವೇ ಸೀತೆ ಕಲ್ಯಾಣವೇ
ಧಾರೆಯ ಹೊತ್ತಿಗೆ ಯಾರ್ಯಾರು ಬರಬೇಕು
ದಾರದ ಕೊರಳ ಹಿರಿಯಣ್ಣ । ಸೋದರಮಾವ
ಧಾರೆ ಹೊತ್ತಿಗೆ ಬರಬೇಕು ॥
ಸಾಲೆಯ ಸೀರೆಯ ಜೋಲುತ ವಾಲುತ
ತಾವರೆಗಣ್ಣಾಗೆ ಪುರುಷರ । ನೋಡುತ
ಏರ್ಯಾಳೆ ಹಸೆಯ ಜಗುಲೀಯ
ಕಲ್ಯಾಣವೇ ರಾಮ್ರಾ ಕಲ್ಯಾಣವೇ
ಕಲ್ಯಾಣವೇ ಸೀತೆ ಕಲ್ಯಾಣವೇ॥
ತಿಂಗಳು ಬೆಳಕಲ್ಲಿ ಸೂರ್ಯನ ರವೆಯಲ್ಲಿ
ಸಾಧು ಕಸ್ತೂರಿ ಪುನಗೀನ । ಪಾರ್ವತಿದೇವಿ
ಸೇರ್ಯಾಳೆ ತೆರೆಯ ಮರೆಯಾಗೆ ॥
ಕಲ್ಯಾಣವೇ ರಾಮ್ರಾ ಕಲ್ಯಾಣವೇ

ಕಲ್ಯಾಣವೇ ಸೀತೆ ಕಲ್ಯಾಣವೇ॥
ಅಂಗಳಂಗಳ ಸಾಕ್ಷಿ । ಅಂಗಳದ ಕೊನೆ ಸಾಕ್ಷಿ
ಅಂಗಳದಲ್ಲಿರುವ ಜನ ಸಾಕ್ಷಿ । ಮದುವಣ್ಣ
ನೀ ಸಾಕ್ಷಿ ನಮ್ಮ ಮಗಳೀಗೆ
ಕಲ್ಯಾಣವೇ ರಾಮ್ರಾ ಕಲ್ಯಾಣವೇ
ಕಲ್ಯಾಣವೇ ಸೀತೆ ಕಲ್ಯಾಣವೇ॥
ಹಳ್ಳದ ಹರಿ ನೀರು ಹಳ್ಳದ ಕೊರಿ ನೀರು
ಮೇಲೆ ಮೈಸೂರ ಮದುಗಾರ । ಕೆರೆ ನೀರು
ಬಾಲನ ಕೈಧಾರೆಗೆ ಬರಬೇಕು ॥
ಎಳ್ಳು ಜೀರಿಗೆ ಹೆಣ್ಣಮ್ಮಿ ಕೈ ತುಂಬಿ
ತೆಗೆದಿಟ್ಟಾಳೆ ಪುರುಷರ । ಮಂಡೆ ಮ್ಯಾಲೆ
ಇಷ್ಟೊಂದು ಭಾಗ್ಯ ಬರಲೆಂದು ॥
ಕಲ್ಯಾಣವೇ ರಾಮ್ರಾ ಕಲ್ಯಾಣವೇ
ಕಲ್ಯಾಣವೇ ಸೀತೆ ಕಲ್ಯಾಣವೇ

ಒಂದು ರೀತಿಯಲ್ಲಿ ಇಂಥ ಸೋಬಾನೆ ಪದಗಳು, ಭಜನೆ ಹಾಡುಗಳಿಂದಲೂ ನನ್ನನ್ನು ದೂರ ಮಾಡಿದವು. ಶಾಸ್ತ್ರೀಯ ಸಂಗೀತಗಾರರು ಹಲವರಿದ್ದಾರೆ. ಆದರೆ ಅವರಿಗೆ ಅಗತ್ಯ ತರಬೇತಿ ದೊರೆಯುತ್ತದೆ. ತರಬೇತಿಗಳಿಲ್ಲದೇ, ಪರಂಪರೆಯಿಂದ ಹಾಡುತ್ತಾ ಬಂದವರು ಜನಪದರು. ದೊಡ್ಡ ದೊಡ್ಡ ಗುರುಗಳು ದೊರೆತರೆ, ಎಷ್ಟೋ ಜನ ಭೀಮಸೇನ ಜೋಶಿಯರೂ, ಸುಬ್ಬುಲಕ್ಷ್ಮಿಯರೂ ಹೊರಬರಬಹುದು. ಆದರೆ ತರಬೇತಿಯಿಲ್ಲದೇ ದಿನಗಟ್ಟಲೇ ಹಾಡುವ ಕಲೆಯನ್ನು ರೂಢಿಸಿಕೊಂಡಿರುವ ಜನಪದರು, ಯಾವತ್ತಿಗೂ ಶ್ರೇಷ್ಠ ಕಲಾವಿದರು ಎಂಬುದು ಇವರ ಅಭಿಮತ. ಕೋಲಾಟದಂಥ ಕಲೆಗಳು ಮಾಯವಾಗುತ್ತಿವೆ. ಇಂಥ ಪ್ರಕಾರಗಳು ವಿಶೇಷವಾದ ಸಾಹಿತ್ಯವನ್ನು ಒಳಗೊಂಡಿರುತ್ತವೆ.

ಕೋಲು ಕೋಲಣ್ಣ ಕೋಲೆ । ಕೋಲು ಕೋಲೆ
ಎಕ್ಕೋಲು ಚಿನ್ನದ ಕೋಲೇ ।
ಕೋಲು ಕೋಲಣ್ಣ ಕೋಲೆ । ಕೋಲು ಕೋಲೆ
ಎಕ್ಕೋಲು ರನ್ನದ ಕೋಲೆ ....
ನೀರೀಗೋಗೋ ಹೆಣ್ಣೆ
ನಿಲ್ಲು ನಾ ಬರುತೀನಿ ।
ನಿನ್ನಾಣೆ ನಿನ್ನ ಕೊಡದಾಣೆ
ಕೈಯಿನ ಬಳೆಯಾಣೆ । ನೀರಿನ ಹೊಳೆಯಾಣೆ
ನಿಲ್ಲೇ ಹೆಣ್ಣೇ ನಾ ಬರುತೀನಿ

ಎಲ್ಲೆಲ್ಲಿ ನೋಡಿದರೂ ।
ನಿನ್ನಂಥ ಹೆಣ್ಣಿಲ್ಲ
ಹಲ್ಲು ನೋಡಿದರೆ ಹವಳಾವು । ಗೆಳತಿ
ನಿನ್ನ ಸೊಲ್ಲ ಕೇಳಿದರೆ ಸಮಾಧಾನ ॥ ಕೋಲು॥
ಬಣ್ಣದ ಸರದ ಮೇಲೆ
ಕಣ್ಣ್ಯಾಕೋ ಗಿಳಿರಾಮ
ಹಣ್ಣಿಲ್ಲವೇನೋ ಮೆಲುವೋಕೇ । ಗಿಳಿರಾಮ
ಹೆಣ್ಣಿಲ್ಲವೇನೋ ತರುವೋಕೆ ॥ ಕೋಲು॥

ಕೋಲಾಟದಂಥ ಪ್ರಕಾರಗಳನ್ನು ನಾವು ಬೆಳೆಸಬೇಕಾಗಿದೆ. ಅಂಥ ಕಾರ್ಯವನ್ನು ಜಾನಪದ ವಿಶ್ವವಿದ್ಯಾಲಯ ಮಾಡಬೇಕಾಗಿದೆ" ಎಂಬುದು ಅಪ್ಪಗೆರೆಯರ ಆಶಯ.

೧೯೮೦-೧೯೮೧ ರಲ್ಲಿ 'ಜಾನಪದ ಅಕಾಡೆಮಿ'ಯು ಆರಂಭವಾಯಿತು. ಎಚ್.ಎಲ್. ನಾಗೇಗೌಡರು ಅಧ್ಯಕ್ಷರಾದಾಗ ಒಂದು ಸಭೆ ನಡೆಯಿತು. ಈಗಿನ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾದ ಹಿ.ಚಿ. ಬೋರಲಿಂಗಯ್ಯನವರು ಆಗಿನ ರಿಜಿಸ್ಟ್ರಾರ್ ಅಗಿದ್ದರು. ಅವತ್ತು ಒಂದು ಸಭೆ ಯವನಿಕದಲ್ಲಿ ನಡೆಯಿತು. ಎಲ್ಲಾ ದೊಡ್ಡ ದೊಡ್ಡ ವಿದ್ವಾಂಸರುಗಳು ಅಲ್ಲಿ ಸೇರಿದ್ದರು. ಕಾರಂತರು ಯಕ್ಷಗಾನವನ್ನು ಆಧುನಿಕಗೊಳಿಸಿದ ಜನಪ್ರಿಯಗೊಳಿಸಿದ ಬಗೆಯಲ್ಲಿಯೇ, ಜನಪದ ಗೀತೆಗಳನ್ನು ಯುವಜನತೆಗೆ ತಲುಪಿಸಬೇಕೆಂಬ ಉದ್ದೇಶ ತಿಮ್ಮರಾಜು ಅವರದಾಗಿತ್ತು. ಹಾಗೆಯೇ ಅವಕಾಶ ಸಿಕ್ಕಿದಾಗ ಆ ಸಭೆಯಲ್ಲಿ ಅವರೊಂದು ಜನಪದಗೀತೆಯನ್ನು ಹಾಡಿದರು. "ನೀನು ಸ್ವಲ್ಪ ಆಧುನಿಕವಾಗಿ ಹಾಡ್ತೀಯಪ್ಪಾ" ಎಂದು ನಾಗೇಗೌಡರು ಅಂದಿದ್ದರಂತೆ. ಆಧುನಿಕಗೊಳಿಸಿದರೆ ಯಾವುದೂ ಕೆಟ್ಟು ಹೋಗಲ್ಲ. ಅದಕ್ಕೆ ಬದಲಾಗಿ ಜಾನಪದವನ್ನು ಆ ನಿಟ್ಟಿನಲ್ಲಾದರೂ ಜೀವಂತವಾಗಿರಿಸಬೇಕೆನ್ನುವುದು ಅಪ್ಪಗೆರೆಯವರ ಆಶಯ. ನಮ್ಮ ಜನಪದರಿಗೆ ಸ್ಪಷ್ಟತೆಯ ಅರಿವಿಲ್ಲದೇ ಇರುವುದರಿಂದ ಜನಪದ ಹಾಡುಗಳು ಯಾರಿಗೂ ತಲುಪದೇ ಉಳಿದಿವೆ ಎಂಬುದು ಇವರು ವಾದ. ಯುವ ಜನಾಂಗವನ್ನು ಬೆಳೆಸುವ ದೃಷ್ಟಿಯಿಂದ ತಿಮ್ಮರಾಜು ಅವರು ಮಾಡಿದ ಕಾರ್ಯ ಮುಖ್ಯವಾದುದು. ಬೆಂಗಳೂರಿನ ಯವನಿಕದಲ್ಲಿ 'ಜನಪದ ಗೀತೆಗಳ ತರಬೇತಿ' ಕಾರ್ಯಾಗಾರ ಆಯೋಜಿಸಿ, ನೂರಾರು ವಿದ್ಯಾರ್ಥಿಗಳು ಅದರಲ್ಲಿ ಭಾಗವಹಿಸುವಂತೆ ಮಾಡಿದ್ದರು. ತಾವು ಎರಡು ಬಾರಿ ಜಾನಪದ ಅಕಾಡೆಮಿ ಸದಸ್ಯರಾದಾಗಲೂ ಜನಪದ ಉಡುಪುಗಳ ಬಗ್ಗೆ, ಕುಸುರಿ ಕೆಲಸಗಳ ಬಗ್ಗೆ ಗೊಂಬೆಯಾಟಗಳ ಬಗ್ಗೆ ತರಬೇತಿ ಕಾರ್ಯಾಗಾರ ಆಯೋಜಿಸಿದ್ದರು. ವಿವೇಕ ರೈ, ಲಕ್ಕಪ್ಪಗೌಡ, ಸೋಮಶೇಖರ ಇಮ್ರಾಪುರ ಮೊದಲಾದವರು ಈ ಸಂದರ್ಭದಲ್ಲಿ ನೀಡಿದ ಪ್ರೋತ್ಸಾಹವನ್ನು ತಿಮ್ಮರಾಜು ನೆನಪಿಸಿಕೊಳ್ಳುತ್ತಾರೆ.

"ಜಾಗತೀಕರಣದ ಸಂದರ್ಭದಲ್ಲಿ ಯುವಜನಾಂಗ ಜನಪದ ಗೀತೆಗಳನ್ನು ಹಾಡುವುದನ್ನು ನಿಲ್ಲಿಸಿ ಬಿಟ್ಟಿದೆ. ಹೀಗಾದರೆ, ವಿನಾಶ ಕಟ್ಟಿಟ್ಟದ್ದು, ಮೈ ಚಳಿ ಬಿಟ್ಟು ಜನಪದ ಸಂಸ್ಕೃತಿಯನ್ನು ಕಾಪಾಡಬೇಕಾಗಿದೆ. ರಾಜಕಾರಣಿಗಳಿಗೆ ಕಲಾವಿದರು ಮೆರವಣಿಗೆಗೆ ಮಾತ್ರ ಬೇಕಾಗಿದ್ದಾರೆ. ರಾಜಕಾರಣಿಗಳು ಒಮ್ಮೆಯೂ ಕಲಾವಿದರ ಬಳಿ ಬಂದು ಅವರ ದುಃಖ ದುಮ್ಮಾನ ವಿಚಾರಿಸಲಾರರು. ಅದು ಅವರಿಗೆ ಅಗತ್ಯವಿಲ್ಲ. ತಂದೆ ಹಾಡ್ತಾ ಇದ್ದ. ಮಗ ಯಾಕೆ ಹಾಡುವುದನ್ನು ಬಿಟ್ಟ? ಎಂಬ ಯಾವ ಚಿಂತೆಯೂ ರಾಜಕಾರಣಿಗಳನ್ನು ಬಾಧಿಸುವುದಿಲ್ಲ. ಚಿತ್ರರಂಗದವರೂ ವಾಣಿಜ್ಯದ ದೃಷ್ಟಿಯಿಂದ ಜನಪದ ಪ್ರಕಾರಗಳನ್ನು ಬಳಸಿಕೊಂಡಿದ್ದಾರೆ. ಆದರೆ ಮೂಲ ಕಲಾವಿದರಿಗೆ ಇವರೂ ಆದ್ಯತೆ ನೀಡಿಲ್ಲ. ಇಂಥ ಹಲವು ಕಾರಣಗಳಿಂದ ಜನಪದ ಕಲಾವಿದರು ಬಡವರಾಗಿಯೇ ಉಳಿದಿದ್ದಾರೆ. ಆ ನೋವು ನನ್ನನ್ನು ಬಹಳವಾಗಿ ಕಾಡುತ್ತಿದೆ. ಎಷ್ಟೋ ಜನ ಕಲಾವಿದರು ಅನಾರೋಗ್ಯದಿಂದ ಸತ್ತು ಹೋಗಿದ್ದಾರೆ. ಅಕಾಡೆಮಿಯ ಒಳಗೆ ಒಬ್ಬ ಜನಪದ ಕಲಾವಿದನ ಚರಿತ್ರೆ ಇಲ್ಲ. ಒಂದು ವೀಡಿಯೋ ದಾಖಲಾತಿ ದೊರೆಯುವುದಿಲ್ಲ. ಎಂಭತ್ತನೆಯ ಇಸವಿಯಿಂದ ಪ್ರಾರಂಭವಾದ ಅಕಾಡೆಮಿಯಲ್ಲಿ ಕಂಸಾಳೆ ಮಹದೇವಪ್ಪನ ಚರಿತ್ರೆ ಕೇಳಿದರೆ ದೊರೆಯುವುದಿಲ್ಲ. ಜೀ.ಶಂ.ಪ, ಎಚ್.ಎಲ್. ನಾಗೇಗೌಡರ ಕುರಿತ ಮಾಹಿತಿ ಕೇಳಿದರೆ ದೊರೆಯುವುದಿಲ್ಲ. ವಾಷಿಂಗ್‌ಟನ್ ಡಿ.ಸಿ. ಯಲ್ಲಿ ಹಿಟ್ಲರನ ದೊಡ್ಡ ಸಂಶೋಧನೆಯನ್ನು ಮಾಡಿ ಇರಿಸಲಾಗಿದೆ. ಬೇರೆ ಬೇರೆ ದೇಶಗಳಿಂದ ನಾವು ತಿಳಿಯಬೇಕಾದದ್ದು ಬಹಳ ಇದೆ. ಜಾನಪದ ಕ್ಷೇತ್ರದಲ್ಲಿ ಸಂಶೋಧನೆ ಮಾತ್ರ ಹೆಚ್ಚಾಗುವುದಲ್ಲ. ಸಂಶೋಧನೆಯ ಜೊತೆಯಲ್ಲಿ ಜನಪದ ಕಲೆಗಳ ಬೆಳವಣಿಗೆಗಳೂ ಆಗಬೇಕು. ಪ್ರಾಥಮಿಕ ಶಾಲೆಗಳಲ್ಲಿ ನಲಿಕಲಿಯಂಥ ಕಾರ್ಯಕ್ರಮಗಳಲ್ಲಿ ಜನಪದ ಪ್ರಕಾರಗಳನ್ನು ಪರಿಚಯಿಸಬೇಕು.

ಕಣ್ಣೆ ಮುಚ್ಚೆ ಕಾಡೆ ಗೂಡೆ
ಉದ್ದಿನ ಮೂಟೆ ಉರುಳೇ ಹೋಯ್ತು
ನಮ್ಮಯ ಹಕ್ಕಿ ಬಿಟ್ಟೆ ಬಿಟ್ಟೆ
ನಿಮ್ಮಯ ಹಕ್ಕಿ ಅಡಗಿಸಿಕೊಳ್ಳಿ ॥

ಇಂಥ ಹಾಡುಗಳನ್ನು 'ನಲಿಕಲಿ'ಯಂಥ ಕಾರ್ಯಕ್ರಮಗಳಲ್ಲಿ ಅಳವಡಿಸುವುದರಿಂದ ಜನಪದ ಸಾಹಿತ್ಯವನ್ನು ಬಾಲ್ಯದಿಂದಲೇ ಕಲಿಸಿದ ಹಾಗಾಗುತ್ತದೆ" ಎಂಬುದು ಅಪ್ಪಗೆರೆಯವರ ಅಭಿಮತ. ಹಿಂದೆ ಊರಿಂದೂರಿಗೆ ಬಳೆ ಮಾರಿಕೊಂಡು ಹೋಗುವ ಬಳೆಗಾರ ಕಾಣಿಸಿಕೊಳ್ಳುತ್ತಿದ್ದ. ಹೆಣ್ಣುಮಕ್ಕಳು ತನ್ನ ತವರಿನ ಕುರಿತು ತಿಳಿಯಲು, ತವರಿಗೆ ತಮ್ಮ ಸಂದೇಶ ಕಳುಹಿಸಲು ಒಬ್ಬ ಮಧ್ಯವರ್ತಿಯಾಗಿ ಬಳೆಗಾರ ಕೆಲಸ ಮಾಡುತ್ತಿದ್ದ.

ಇನ್ನೆಲ್ಲಿ ನೋಡಲಿಂಥ ಬಳೆಯ ಬಳೆಗಾರ ಶೆಟ್ಟಿ
ಹೋಗಯ್ಯ ನನ್ನ ತವರೀಗೆ॥
ಹೆಂಚಿನ ಮನೆ ಕಾಣೋ । ಕಂಚಿನ ಕದಕಾಣೋ
ನಿಂತಾಡುವೆರಡು ಗಿಣಿ ಕಾಣೋ । ಬಳೆಗಾರ
ಅದುವೇ ಕಾಣೆನ್ನ ತವರೂರು
ಹೋಗಿ ಬಾರಯ್ಯ ನನ್ನ ತವರೀಗೆ ॥
ಅಚ್ಚಕೆಂಪಿನ ಬಳೆ । ಹಸಿರು ನೀಲಿಯ ಬಳೆ
ನನ್ನ ಹಡೆದವ್ವಗೆ ಬಲು ಆಸೆ । ಬಳೆಗಾರ
ಕೊಂಡೋಗೋ ನನ್ನ ತವರೀಗೆ
ಹೋಗಿ ಬಾರಯ್ಯ ತವರೀಗೆ ॥
ಆಲೆಯು ಆಡ್ತಾವೆ ಗಾಣ ತಿರುಗ್ತಾವೆ
ನವಿಲು ಸಾರಂಗ ನಲಿತಾವೆ । ಬಳೆಗಾರ
ಅದುವೆ ಕಾಣಯ್ಯ ತವರೂರು
ಹೋಗಿ ಬಾರಯ್ಯ ತವರೀಗೆ ॥

ಜನಪದ ಹೆಣ್ಣು ಮಗಳೊಬ್ಬಳು ಹಾಡಿನ ಮೂಲಕವಾಗಿಯೇ ತನ್ನ ತವರೂರಿನ ವಿಳಾಸವನ್ನು ಹೇಳುತ್ತಿರುವ ಕ್ರಮ ವಿಶೇಷವಾದುದು. ತಿಮ್ಮರಾಜು ಅವರು ಈ ಹಾಡಿಗೆ ಜೀವ ತುಂಬಿ ಹಾಡುವಾಗ ಜನಪದ ಸಂಸ್ಕೃತಿಯೊಂದು ನಮ್ಮ ಕಣ್ಣಿಗೆ ಕಟ್ಟುತ್ತದೆ.

ಅಪ್ಪಗೆರೆಯವರ ಜೋಳಿಗೆಯಲ್ಲಿ ಹಲವಾರು ತತ್ವಪದಗಳೂ ಇವೆ.

ಜ್ಞಾನಿಯ ಗುಣ ಬೇರೆ ಮನುಜ
ಅಜ್ಞಾನಿಯ ಗುಣ ಬೇರೆ
ಜ್ಞಾನಿಯ ಗುಣವೋ ಗಂಧದ ಮರವೊ
ಅಜ್ಞಾನಿಯ ಗುಣವೊ ಜಾಲಿಯ ಮರವೊ
ಕತ್ತೆ ಕುದುರೆ ಎರಡು ಒಂದೇ ಬಯಲಲಿ ಮೇಯುತ್ತಿರಲು
ಉತ್ತಮ ಕುದುರೆ ದೊರೆಯನು ಸೇರಿತು
ಕತ್ತೆ ಮೈಲಿಗೆ ಬಟ್ಟೆ ಹೊತ್ತು ಹೊತ್ತು ಸಾಯುತ್ತಿತ್ತು
ಹಾಲು–ನೀರನು ಮನುಜ ಹಂಸಗೆ ಇಡುತಿರಲು
ಹಾಲನು ಕುಡಿಯಿತು ನೀರನು ಬಿಟ್ಟಿತು
ಜ್ಞಾನಿಯ ಗುಣ ಬೇರೆ ಮನುಜ ಅಜ್ಞಾನಿಯ ಗುಣ ಬೇರೆ
ಜೇನು ದುಂಬಿ ಎರಡೂ ಒಂದೇ ಕೊಂಬೆಲಿ ಕುಳಿತಿರಲು
ಜೇನು ತುಪ್ಪವು ಶಿವನಿಗೆ ಸೇರಿತು
ಜೇನ ದುಂಬಿಯು ಕೊಂಬೆ ಕೊರೆದು ಕೊರೆದು ಸಾಯುತ್ತಿತ್ತು
ಉಪ್ಪು ಮುತ್ತು ಎರಡು ಒಂದೇ ಕೊಳದಲಿ ಇರುತಿರಲು
ಉಪ್ಪು ಕರಗಿತು ಮುತ್ತು ತೇಲಿತು

ಜ್ಞಾನಿಯ ಗುಣ ಬೇರೆ ಮನುಜ
ಅಜ್ಞಾನಿಯ ಗುಣ ಬೇರೆ

ಜ್ಞಾನಿ–ಅಜ್ಞಾನಿಗಳ ಭಿನ್ನ ಮುಖಗಳನ್ನು ತಿಳಿಯಪಡಿಸುವ ತತ್ವಪದವಿದು. ಜ್ಞಾನಿ ಹಾಗೂ ಅಜ್ಞಾನಿಗಳ ನಡುವಿನ ವ್ಯತ್ಯಾಸವನ್ನು ಜನಪದರು ಬಹು ಸ್ಪಷ್ಟವಾದ ಉದಾಹರಣೆಗಳ ಮೂಲಕ ಈ ಹಾಡಿನಲ್ಲಿ ವಿವರಿಸಿದ್ದಾರೆ. "ಆಧುನಿಕ ಯುವ ಜನಾಂಗವನ್ನು ಇತ್ತೀಚಿನ ಚಲನಚಿತ್ರಗೀತೆಗಳು ಹಾದಿ ತಪ್ಪಿಸುತ್ತಿವೆ" ಎಂಬುದು ಅಪ್ಪಗೆರೆಯವರ ಕಳವಳ. ಗಂಡು ಹೆಣ್ಣಿನ ಪ್ರೀತಿಗೆ ಸಂಬಂಧಿಸಿದ ಅತ್ಯಂತ ಸುಂದರವಾದ ಜನಪದ ಗೀತೆಗಳು ತಿಮ್ಮರಾಜು ಅವರ ಮೌಖಿಕ ಸಂಗ್ರಹದಲ್ಲಿವೆ.

ಬಿಡು ಬಿಡು ಎನ್ನ ಸೆರಗ
ಧಾರವಾಡದ ಹುಡುಗ ಬಿಡು ಮುತ್ತಿನ ಸೆರಗ
ಬಾಗಿಲಲ್ಲಿ ನಿಂತುಕೊಂಡು
ಬಾಳೆಹಣ್ಣು ಹಿಡಿದುಕೊಂಡು
ಬಾರೆ ಬಾರೆ ಎನ್ನುತ್ತಾನೆ । ಬಣಜಿಗರ ಹುಡ್ಗ
ಬಾರೆ ಬಾರೆ ಎನ್ನುತ್ತಾನೆ
ಹಿತ್ತಲಲ್ಲಿ ನಿಂತುಕೊಂಡು
ಕಿತ್ಲೆ ಹಣ್ಣು ಹಿಡಿದುಕೊಂಡು
ಕೊಳ್ಳೆ ಕೊಳ್ಳೆ ಎನ್ನುತ್ತಾನೆ
ಮುತ್ತಂಥ ಹುಡ್ಗ । ಕೊಳ್ಳೆ ಕೊಳ್ಳೆ ಎನ್ನುತ್ತಾನೆ
ಕೋಣೆಯಲ್ಲಿ ನಿಂತುಕೊಂಡು
ಕೊಬ್ರಿಬಟ್ಲು ಹಿಡಿದುಕೊಂಡು
ಕೊಳ್ಳೆ ಕೊಳ್ಳೆ ಎನ್ನುತ್ತಾನೆ । ಕೊಂಪಿಗರ ಹುಡ್ಗ
ಕೊಳ್ಳೆ ಕೊಳ್ಳೆ ಎನ್ನುತ್ತಾನೆ
ದಾರಿಯಲ್ಲಿ ನಿಂತುಕೊಂಡು
ಮಾವಿನಹಣ್ಣು ಹಿಡಿದುಕೊಂಡು
ಮಾವ ನನ್ನ ಕರೆಯುತಾನೆ
ಹುಬ್ಬಳ್ಳಿಯ ಮಾವ
ಮಾವಿನಹಣ್ಣು ಕೊಡುತಾನೆ

"ಆಧುನಿಕ ಕಲಾ ಮಾಧ್ಯಮಗಳು ನಮ್ಮ ನಿಜವಾದ ಆಟ–ಪಾಠಗಳನ್ನು ಮಾಯ ಮಾಡುತ್ತಿವೆ ಎಂಬ ನೋವು ನನ್ನನ್ನು ಯಾವಾಗಲೂ ಕಾಡುತ್ತಿರುತ್ತದೆ. ನಮಗೆ ಗೊತ್ತಿಲ್ಲದ ರೀತಿಯಲ್ಲಿ ನಮ್ಮ ನೈಜವಾದ ಜನಪದ ಕಲೆಗಳು ನಶಿಸಿ ಹೋಗುತ್ತಿವೆ. ಅಷ್ಟೋ ಇಷ್ಟೋ ಉಳಿದಿರುವ ಕಲೆಗಳನ್ನು ಮುಂದಿನವರಿಗಾಗಿ ಉಳಿಸಿಕೊಳ್ಳಬೇಕಾದರೆ ಮತ್ತೆ ಹಳ್ಳಿಯ ಕಡೆ ನಾವು ಮರಳಿ ನಡೆಯಬೇಕಾಗಿದೆ:

ಏರಿಮ್ಯಾಲೆ ಬರುವ ದೊರೆ ಚಂದ

ಏ ಗಿಣಿ ಏ ಗಿಣಿಯೇ
ನನ್ನ ಹೊಟ್ಟೆ ಮ್ಯಾಲಾಡುವ ಮಗ ಚಂದ
ಏ ಗಿಣಿ ಏ ಗಿಣಿಯೇ
ಕಟುಕಟ್ಟೆ ಚಂದ । ಕಟ್ಟೆಯ ಬಾವು ಚಂದ
ಏ ಗಿಣಿ ಏ ಗಿಣಿಯೇ
ನನ್ನ ಹೊಟ್ಟೆ ಮ್ಯಾಲಾಡೋ ಮಗ ಚಂದ
ಏ ಗಿಣಿ ಏ ಗಿಣಿಯೇ
ನನ್ನ ತೋಳ ಮ್ಯಾಲಾಡೋ ಮಗ ಚಂದ
ಏ ಗಿಣಿ ಏ ಗಿಣಿಯೇ
ಕಾರೆ ಕಾಯಿ ಚಂದ
ಕಾರೆಯ ಹೂ ಚಂದ
ಏ ಗಿಣಿ ಏ ಗಿಣಿಯೇ
ನಾನು ಕಾರೂರಿಗೋಗಿ ಬರುತೀನಿ
ಏ ಗಿಣಿ ಏ ಗಿಣಿಯೇ ॥

ಜಾನಪದದ ಕುರಿತು ಏನೂ ಅರಿಯದೇ ಇರುವವರು ಈ ಕ್ಷೇತ್ರದಲ್ಲಿ ಅಧಿಕಾರ ಪಡೆದುಕೊಳ್ಳುತ್ತಿದ್ದಾರೆ. ಹಿಂದೂಸ್ಥಾನಿ ಸಂಗೀತಗಾರರನ್ನು ಜಾನಪದ ಅಕಾಡೆಮಿ ಸದಸ್ಯರನ್ನಾಗಿಯೂ, ನಾಟಕ ಅಥವಾ ರಂಗಭೂಮಿಯವರನ್ನು ಜಾನಪದ ಅಕಾಡೆಮಿ ಸದಸ್ಯರನ್ನಾಗಿಯೂ ಮಾಡುವುದು ಸರ್ಕಾರದ ಬೇಜವಾಬ್ದಾರಿತನವನ್ನು ಸೂಚಿಸುತ್ತದೆ. ಇಂಥ ಅವ್ಯವಸ್ಥೆಯು ಕಲಾ ಪರಂಪರೆಗಳಿಗೆ ಹಿನ್ನಡೆಯನ್ನು ತರುತ್ತವೆ" ಎಂಬ ತಿಮ್ಮರಾಜು ಅವರ ಮಾತುಗಳಲ್ಲಿ ಅತೀವವಾದ ಆತಂಕವಿರುವುದು ತೋರಿ ಬರುತ್ತದೆ.

೭. ಕ್ರಾಂತಿಕವಿಗೆ ದನಿಯಾಗಿ

ಶತಮಾನಗಳಿಂದ ದಮನಕ್ಕೊಳಗಾಗಿ ಧ್ವನಿ ಕಳೆದುಕೊಂಡಿದ್ದ ಜನವರ್ಗದ ಪರವಾಗಿ ಸಿದ್ಧಲಿಂಗಯ್ಯನಂಥ ಕವಿಗಳು ಮಾತನಾಡಲು ಹೊರಟರು. ಸಾಹಿತ್ಯದ ಮೂಲಕ ಸೋತವರ ದನಿಯಾಗಿ ನಿಂತರು. ಅಂಥ ಸಾಹಿತ್ಯವನ್ನು ಪರಿಣಾಮಕಾರಿಯಾಗಿ ಜನ ಸಾಮಾನ್ಯರ ಮನೆಮನೆಗೆ ತಮ್ಮ ಗಾಯನದ ಮೂಲಕ ತಲುಪಿಸಿದ ಮುಖ್ಯರಲ್ಲಿ ಅಪ್ಪಗೆರೆಯವರೂ ಒಬ್ಬರು. ಯಾರಿಗೆ ಬದುಕಿಲ್ಲವೋ ಅವರ ಬದುಕು ಸ್ವತಂತ್ರವಾಗಬೇಕೆಂದು ಬಯಸಿ ಕ್ರಾಂತಿಗೀತೆಗಳನ್ನು ಹಾಡಲು ಆರಂಭಿಸಿದ್ದರು ಅಪ್ಪಗೆರೆ. ಸೆಂಟ್ರಲ್ ಕಾಲೇಜಿನ ಓದಿನ ದಿನಗಳಿಂದಲೇ ಲಂಕೇಶ್, ಸಿದ್ಧಲಿಂಗಯ್ಯ ಮೊದಲಾದವರ ಸಾಮೀಪ್ಯ ನೋವಿನ ಪರವಾದ ದನಿಯೆತ್ತುವುದಕ್ಕೆ ಬೇಕಾದ ಪ್ರೇರಣೆಯನ್ನು ಇವರಿಗೆ ನೀಡಿತ್ತು. ಪರಿಣಾಮವಾಗಿ ಸಿದ್ಧಲಿಂಗಯ್ಯನವರ ಸಾವಿರಾರು ನದಿಗಳು, ೪೭ರ ಸ್ವಾತಂತ್ರ್ಯ, ಚೋಮನ ಮಕ್ಕಳ ಹಾಡು ಮೊದಲಾದ ಹಲವಾರು ಹಾಡುಗಳನ್ನು ತಿಮ್ಮರಾಜು ಹಾಡಿದ್ದಾರೆ. ಸೆಂಟ್ರಲ್ ಕಾಲೇಜಿನ ತಮ್ಮ ಉನ್ನತ ವ್ಯಾಸಂಗದ ಆರಂಭದ ದಿನಗಳಲ್ಲಿ ಮಾತ್ರ ತಾನು ಹೋರಾಟದ ಹಾಡುಗಳನ್ನು ಹಾಡುತ್ತಿದ್ದೆನೆಂದು ಅವರು ಹೇಳಿಕೊಳ್ಳುತ್ತಾರೆ. ಸಿದ್ಧಲಿಂಗಯ್ಯನವರ 'ಸಾವಿರಾರು ನದಿಗಳು' ಕರ್ನಾಟಕದಲ್ಲಿ ದಲಿತ ಚಳುವಳಿಯ ಸಂದರ್ಭದಲ್ಲಿ ಪ್ರೇರಣೆಯನ್ನೊದಗಿಸಿದ ಒಂದು ಪ್ರಮುಖವಾದ ಕಾವ್ಯ.

ನಿನ್ನೆ ದಿನ ನನ್ನ ಜನ
ಬೆಟ್ಟದಂತೆ ಬಂದರು
ಕಪ್ಪು ಮುಖ ಬೆಳ್ಳಿಗಡ್ಡ ಉರಿಯುತಿರುವ ಕಣ್ಣುಗಳು
ಹಗಲು ರಾತ್ರಿಗಳನು ಸೀಳಿ ನಿದ್ದೆಯನ್ನು ಒದ್ದರು
ಕಂಬಳಿಗಳು ಕೊರಗಿದವು ಎದ್ದೇಳುವ ರೊಚ್ಚಿಗೆ
ಭೂಕಂಪನವಾಯಿತು ಅವರು ಕುಣಿದ ಹುಚ್ಚಿಗೆ
ಇರುವೆಯಂತೆ ಹರಿವಸಾಲು ಹುಲಿಸಿಂಹದ ದನಿಗಳು
ಧಿಕ್ಕಾರ ಧಿಕ್ಕಾರ ಅಸಮಾನತೆಗೆ
ಎಂದೆಂದಿಗೂ ಧಿಕ್ಕಾರ ಶ್ರೀಮಂತರ ಸೊಕ್ಕಿಗೆ
ಲಕ್ಷಾಂತರ ನಾಗರುಗಳು ಹುತ್ತಬಿಟ್ಟು ಬಂದಂತೆ
ಊರತುಂಬ ಹರಿದರು
ಪಾತಾಳಕೆ ಇಳಿದರು
ಆಕಾಶಕೆ ನೆಗೆದರು
ಬೀದಿಯಲ್ಲಿ ಗಲ್ಲಿಯಲ್ಲಿ
ಬೇಲಿ ಮೆಳೆಯ ಮರೆಯಲ್ಲಿ
ಇವರು ಬಾಯಿ ಬಿಟ್ಟೊಡನೆ

ಅವರು ಬಾಯಿ ಕಟ್ಟಿತು
ಇವರ ಕಂಠ ಕೇಳಿದೊಡನೆ
ಅವರ ದನಿ ಇಂಗಿತು
ಕ್ರಾಂತಿಯ ಬಿರುಗಾಳಿಯಲ್ಲಿ ಕೈಬೀಸಿದ ನನ್ನ ಜನ
ಛಡಿಯ ಏಟು ಹೊಡೆದವರ
ಕುತ್ತಿಗೆಗಳ ಹಿಡಿದರು
ಪೋಲಿಸರ ದೊಣ್ಣೆಗಳು ಏಜೆಂಟರ ಕತ್ತಿಗಳು
ವೇದಶಾಸ್ತ್ರ ಪುರಾಣ ಬಂದೂಕದ ಗುಡಾಣ
ತರಗೆಲೆ ಕಸಕಡ್ಡಿಯಾಗಿ
ತೇಲಿ ತೇಲಿ ಹರಿದವು
ಹೋರಾಟದ ಸಾಗರಕ್ಕೆ
ಸಾವಿರಾರು ನದಿಗಳು

ಸಾವಿರಾರು ನದಿಗಳಂಥ ಸುಮಾರು ಎಂಭತ್ತಕ್ಕೂ ಹೆಚ್ಚು ಹಾಡುಗಳನ್ನು ಬರೆದಿರುವ ಸಿದ್ಧಲಿಂಗಯ್ಯನವರ ಜೊತೆಗಿನ ಬಾಂಧವ್ಯವನ್ನು ಅಪ್ಪಗೆರೆಯವರು ಬಹುವಾಗಿ ನೆನೆಯುತ್ತಾರೆ. ಸಿದ್ಧಲಿಂಗಯ್ಯನವರ ಆರಂಭದ ಕಾವ್ಯಗಳಲ್ಲಿ ಬಂಡಾಯದ ಕೂಗುಗಳಿವೆ. ಸರಳ ಆಕ್ರೋಶ ಆಕಾಂಕ್ಷೆಗಳ ಲಯಗಳಿಂದ ಹೆಚ್ಚು ಬಹುಮುಖಿಯಾದ ದಲಿತ ಸಮಷ್ಟಿಯ ಸೃಷ್ಟಿ ಕವಿಯ ಕಮ್ಮಟದಲ್ಲಿ ನಡೆಯತೊಡಗಿದೆ"[೧] ಎಂಬ ಡಿ.ಆರ್. ನಾಗರಾಜರ ಮಾತುಗಳನ್ನು ಗಮನಿಸಬೇಕು. ಸಾಮಾಜಿಕವಾದ ಈ ಬಗೆಯ ತಲ್ಲಣಗಳಿಗೆ ಅಪ್ಪಗೆರೆಯವರೂ ಸ್ವತಃ ಒಳಗಾದ ಸಂದರ್ಭಗಳು ಇದ್ದುವೆಂಬುದನ್ನು ಅವರು ಹಂಚಿಕೊಂಡ ಅನುಭವಗಳಿಂದ ತಿಳಿದುಕೊಳ್ಳಬಹುದಾಗಿದೆ. "ಅವಮಾನಗಳಾದಷ್ಟೂ ಛಲ ಬರುತ್ತೆ. ಅವಮಾನ ಆದಾಗ ಅದನ್ನು ಸನ್ಮಾನವೆಂದು ಭಾವಿಸಬೇಕು. ಯಾರು ಅವಮಾನ ಮಾಡ್ತಾರೋ ಅವರನ್ನು ಪ್ರೀತಿಸಿ. ಯಾಕಂದ್ರೆ ಅವರು ಅವಮಾನ ಮಾಡಿದ್ದಕ್ಕೇ ನಾವು ಹಠದಿಂದ ದೊಡ್ಡವರಾಗಿರ್ತೀವಿ" ಎಂಬ ತಿಮ್ಮರಾಜು ಅವರ ಮಾತುಗಳನ್ನು ಗಮನಿಸಬೇಕು.

ಯಾರಿಗೆ ಬಂತು ಎಲ್ಲಿಗೆ ಬಂತು
ನಲವತ್ತೇಳರ ಸ್ವಾತಂತ್ರ್ಯ
ಟಾಟಾ ಬಿರ್ಲಾ ಜೋಬಿಗೆ ಬಂತು
ಜನಗಳ ತಿನ್ನುವ ಬಾಯಿಗೆ ಬಂತು
ನಲವತ್ತೇಳರ ಸ್ವಾತಂತ್ರ್ಯ
ಸಾವಿರಾರು ಜನ ಗೋರಿಯಾದರು
ಲಕ್ಷ ಲಕ್ಷ ಜನ ಗಲ್ಲಿಗೇರಿದರು
ರೈತ ಕಾರ್ಮಿಕರು ರಕ್ತವ ಕೊಟ್ಟರು
ಯಾರಿಗೆ ಬಂತು ಸ್ವಾತಂತ್ರ್ಯ

ನಲವತ್ತೇಳರ ಸ್ವಾತಂತ್ರ್ಯ
ಪೋಲೀಸರ ಬೂಟಿಗೆ ಬಂತು
ಮಾಲೀಕರ ಚಾಟಿಗೆ ಬಂತು
ಬಂದೂಕದ ಗುಂಡಿಗೆ ಬಂತು
ನಲವತ್ತೇಳರ ಸ್ವಾತಂತ್ರ್ಯ
ಪಾರ್ಲಿಮೆಂಟಿನ ಕುರ್ಚಿಯ ಮೇಲೆ
ವರ್ಷಗಟ್ಟಲೆ ಚರ್ಚೆಗೆ ಕೂತು
ಬಡವರ ಬೆವರು ರಕ್ತವ ಕುಡಿದು
ಏಳಲೆ ಇಲ್ಲ ಸ್ವಾತಂತ್ರ್ಯ
ನಲವತ್ತೇಳರ ಸ್ವಾತಂತ್ರ್ಯ
ಯಾರಿಗೆ ಬಂತು ಎಲ್ಲಿಗೆ ಬಂತು
ನಲವತ್ತೇಳರ ಸ್ವಾತಂತ್ರ್ಯ [೨]

ಹೀಗೆ ಅಪ್ಪಗೆರೆಯವರು ಕ್ರಾಂತಿಗೀತೆಗಳನ್ನು ಹಾಡಲು ತೊಡಗಿದರೂ, ದಲಿತ ಚಳುವಳಿಯಲ್ಲಿ ತಾನು ಹೆಚ್ಚು ಕಾಲ ಉಳಿದಿಲ್ಲವೆಂದು ಅವರೇ ಹೇಳಿಕೊಳ್ಳುತ್ತಾರೆ. "ಯಾರಿಗೆ ಬಂತು ಎಲ್ಲಿಗೆ ಬಂತು ನಲವತ್ತೇಳರ ಸ್ವಾತಂತ್ರ್ಯ ಎನ್ನುವಲ್ಲಿಗೆ ಕ್ರಾಂತಿಗೀತೆಗಳನ್ನು ಹಾಡುವುದನ್ನು ನಿಲ್ಲಿಸಿ ಬಿಟ್ಟೆ, ಬದಲಾಗಿ ಅದೇ ಕವಿಯ ಬೇರೆ ಹಾಡನ್ನು ಹಾಡಲು ಶುರುಮಾಡಿದೆ.

ಆ ಬೆಟ್ಟದಲ್ಲಿ ಬೆಳದಿಂಗಳಲ್ಲಿ
ಸುಳಿದಾಡಬೇಡ ಗೆಳತಿ
ಚೆಲುವಾದ ನಿನ್ನ ಮಲ್ಲಿಗೆಯ ಮೈಯ
ಸುಟ್ಟಾವು ಬೆಳ್ಳಿ ಕಿರಣ

ಹಾಡು ಬದಲಾಯಿತು. ಕಾರಣ ಅಲ್ಲಿಗೆ ಕ್ರಾಂತಿ ಮುಗಿದಿತ್ತು" ಎನ್ನುತ್ತಾರೆ ತಿಮ್ಮರಾಜು.

೮. ಅಪ್ಪಗೆರೆ: ಸಾಧನೆಯ ಹಾದಿ

ಅಪ್ಪಗೆರೆಯವರು ೧೯೭೦ ರ ಸುಮಾರಿಗೆ ಜನಪದ ಗೀತೆಗಳನ್ನು ಹಾಡಲು ಪ್ರಾರಂಭಿಸಿದರು. ಈ ಹೊತ್ತಿಗಾಗಲೇ ಹಲವಾರು ಚಿಕ್ಕ ಪುಟ್ಟ ಬಹುಮಾನಗಳೂ ಅವರಿಗೆ ಬಂದಿದ್ದವು. ೧೯೭೬ರಲ್ಲಿಯೇ ಆಕಾಶವಾಣಿಯಲ್ಲಿ ಹಾಡಲು ಅವಕಾಶ ದೊರೆಯಿತು. ಹಳ್ಳಿಯ ವಾತಾವರಣದಲ್ಲಿ ಬೆಳೆದು ಬಂದಿದ್ದ ತಿಮ್ಮರಾಜು ಅವರಿಗೆ ಆಕಾಶವಾಣಿಯಲ್ಲಿ ಹಾಡಲು ಅವಕಾಶ ದೊರೆತದ್ದು ಅವರ ಬದುಕಿನ ಅತ್ಯಂತ ಮುಖ್ಯವಾದ ಮೈಲುಗಲ್ಲು. ಈ ನಡುವೆ 'ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ'ಯವರು ಆಯೋಜಿಸುತ್ತಿದ್ದ 'ಯುವಜನ ಮೇಳ'ಗಳಲ್ಲಿ ಭಾಗವಹಿಸಿ ಹಲವಾರು ಬಹುಮಾನ ಪಡೆದುಕೊಂಡಿದ್ದರು. ೧೯೮೧ರಲ್ಲಿ ಧಾರವಾಡದಲ್ಲಿ ನಡೆದ ರಾಜ್ಯಮಟ್ಟದ ಯುವಜನ ಮೇಳದಲ್ಲಿ ಜನಪದ ಗೀತೆಗೆ ಪ್ರಥಮ ಸ್ಥಾನವನ್ನು ಪಡೆದುಕೊಂಡರು. ೧೯೮೩ರಲ್ಲಿ ದೂರದರ್ಶನದಲ್ಲಿ ಹಾಡಲು ಪ್ರಾರಂಭಿಸುವ ಮೂಲಕ ಟಿ.ವಿ.ಯಂಥ ಪ್ರಭಾವೀ ದೃಶ್ಯ ಮಾಧ್ಯಮದಲ್ಲೂ ತಿಮ್ಮರಾಜು ಪ್ರವೇಶ ಪಡೆದರು. ಅದೇ ವರ್ಷ ದೆಹಲಿಯಲ್ಲಿ ನಡೆದ ಗಣರಾಜ್ಯೋತ್ಸವದಲ್ಲೂ ಜನಪದ ಗಾಯಕರಾಗಿ ಭಾಗವಹಿಸಿದರು. ೧೯೮೪ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ 'ಕಲ್ಚರಲ್ ಚಾಂಪಿಯನ್' ಆಗಿ ಆಯ್ಕೆಯಾದರು. ೧೯೯೧ರಲ್ಲಿ ಪ್ರತಿಷ್ಠಿತ 'ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ'ಯ ಸದಸ್ಯರಾಗಿ ನೇಮಕಗೊಂಡರು. ೧೯೯೭ರಲ್ಲಿ ನಡೆದ ರಾಷ್ಟ್ರೀಯ ಕ್ರೀಡಾ ಕೂಟದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ನಿರ್ವಹಣೆ ಮಾಡಿದ ಹೆಗ್ಗಳಿಕೆ ಇವರದ್ದು. ೧೯೯೩ರಲ್ಲಿ ಜನಪದ ಕರಕುಶಲ ಕಾರ್ಯಾಗಾರವನ್ನು ಬೆಂಗಳೂರಿನ ವಿದ್ಯಾನಗರದಲ್ಲಿ ಅಯೋಜಿಸಿ, ಕರಕುಶಲ ಕಲೆಗಳ ಕುರಿತಂತೆ ಯುವಜನರಲ್ಲಿ ಎಚ್ಚರ ಮೂಡಿಸುವ ಪ್ರಯತ್ನವನ್ನು ಮಾಡಿದ್ದಾರೆ. ೧೯೯೪ರಲ್ಲಿ ರಾಜ್ಯಮಟ್ಟದ ಜಾನಪದ ವೇಷಭೂಷಣ ಕಾರ್ಯಾಗಾರವನ್ನು ಬೆಂಗಳೂರಿನ ವಿದ್ಯಾನಗರದಲ್ಲಿ ಆಯೋಜಿಸಿದ್ದಾರೆ. ಅಲ್ಲದೇ, ಬೆಂಗಳೂರಿನಂಥ ಮಹಾನಗರದಲ್ಲಿ ದೇಸೀ ಮೂಲ ಸಂಸ್ಕೃತಿಯ ಕುರಿತಂತೆ, ಯುವಪೀಳಿಗೆಯು ಆಸಕ್ತಿಯನ್ನು ಕಳೆದುಕೊಳ್ಳುತ್ತಿರುವ ನಿಟ್ಟಿನಲ್ಲಿ, ರಾಜ್ಯದ ಯುವಜನತೆಗಾಗಿ ೧೯೯೬ರಲ್ಲಿ ರಾಜ್ಯಮಟ್ಟದ ಜಾನಪದ ಗೀತ ಗಾಯನ ತರಬೇತಿಯನ್ನು ಬೆಂಗಳೂರಿನಲ್ಲಿ ಆಯೋಜಿಸಿದ್ದರು. ೧೯೯೬ರಲ್ಲಿ ಮಡಿಕೇರಿಯ ತಿತಿಮತಿಯಲ್ಲಿ ರಾಜ್ಯಮಟ್ಟದ ಜನಪದ ಗೀತ ಗಾಯನ ತರಬೇತಿಯನ್ನು ಏರ್ಪಡಿಸಿದರು. ಮತ್ತೆ ೨೦೧೦ರಲ್ಲಿ ಯವನಿಕಾ–ಬೆಂಗಳೂರಿನಲ್ಲಿಯೂ ಜನಪದ ಗೀತೆಗಳ ಗಾಯನ ತರಬೇತಿಯನ್ನು ನಿರ್ದೇಶಿಸುವ ಮೂಲಕ ಹಲವಾರು ಯುವ ಜನಪದ ಕಲಾವಿದರುಗಳನ್ನು ಹುಟ್ಟು ಹಾಕಿದರು. ತಮ್ಮ ಗಾಯನ ಕಲೆಯನ್ನು ಜೀವಂತವಾಗಿ ಉಳಿಸುವ ಉದ್ದೇಶದಿಂದ ಧ್ವನಿ ಸುರುಳಿಗಳನ್ನೂ ಇವರು ಹೊರತಂದಿದ್ದಾರೆ. 'ತಿಂಗಾಳು ಮುಳುಗಿದವೊ',

'ಉದುರು ಉದುರು ಮಲ್ಲಿಗೆ', 'ನಾವು ಮನುಜರು', 'ಜಲದ ಗೆರೆಯಮ್ಮ', 'ಸುವರ್ಣ ಸ್ವಾತಂತ್ರ್ಯ ಗೀತೆಗಳು', 'ಕೃಷಿ ಗೀತೆಗಳು', 'ಗಾಡಿಯ ದಾರಿ ಸಾಗಲಿ', 'ಜನಪದ ಜೋಗಿ', 'ಜನಪದ ಮಲ್ಲಿಗೆ', 'ಗಾಂಧೀ ಗೀತೆಗಳು', 'ಕನಕದಾಸರ ಗೀತೆಗಳು', 'ಸಾಕ್ಷರ ಗೀತೆಗಳು' ಇವು ಮುಖ್ಯವಾದ ಧ್ವನಿಸುರುಳಿಗಳು.

ಲೇಖಕರಾಗಿ ಅಪ್ಪಗೆರೆ

ಸಂಗೀತದ ಜೊತೆ ಜೊತೆಗೆ ಬರವಣಿಗೆಯಲ್ಲೂ ತಮ್ಮನ್ನು ತಾವು ತೊಡಗಿಸಿಕೊಂಡು 'ಚೆಲ್ಲಿದರು ಮಲ್ಲಿಗೆಯ', 'ಜನಪದ ರಸಬಳ್ಳಿ', 'ಗ್ರಾಮ ಗಂಧರ್ವರು', 'ಶಿಕ್ಷಣ ಸೌಂದರ್ಯ', 'ಅವ್ವನ ಹಾಡುಗಳು', 'ತಿಳಿವಳಿಕೆ ಮತ್ತು ನಡವಳಿಕೆ' ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಇವರ 'ಅವ್ವನ ಹಾಡುಗಳು' ಹಾಗೂ 'ಚೆಲ್ಲಿದರು ಮಲ್ಲಿಗೆಯ' ಕೃತಿಗಳಲ್ಲಿ ಕನ್ನಡದ ಹಲವು ಜನಪದ ಗೀತೆಗಳನ್ನು ಸಂಗ್ರಹಿಸಿ ನೀಡಲಾಗಿದೆ. ಈ ಗೀತೆಗಳಲ್ಲಿ ಹಲವು ಈಗಾಗಲೇ ತಿಮ್ಮರಾಜು ಅವರನ್ನೂ ಒಳಗೊಂಡಂತೆ, ಕನ್ನಡದ ಹಲವಾರು ಕಲಾವಿದರು ಹಾಡಿರುವ ಗೀತೆಗಳಾಗಿವೆ. 'ಅವ್ವನ ಹಾಡುಗಳು' ಪುಸ್ತಕದ ಮುನ್ನುಡಿಯಲ್ಲಿ ಅಪ್ಪಗೆರೆ ಹೀಗೆ ಹೇಳುತ್ತಾರೆ. "ನಮ್ಮ ನಿಮ್ಮ ತಾಯಂದಿರಾದ ಅವ್ವಂದಿರ ಒಡಲಿಂದ ಬಂದ ಬಿಂಕ ಬಿನ್ನಾಣದ ಹಾಡುಗಳ ಚಿತ್ತಾರವೇ ಇರುವುದರಿಂದ ಇದಕ್ಕೆ 'ಅವ್ವನ ಹಾಡುಗಳು' ಎಂದೇ ಹೆಸರು ಕೊಟ್ಟಿದ್ದೇನೆ. ಯಾರಿಗೂ ಹೇಳಿಕೊಳ್ಳಲಾಗದ ಸ್ಥಿತಿಯಲ್ಲಿದ್ದರೇನೋ, ಆದ ಕಾರಣ ಇಂತಹ ಹಾಡುಗಳನ್ನು ಅವರ ಎದೆಯಿಂದ ನಮ್ಮೆದೆಗೆ ನೇರವಾಗಿ ಹರಿಸಿದ್ದಾರೆ".[೩] 'ತಿಳುವಳಿಕೆ ಮತ್ತು ನಡವಳಿಕೆ' ಜಾನಪದ ಕುರಿತಾದ ಅಪ್ಪಗೆರೆಯವರ ಚಿಂತನೆಗಳ ಸಂಗ್ರಹ. 'ಜಾನಪದ ಐಸಿರಿ' ಗುಂಡೀಗೆರೆ ವಿಶ್ವನಾಥ್ ಹಾಗೂ ಎಸ್. ರಾಮಲಿಂಗೇಶ್ವರ ಅವರು ಸಂಪಾದಿರಿಸಿರುವ ಕೃತಿ. ಇದು ಕೂಡ ತಿಮ್ಮರಾಜು ಅವರ ಜಾನಪದ ಚಿಂತನ ಬರಹಗಳ ಸಂಗ್ರಹ. ತಿಮ್ಮರಾಜುರವರ ಹಾಡಿಗೆ ನಲವತ್ತು ವರ್ಷಗಳು ತುಂಬಿದಾಗ ಈ ಕೃತಿಯನ್ನು ಹೊರತಂದಿದ್ದಾರೆ. ಬುದ್ಧ, ಬಸವ, ಗಾಂಧಿ ಸಾಂಸ್ಕೃತಿಕ ಟ್ರಸ್ಟ್‌ನವರು ಮೂರನೆಯ ರಾಜ್ಯಮಟ್ಟದ ಸಾಹಿತ್ಯ-ಸಂಸ್ಕೃತಿ ಸಮಾವೇಶವನ್ನು ನಡೆಸಿದಾಗ ಅಪ್ಪಗೆರೆಯವರು ಈ ಸಮಾವೇಶದ ಅಧ್ಯಕ್ಷರಾಗಿದ್ದರು. ಜಾನಪದ ಐಸಿರಿ ಕೃತಿಯು ಅಪ್ಪಗೆರೆಯವರ 'ಅಭಿನಂದನಾ' ಕೃತಿ. ಇಷ್ಟೇ ಅಲ್ಲದೆ, 'ಕಲಾಸ್ಪಂದನಾ'ಗಳಂಥ ಕನ್ನಡದ ಹಲವಾರು ಪತ್ರಿಕೆಗಳಿಗೆ ಜಾನಪದದ ಅಳಿವು ಉಳಿವಿನ ಕುರಿತಂತೆ ನಿರಂತರವಾಗಿ ಲೇಖನಗಳನ್ನು ಬರೆಯುತ್ತಾ ಬಂದಿರುವುದು, ಅವರ ಚಿಂತನೆಯ ಮುಖಗಳನ್ನು ತೋರಿಸುತ್ತದೆ.

೯. ಅಪ್ಪಗೆರೆಯಿಂದ ಅಮೇರಿಕಾದವರೆಗೆ

ತಿಮ್ಮರಾಜು ಅವರ ಬದುಕಿನ ಆರಂಭದ ದಿನಗಳನ್ನು ಗುರುತಿಸಿದರೆ, ಅವರು ಬೆಂಗಳೂರಿನಂಥ ಮಹಾನಗರಕ್ಕೆ ಬಂದುದೇ ಸಾಧನೆಯಾಗಿ ಕಾಣುತ್ತದೆ. ಆದರೆ ಎಲ್ಲಾ ಅಡೆತಡೆಗಳನ್ನು ಮೀರಿ ಅಪ್ಪಗೆರೆಯಿಂದ ಅಮೇರಿಕಾಕ್ಕೆ ಹಾರಿದ ತಿಮ್ಮರಾಜುರವರ ಬದುಕು ಇತರರಿಗೆ ಮಾರ್ಗದರ್ಶಿ. ಇವರ ಗಾಯನ ಪ್ರತಿಭೆಯನ್ನು ಗಮನಿಸಿ 'ಕನ್ನಡ ಮತ್ತು ಸಂಸ್ಕೃತಿ ಇಲಾಖೆ'ಯವರು ದೆಹಲಿ, ಗೋವಾ, ನೈನಿತಾಲ್, ಉತ್ತರ ಪ್ರದೇಶ, ಬಾಂಬೆ, ಮಧ್ಯಪ್ರದೇಶ, ಚೆನ್ನೈ, ಹೈದರಾಬಾದ್, ಪಾಂಡಿಚೇರಿ ಹಾಗೂ ನೇಪಾಳಗಳಲ್ಲಿ ವೇದಿಕೆಗಳನ್ನು ಒದಗಿಸಿಕೊಟ್ಟರು. ೧೯೯೮ರ ಫೆಬ್ರವರಿಯಲ್ಲಿ ತನ್ನ ಸಾಧನೆಯ ಇನ್ನೊಂದು ದೊಡ್ಡ ಮೈಲುಗಲ್ಲೆಂಬಂತೆ ಅಪ್ಪಗೆರೆಯವರು ಅಮೇರಿಕಾ ಪ್ರವಾಸ ಕೈಗೊಂಡರು. ಅರಿಜೋನಾದ ಫೀನಿಕ್ಸ್, ನ್ಯೂಯಾರ್ಕ್, ವಾಷಿಂಗ್‌ಟನ್, ಸ್ಯಾನ್‌ಫ್ರಾನ್ಸಿಸ್ಕೋ, ಫಿಟ್ಸ್‌ಬರ್ಗ್, ರ್‍ಯಾಲೆ, ಫ್ಲಿಂಟ್, ಫ್ಲಾರಿಡಾ, ಸ್ಯಾನ್‌ಬಿಸೆ, ಬಾಸ್ಟನ್, ನ್ಯೂ ಇಂಗ್ಲೆಂಡ್, ಚಾರ್ಲ್‌ಸ್ಟನ್ ಹೀಗೆ ಅಮೇರಿಕಾದ ಪ್ರಮುಖ ಸ್ಥಳಗಳಲ್ಲಿ ಅಪ್ಪಗೆರೆ ಕನ್ನಡದ ಕಂಪನ್ನು ಪಸರಿಸಿದ್ದಾರೆ. ೨೦೦೨ರಲ್ಲಿ ಮತ್ತೊಮ್ಮೆ ಅಪ್ಪಗೆರೆಯವರಿಗೆ ಅಮೇರಿಕಾದ 'ಅಕ್ಕ ಸಮ್ಮೇಳನ'ದಲ್ಲಿ ಭಾಗವಹಿಸುವುದಕ್ಕೆ ಅವಕಾಶ ದೊರೆಯಿತು. "ಈ ಅವಕಾಶ ನನಗೊಂದು ಅಪರೂಪದ ಅನುಭವ"ವೆಂದು ಹೆಮ್ಮೆಯಿಂದ ಹೇಳುತ್ತಾರೆ ತಿಮ್ಮರಾಜು.

ಕೇವಲ ಜನಪದ ಗೀತೆಗಳನ್ನು ಹಾಡುವುದು ಮಾತ್ರವಲ್ಲದೆ, ಹಲವು ನಾಟಕಗಳಿಗೆ ಇವರು ಸಂಗೀತ ಸಂಯೋಜನೆ ಮಾಡಿರುವುದನ್ನು ಕಾಣಬಹುದಾಗಿದೆ. ದೊಡ್ಡಪ್ಪ, ಸಾಕ್ಷಿಕಲ್ಲು, ಸತ್ಯಾಶರಣೆ ಸಂಕಮ್ಮ, ಸೂರ್ಯಶಿಕಾರಿ, ಮರುಳ ಮಂಗಳದಾಸ, ನುಚ್ಚಾಯ್ತು ನೀರ ಹೊಳೆಯಾಗೆ ಇವು ತಿಮ್ಮರಾಜು ಅವರು ಸಂಗೀತ ಸಂಯೋಜಿಸಿದ ಕೆಲವು ನಾಟಕಗಳು.

೧೦. ಅಪ್ಪಗೆರೆಯವರ ಆಯ್ದ ಲೇಖನಗಳು

(೧) ಕಾಲದ ಹೆಜ್ಜೆ ಜಾನಪದದ ಗೆಜ್ಜೆ

ಜಾನಪದ ಬಾಯಿಂದ ಬಾಯಿಗೆ ಹರಿದು ಬಂದ, ತೋಂಡಿ ಸಂಪ್ರದಾಯದ ಕುರುಹು. ಈ ದೇಶಕ್ಕೆ ರೈತ ಬೆನ್ನೆಲುಬಾಗಿರುವಂತೆ ಜನ ಸಮುದಾಯದ ಸಂಸ್ಕೃತಿಯು ಜಾನಪದದ ಬೆನ್ನೆಲುಬು. ಆಯಾ ದೇಶದ ಜಾನಪದ ಚರಿತ್ರೆ ತಿಳಿಯದವನು ರಾಜನೂ ಆಗಲಾರ ಮತ್ತು ಮನುಷ್ಯನೂ ಆಗಲಾರ ಎಂಬ ಜಾನಪದ ಜ್ಞಾನಿ ಫ್ರಾನ್ಸಿಸ್ ಗ್ರಾಸ್‌ರ ಮಾತು ಅಕ್ಷರಶಃ ಸತ್ಯ. ಬ್ರಿಟಿಷರು ಗುರುತಿಸುವವರೆಗೆ ನಮಗೂ ಅಷ್ಟಾಗಿ ಜಾನಪದದ ಅರಿವು ಗೊತ್ತಿರಲಿಲ್ಲ. ಕಿಟ್ಟೆಲ್, ಗೋವರ್, ಫ್ಲೀಟ್‌ರಂತಹ ವಿದೇಶಿಯರ ಕಾಣ್ಕೆಯಿಂದಾಗಿ ಜಾನಪದ ಜ್ಞಾನ ಹೆಚ್ಚಾಗಿದ್ದು ಸುಳ್ಳಲ್ಲ. ಜನಸಾಮಾನ್ಯರ ಮನೆ–ಮನದಲ್ಲಿ, ಬಾಳ ಪಯಣದಲ್ಲಿ ಅನುಭವಿಸಿದ ನೋವು ನಲಿವುಗಳೇ ಜಾನಪದದ ಸತ್ವ, ಜೀವನಾನುಭವಗಳು ಹಾಡಾಗಿ, ಗಾದೆಗಳಾಗಿ ಜಾನಪದವಾಗಿ ಬೆಳೆದು ಬಂದಿವೆ. ಪೇಪರು, ಪೆನ್ನು ಮತ್ತು ಶಾಲೆಯೇ ಇಲ್ಲದೆಯೇ ಯಾವುದನ್ನು ದಾಖಲು ಮಾಡಲಾಗದ ಕಾಲದಲ್ಲಿ ಜನಸಾಮಾನ್ಯರು ಹಾಡಿದ ಕಥನ ಗೀತೆಗಳು, ಕೋಲಾಟದ ಪದಗಳು, ಸಂಪ್ರದಾಯದ ಪದಗಳು, ಕುಟ್ಟುವ–ಬೀಸುವ ಪದಗಳು, ಬಿತ್ತುವ ಪದಗಳು, ಸುಗ್ಗಿ ಪದಗಳು, ಹೆಣ್ಣಿನ ನೋವು, ಮನುಷ್ಯ ಸಂಬಂಧಗಳ ಗೋಳು, ಭಾವುಕತೆಯನ್ನು ಅಗಾಧವಾಗಿ ಕಟ್ಟಿ ಹೇಳಿರುವುದನ್ನು ಇಂದಿನ ಯುವ ಪೀಳಿಗೆ ಅಧ್ಯಯನ ಮಾಡಬೇಕಾಗಿದೆ. ಹಾಗಾದಾಗ ಜಾನಪದ ಇನ್ನೂ ಎತ್ತರಕ್ಕೆ ಬೆಳೆಯುತ್ತದೆ. ಬದುಕಿನೊಡನೆ ಬೆಸೆದುಕೊಂಡು ಬೆಳೆದ ಜಾನಪದವು ನೋವು–ನಲಿವಿನ ದರ್ಶನ ಮಾಡಿಸುತ್ತದೆ. ಇಂತಹ ಕಲೆ ಇಂದು ತನ್ನ ಗೌರವ ಕಳೆದುಕೊಳ್ಳುತ್ತಾ ಬೀದಿ ಬೀದಿಗಳಲ್ಲಿ ಮೆರವಣಿಗೆಗೆ ಬಳಕೆಯಾಗುತ್ತಿರುವುದು ಶೋಚನೀಯ ಸಂಗತಿ. ಜಾನಪದದ ಸಂಶೋಧನೆ ಪ್ರಾರಂಭವಾದದ್ದು ೧೮೧೨ರಲ್ಲಿ ಅದೂ ಜರ್ಮನಿಯಲ್ಲಿ! ಲಂಡನ್ನಿನ ವಿಲಿಯಂ ಜಾನ್ ಥಾಮ್ಸ್ ಅವರು ೧೮೮೬ರಲ್ಲಿ ಜಾನಪದಕ್ಕೆ 'ಫೋಕ್‌ಲೋರ್' ಎಂಬ ಪಟ್ಟ ಕೊಟ್ಟ ನಂತರವೇ ಅದು ಶಾಸ್ತ್ರೀಯ ಸ್ವರೂಪ ಪಡೆದುಕೊಂಡಿತೆನ್ನಬಹುದು. ಜಾನಪದದ ಮೇಷ್ಟ್ರಾಗಿದ್ದ ಥಿಯೋಡಾರ್ ಎಚ್. ಗಾಸ್ಟರ್ "ಜಾನಪದ ಜನರಿಂದಲೇ ಬಂದಿದ್ದು, ಜನರಿಗಾಗಿಯೇ ಇರುವಂತದ್ದು" ಎಂದರೆ, ಬಿ.ಎ. ಬಾಟ್ಕಿನ್ ಅವರು ಆದಿವಾಸಿ ಸಂಪ್ರದಾಯವನ್ನು ಎತ್ತಿಹಿಡಿದರು. ಅಮೆರಿಕಾ, ಸ್ಪೇನ್‌ನಲ್ಲಿ ಔರೇಲಿಯೋ ಎಂ. ಎಸ್ಪಿನೋಸ್ ಜಾನಪದದ ಬಗ್ಗೆ ಹೆಚ್ಚು ಕೆಲಸ ಮಾಡಿದ್ದು ಕಲಾವಿದ ಎಂ. ಹಾರ್ಮೋನ್‌ರ ಪ್ರಕಾರ 'ಜಾನಪದ ತಲೆಮಾರಿನಿಂದ ತಲೆಮಾರಿಗೆ ಹಬ್ಬಿದೆ'. ರಿಚರ್ಡ್ ಎಂ. ಡಾರ್ಸನ್‌ರ ಪ್ರಕಾರ 'ಜಾನಪದ ಭೂತಕಾಲವಾಗಿದ್ದರೂ, ವರ್ತಮಾನ ಕಾಲಕ್ಕೆ ಪ್ರೇರೇಪಿತವಾಗುತ್ತದೆ'.

ಇಂದಿನ ಜಾಗತಿಕ ಸಂದರ್ಭಕ್ಕೆ ಅನುಗುಣವಾಗಿ ಕನ್ನಡ ನಾಡಿನ ಜಾನಪದಕ್ಕೆ ಆಗಲಿ, ಭಾರತದ ಜಾನಪದಕ್ಕೆ ಆಗಲಿ 'ಅಂದಿನ ಜಾನಪದ'ವನ್ನು ಹೇಗೆ ಅನ್ವಯಿಸಬಹುದು, ಎಂಬುದರ ಗಂಭೀರ ಚರ್ಚೆ ನಡೆಸಬೇಕಾಗುವುದು ಇಂದಿನ ತುರ್ತು ಅಗತ್ಯಗಳಲ್ಲೊಂದಾಗಿದೆ. "ಜಾನಪದವನ್ನು ಬೇರುಗಳಿಂದಲೇ ಪುನರ್‌ನಿರ್ಮಿಸಬೇಕು" ಎಂಬ ಟಾಲ್‌ಸ್ಟಾಯ್ ಮಾತಿಲ್ಲಿ ಅನ್ವರ್ಥಕ. ನಮ್ಮ ಮೂಲ ಬೇರುಗಳೇ ಜಾನಪದ. ಅವು ಸಂಸ್ಕೃತಿಯ ಹುಟ್ಟಿಗೆ ಕಾರಣವಾಗಿವೆ. ಆ ಬೇರುಗಳನ್ನು ಪುನರ್ ನಿರ್ಮಿಸುವ ಕಾಲವೀಗ ಬಂದಿದೆ. ಜಾನಪದ ಬೇರಿನ ಅಂತರ್‌ಶಕ್ತಿ ಇವತ್ತಿನ ಆಧುನಿಕ ಸಾಂಸ್ಕೃತಿಕ ಒಳನೋಟಕ್ಕೆ ಬಹಳ ಅಗತ್ಯವಾಗಿದೆ. ಜಾನಪದ ತನಗೆ ತಾನೆ ಬದಲಾಗುವುದಿಲ್ಲ. ಬದಲಾವಣೆ ನಿರೀಕ್ಷಿಸುವುದೂ ಇಲ್ಲ. ಅದನ್ನು ಕಾಲ, ದೇಶ ಬದಲಾಗುವಂತೆ ಮಾಡುತ್ತದೆ. ಅದು ಜಾಗತಿಕ ಅನುಕರಣೆಯನ್ನು ಅವಲಂಬಿಸಿರುವುದು ಅನಿವಾರ್ಯ ಮತ್ತು ಅಗತ್ಯ. ಆಧುನಿಕತೆ ಅನಿವಾರ್ಯವಾಗಿದೆ ಎಂದು ನಾವೆಲ್ಲ ಹೇಗೆ ಒಪ್ಪಿಕೊಳ್ಳುತ್ತಿದ್ದೇವೆಯೋ ಅದೇ ರೀತಿ ಜಾನಪದದ ಅನ್ವಯಕತೆಯೂ ಕೂಡ ಅನಿವಾರ್ಯ ಎಂಬುದನ್ನು ತಿಳಿಯಬೇಕು. ಜಾನಪದದ ಅನೇಕ ಸಂಕೇತ, ರೂಪಕಗಳನ್ನು ಇವತ್ತಿನ ವಾಸ್ತವದ ಸಂದರ್ಭಕ್ಕೆ ಅನ್ವಯಿಸುವುದು ಮುಖ್ಯ. ಜಾಗತಿಕ ಸಂದರ್ಭಕ್ಕೆ ಜಾನಪದ ಎಷ್ಟು ಪ್ರಸ್ತುತ ಎಂಬುದನ್ನು ಅರಿಯುವ ಪ್ರಕ್ರಿಯೆ ಜಾನಪದ ಶಿಕ್ಷಣದ ಭಾಗವಾಗಬೇಕಿದೆ. ಈ ಕಾರ್ಯಕ್ಕೆ ಜಾನಪದ ಆಸಕ್ತರು, ಶಿಕ್ಷಕರು, ಸಂಶೋಧಕರು, ಕಲಾವಿದರು ಮುಂದಾಗುವ ಅಗತ್ಯವಿದೆ. ಜನಪದ ಕಲೆಗಳು ನಮ್ಮ ಸ್ವತ್ತು. ನಮ್ಮ ನೆಲದ ಜಾನಪದವು ಸಂಸ್ಕೃತಿಯ ತಾಯಿ ಬೇರು ಎಂಬ ಭಾವನೆ ನಮ್ಮಲ್ಲಿ ಮೊದಲು ಬರಬೇಕು. ನಾವೆಲ್ಲ ನಮ್ಮ ಗ್ರಾಮಗಳಲ್ಲಿ ಮಾಡಬೇಕಾದ ಕರ್ತವ್ಯವೆಂದರೆ ಮತ್ತೆ ಭಜನೆ ಮಂದಿರ ತೆರೆಯುವುದು, ಎಲ್ಲಾ ಜನಾಂಗದ ಜನ ಭಜನೆ ಮಂದಿರಕ್ಕೆ ಬರುವ ಹಾಗೆ ಮಾಡಿ ಜನಪದ ಭಕ್ತಿಗೀತೆಗಳನ್ನು ಹಾಡುವ-ಹಾಡಿಸುವ ಮೂಲಕ ಬದುಕಿನ ಭಾವನೆಯ ಜೊತೆಗೆ ನಂಬಿಕೆ ಮತ್ತು ಪ್ರೀತಿ-ಕರುಣೆಯನ್ನು ಗಟ್ಟಿಗೊಳಿಸಬೇಕು. ಮರೆತುಹೋಗುತ್ತಿರುವ ಸುಂದರ ಜನಪದ ಕಲೆಗಳನ್ನು ಪುನಶ್ಚೇತನಗೊಳಿಸುವುದು, ಸಂವರ್ಧನೆ, ಸಂರಕ್ಷಣೆ ಮಾಡುವುದು, ಜನಪದ ವಾದ್ಯಗಳನ್ನು ಮತ್ತೆ ತಯಾರಿಸಿ, ನುಡಿಸುವಂತೆ ಮಾಡುವುದು ಅಗತ್ಯವಿದೆ. ಜನಪದರಲ್ಲಿ ಮನರಂಜನೆಗಾಗಿ ಹುಟ್ಟಿದ ಕಲೆಗಳನ್ನು ಪ್ರದರ್ಶಿಸುವುದು ಹಾಗೂ ನಿಜವಾದ ಮನರಂಜಕರು ನಮ್ಮ ಜನಪದರು ಎಂಬ ಸದ್ಭಾವನೆ ಹುಟ್ಟುಹಾಕುವುದರೊಂದಿಗೆ ಜಾನಪದ ಅಧ್ಯಯನವನ್ನು ಕೈಗೊಳ್ಳುವುದು ಅಗತ್ಯ. ಲಾವಣಿ, ಗೀಗೀ, ಸಣ್ಣಾಟ, ದೊಡ್ಡಾಟ, ಚರ್ಮವಾದ್ಯ ಮೇಳಗಳನ್ನು ಪುನಶ್ಚೇತನಗೊಳಿಸುವುದು ಒಬ್ಬರ ಹೊಣೆಯಲ್ಲ, ನಮ್ಮೆಲ್ಲರ ಹೊಣೆಯಾಗಬೇಕು. ಹಾಗಾದಾಗ ಮಾತ್ರವೇ ಜಾನಪದ ಜೀವಾತ್ಮಕ್ಕೆ ಮತ್ತೆ ಶಕ್ತಿ ಬರಲು ಸಾಧ್ಯ. ಅನ್ವಯಿಕ ಅಧ್ಯಯನದ ಪರಿಕಲ್ಪನೆಗಳನ್ನು ಜಾಗತೀಕರಣದ

ಸಂದರ್ಭದಲ್ಲಿ ನಮ್ಮ ಸಮಕಾಲೀನ ಆದ್ಯತೆಗಳಿಗೆ ತಕ್ಕಂತೆ ಅನ್ವಯಿಸಿಕೊಳ್ಳುವುದು ಸರಿ. ಆದರೆ ಅವುಗಳು ಎಲ್ಲಿಂದ ಬಂದವು? ಬಂದ ಬಗೆ ಹೇಗೆ? ಇವು ಹುಟ್ಟಿರುವುದಕ್ಕೆ ಕಾರಣವಾದ ಅಂದಿನ ಸಾಮಾಜಿಕ ಸಂದರ್ಭ ಹೇಗಿತ್ತು? ಎಂಬುದನ್ನು ಅರಿಯಬೇಕಾಗಿದೆ. ಯಾವುದೇ ಸಿದ್ಧಾಂತ ಇದ್ದಂತೆಯೇ ಇರುವುದಿಲ್ಲ. ಬದಲಾಗುತ್ತಲೇ ಇರುತ್ತವೆ. ಜಾನಪದವು ವಿಜ್ಞಾನ, ತಂತ್ರಜ್ಞಾನದಿಂದ ಆಗುತ್ತಿರುವ ಬದಲಾವಣೆಗಳನ್ನು ನಮ್ಮದಾಗಿ ಸ್ವೀಕರಿಸುತ್ತಲೇ ಸಾಮಾಜಿಕ ಅಸ್ತಿತ್ವವನ್ನು ಕಾಪಾಡಿಕೊಂಡಿದೆ. ಜನಪದ ಸಮಾಜ-ಸಂಪ್ರದಾಯದ ಹಿನ್ನೆಲೆಯಲ್ಲಿ ಅನ್ವಯಿಕತೆ ಬಹುಮುಖ್ಯವಾದದ್ದು.

ಜಾನಪದವೂ ಕೂಡ ಅಂದಿನಿಂದ ಇಲ್ಲಿಯವರೆಗೆ ಮೂಲ ಸ್ವರೂಪದಲ್ಲಿದೆ ಎಂದು ಹೇಳಲು ಸಾಧ್ಯವೇ ಇಲ್ಲ. ಜಾಗತೀಕರಣ, ನಗರೀಕರಣದ ಹೊಡೆತದಲ್ಲಿ ಆಯಾ ಕಾಲಕ್ಕೆ ಹೊಸ-ಹೊಸ ಆವಿಷ್ಕಾರಗಳು ತನಗೆ ಅರಿವಿಲ್ಲದೆ ಅನೇಕ ರೂಪುಗೊಂಡಿವೆ. ಅಂದಿನ ಮುಗ್ಧ ಸಮಾಜದಲ್ಲಿ ಹುಟ್ಟಿದ ಆ ಸಂದರ್ಭದ ಪದಗಳೇ ಬೇರೆ, ಇವತ್ತಿನ ಸಂದರ್ಭಕ್ಕೆ ಪದಗಳನ್ನು ಕಟ್ಟುವ ರೀತಿ-ನೀತಿ ಅನಿವಾರ್ಯತೆಯೇ ಬೇರೆಯಾಗಿದೆ. ಹಾಗಾಗಿ ಕಲೆಗಳೂ ನಮ್ಮ ಸಾಂಪ್ರದಾಯಿಕ ಮಡಿವಂತಿಕೆಯನ್ನು ಬಿಟ್ಟು ಮನರಂಜನೀಯ ರೂಪ ತಾಳಿ ಪ್ರದರ್ಶನವಾಗುತ್ತಿವೆ. ಅರ್ಥಾತ್ ಅನ್ವಯಿಕ ರೂಪ ಪಡೆಯುತ್ತಿವೆ. ಕಲೆಗಳು ಸಂಪ್ರದಾಯ ಬಿಟ್ಟು ಹೊರಬಂದು ಕಲೆಗಳಾಗಿಯೇ ಮೆರೆಯುತ್ತಿವೆ. ಕಲೆಗಳ ಭಕ್ತಿ, ಮೌಲ್ಯತೆಗಳು ಸಡಿಲಗೊಂಡು ಅವುಗಳು ಬದುಕಿನ ಅಂಗವಾಗಿ ರೂಪುಗೊಂಡಿವೆ. ಕಲೆಗಳಿಂದ ಜೀವನ, ಜೀವನದಿಂದ ಕಲೆಗಳು. ಅವು ಹಲವು ಜನರಿಗೆ ಉದ್ಯೋಗ ಕೊಟ್ಟಿವೆ ಎಂಬುದನ್ನು ನಾವೆಲ್ಲ ಗಮನಿಸಿಬೇಕಾಗಿದೆ. ಗ್ರಾಮೀಣರಲ್ಲಿ ಸಾಂಪ್ರದಾಯಿಕವಾಗಿ ಗ್ರಾಮ ದೇವತೆಗಳ ಮೇಲಿನ ಭಕ್ತಿಭಾವದಿಂದ ಹುಟ್ಟಿದ ಕಲೆಗಳೆಲ್ಲ ಹೊಸ ಸ್ವರೂಪ ಪಡೆಯುತ್ತಾ ಬಂದಿವೆ. ಆಚರಣೆಗಳು ಕೂಡ ಆಧುನಿಕ ಸ್ವರೂಪ ಪಡೆದಿರುವುದು ಸತ್ಯ. ಇಂದಿನ ಸಂಶೋಧನೆಯು ಸಂಪ್ರದಾಯ ಮತ್ತು ವೈಜ್ಞಾನಿಕ ಅಂಶಗಳನ್ನು ಇಟ್ಟುಕೊಂಡು ಜಾನಪದ ಕಲೆ, ಆಚರಣೆ, ನಂಬಿಕೆಗಳನ್ನು ನೋಡುವ ಕ್ರಮ ಅನಿವಾರ್ಯವೂ ಕೂಡ. ಅನ್ವಯಿಕತೆಯ ದೃಷ್ಟಿಯಲ್ಲಿ ಶೋಧನೆಯ ಕಲ್ಪನೆ, ರೂಪ ಬದಲಾಗುತ್ತಿರುವುದರ ಹಿಂದೆ ಜಾಗತೀಕರಣದ ಪ್ರಭಾವವಿರುವುದು ಸುಸ್ಪಷ್ಟ, ಕರ್ನಾಟಕದ ಯಾವುದೇ ಕಲೆಯನ್ನು ಗಮನಿಸುವಾಗ, ಗ್ರಹಿಸುವಾಗ, ಸಂಶೋಧಕರಾಗಲಿ, ಕಲಾವಿದರಾಗಲಿ, ಆಯಾ ಕಲೆಗಳು ಬಂದ ಸಂಪ್ರದಾಯಿಕ ಹಿನ್ನೆಲೆ ಅರಿತು, ಆ ಕಲೆಗಳು ಬಂದ ಬಗೆ ಅರ್ಥ ಮಾಡಿಕೊಂಡು ಕಲಿಯುವುದು ಅತ್ಯಂತ ಮುಖ್ಯ ಅಂಶವಾಗಿದೆ. ಆದರೆ, ಸದ್ಯ ಯುವಕರು ಇವುಗಳ ಚರಿತ್ರೆ ಮರೆತು ಕಲೆಗಳ ಮೆರವಣಿಗೆಯತ್ತ ಹೆಚ್ಚು ಗಮನ ಕೊಡುತ್ತಿರುವುದು ದುರಂತ. ಅಂತಹ ಯುವ ಕಲಾವಿದರಿಗೆ ವಿಚಾರ ಸಂಕಿರಣಗಳಲ್ಲಿ ಸಂಶೋಧಕರು, ಜನಪದ ಜ್ಞಾನಿಗಳು ಅಥವಾ

ಆಸಕ್ತರು ತಿಳುವಳಿಕೆ ಹೇಳುವುದು ಜವಾಬ್ದಾರಿ. ಈ ಕಲೆಗಳು ಎಲ್ಲಿಂದ ಬಂದಿವೆ ಎಂಬುದನ್ನು ತಿಳಿಯುವುದು ಯುವಕರ ಮನೋಧರ್ಮವಾಗಬೇಕು. ಜನಪದ ಕಲೆಗಳನ್ನು ಪ್ರಾದೇಶಿಕ ಹಿನ್ನೆಲೆಯಲ್ಲಿ, ಆಯಾ ಭೌಗೋಳಿಕ ಹಿನ್ನೆಲೆಯಲ್ಲಿ ಅಥವಾ ವಾಯುಗುಣಗಳ ಹಿನ್ನೆಲೆಯಲ್ಲಿ ಗ್ರಹಿಸಿ ನೋಡಬೇಕು, ಮತ್ತು ಕಲಿಯಬೇಕು. ಹಾಗಾಗಿ ಜಾನಪದ ಅನ್ವಯಿಕತೆ, ಕಲೆಯ ಅಭ್ಯಾಸ ಇಂದಿನ ತೀರಾ ಅಗತ್ಯವೂ ಹೌದು, ಅನಿವಾರ್ಯವೂ ಹೌದು.

****

(೨) ಜಾನಪದ ಜನನಕ್ಕೆ ಹೆಣ್ಣೇ ಮೂಲ ಸೃಷ್ಟಿಕರ್ತೆ

ಭೂಮಿತಾಯಿ ಬೆಳೆಗೆ ಮೂಲ. ಬೀಜ ವೃಕ್ಷಕ್ಕೆ ಮೂಲ. ಮೋಡ ಮಳೆಗೆ ಮೂಲ. ಸೂರ್ಯ ಬೆಳಕಿಗೆ ಮೂಲ. ಮಕ್ಕಳಿಗೆ ತಾಯಿಮೂಲ. ಮರ–ಮರದ ಉಜ್ಜಾಟ ಬೆಂಕಿಗೆ ಮೂಲ ಹೇಗೋ ಹಾಗೆಯೇ ಜಾನಪದಕ್ಕೆ ಹೆಣ್ಣೇ ಮೂಲ ಎಂಬುದು ಸತ್ಯಾನುಸತ್ಯ. ನೀರು ನೈದಿಲೆಗೆ ಶೃಂಗಾರವಾದರೆ ಜಾನಪದಕ್ಕೆ ಹೆಣ್ಣೇ ಶೃಂಗಾರ. ಇದರ ಅರ್ಥ, ಹೆಣ್ಣೇ ಜಾನಪದದ ಮೂಲ ಸೃಷ್ಟಿಕರ್ತೆ. ಪ್ರಸ್ತುತ ಸಂದರ್ಭದಲ್ಲಿ ಯುವಪೀಳಿಗೆಗೆ ಅಥವಾ ನಗರದ ಜನರಿಗೆ ಬೆಂಕಿ ಒಲೆಯಿಂದ ಅಡಿಗೆ ಮಾಡುತ್ತಿದ್ದರು ಎಂಬ ದೃಶ್ಯ ಎಷ್ಟು ಆಶ್ಚರ್ಯವೋ ಅದೇ ರೀತಿ ಜಾನಪದವೂ ಕೂಡ. ಬೆಳೆಯುತ್ತಿರುವ ನಾಗರಿಕತೆಗೆ ಸಂಸ್ಕೃತಿಯ ಸೋಪಾನ ಕಟ್ಟಿದೆ ನಮ್ಮೂರ ಜಾನಪದ. ಆ ಕಟ್ಟುವಿಕೆಯ ಪ್ರಾರಂಭ ಹೆಣ್ಣು. ಬೆಳಿಗ್ಗೆಯಿಂದ ಸಂಜೆಯವರೆಗೂ ಅಂದಿನ ಗ್ರಾಮೀಣ ಮಹಿಳೆಯರು ಎಷ್ಟೆಷ್ಟೋ ಕಷ್ಟ ಕಾರ್ಪಣ್ಯಗಳ ಕೆಲಸಗಳಲ್ಲಿ ಎಡೆಬಿಡದೆ ತೊಡಗಿಸಿಕೊಂಡು ರಾತ್ರಿ ನಿದ್ದೆ ಬರುವ ತನಕ ಏನಾದರೂ ಒಂದು ಕೆಲಸ ಮಾಡುತ್ತಲೇ ಇರುತ್ತಿದ್ದಳು. ಬೆಳಿಗ್ಗೆ ಎದ್ದು ಆ ದಿನದ ಅಡಿಗೆಗೆ ಮನೆಯ ಜನಕ್ಕೆ ಅಗತ್ಯವಿರುವಷ್ಟು ರಾಗಿಯನ್ನು ಕಲ್ಲಿನ ಮುಂದಿಟ್ಟುಕೊಂಡು ಕುಳಿತು ಕಲ್ಲಿಗೆ ನಮಸ್ಕರಿಸುತ್ತಾ...

ಬೆಳಗಾಗಿ ನಾನೆದ್ದು ಯಾರ್ಯಾರ ನೆನೆಯಲಿ
ಎಳ್ಳುಜೀರಿಗೆ ಬೆಳೆಯೋಳ ಭೂಮಿತಾಯಿ
ಎದ್ದೊಂದು ಗಳಿಗೆ ನೆನೆದೇನು

ಎಂದು ರಾಗಿಕಲ್ಲಿನ ಗೂಟವಿಡಿದು ರಾಗಿ ಬೀಸಲು ಪ್ರಾರಂಭಿಸಿದರೆ, ಬೆನ್ನು – ತೋಳಿನ ನೋವು ಮರೆಯಲು ಹಾಡು ಕಟ್ಟಿದಳು. ಬೆಳಿಗ್ಗೆ ಎದ್ದು ಯಾರನ್ನು ನೆನೆಯಲೆಂಬ ಪ್ರಶ್ನೆಗೆ 'ಭೂಮಿ ತಾಯಿ'ಯನ್ನು ಎಂದರಿತ ಹೆಣ್ಣು ಈ ಮೇಲಿನ ತ್ರಿಪದಿಯನ್ನು ಹಾಡುವುದರ ಮೂಲಕ ಆ ದಿನವನ್ನು ಸ್ವಾಗತಿಸುತ್ತಿದ್ದುದು ರೂಢಿಯಾಗಿತ್ತು. ಬೆಳಿಗ್ಗೆ ಎದ್ದು ಯಾರನ್ನು ನೆನೆದರೆ

ನಮ್ಮ ಬಾಳಿಗೆ ಬೆಳಕು ಸುಖ ದೊರೆತೀತು? ಎಂಬೆಲ್ಲಾ ಪ್ರಶ್ನೆ ಅಂದೇ ಜನಪದರಲ್ಲಿ ಬಂದಿರುವುದಕ್ಕೆ ಇವತ್ತಿಗೂ ಎಷ್ಟೊಂದು ಅರ್ಥವಿದೆ ಎನಿಸುತ್ತದೆ. ಈ ತ್ರಿಪದಿಯಲ್ಲಿ ಎಳ್ಳು ಜೀರಿಗೆಯನ್ನು ಬೆಳೆಯೋಳು ಭೂಮಿತಾಯಿ ಎಂಬ ನುಡಿಗಟ್ಟು ಜನರ ಕಷ್ಟದ ಸಂಕೇತ. ಎಳ್ಳು ದುಃಖವಾದರೆ ಜೀರಿಗೆ ಸುಖದ ಸಂಕೇತ ಎಂಬ ಕುರುಹನ್ನು ಹೆಣ್ಣು ಅಂದೇ ಅಭಿವ್ಯಕ್ತಿಸಿದ್ದಾಳೆ. ಬದುಕಿನ ಸುಖ-ದುಃಖ ಎರಡನ್ನು ತನ್ನೊಳಗೆ ತುಂಬಿಕೊಂಡಿರುವ ಈ ಭೂಮಿ ಎಷ್ಟೆಲ್ಲವನ್ನು ಹೊತ್ತಿದ್ದಾಳೆ! ಅದಕ್ಕೆ ಬೆಳಗಾಗಿ ನಾನೆದ್ದು ಯಾರ್‍ಯಾರ ನೆನೆಯಲಿ ಎಂಬ ಜಾನಪದಗೀತೆ ತಮ್ಮ ಬದುಕಿನ ಸುಪ್ರಭಾತ ಎಂಬ ಕಲ್ಪನೆ ಜನಪದರದಾಗಿತ್ತು. ರಾಗಿ ಬೀಸಿದ ಮೇಲೆ ಹೇಗೆ ರಾಗಿಕಲ್ಲಿನ ಸುತ್ತ ಹಿಟ್ಟು ಬೆಳ್ಳಿಯ ರಾಶಿಯಾಗಿ ಬಿದ್ದಿರುತ್ತದೆಯೋ ಹಾಡುಗಳ ರಾಶಿಯು ಅಷ್ಟೇ ಉದುರಿರುತ್ತಿದ್ದವು. ಹೀಗೆ ಆಡು-ಭಾಷೆಯ ಹಾಡಾದ ಸಂಸ್ಕೃತಿ ಜಾನಪದ. ಜನನುಡಿಗಳೇ ನಾಡಿನ ಹಬ್ಬಗಳಾಗಿ, ಜಾತ್ರೆಗಳಾಗಿ ಜನರ ಪ್ರತಿಬಿಂಬವಾಗಿ ಕಂಡುಬರುತ್ತವೆ. ಹೆಣ್ಣಿನೊಡಲಿನಿಂದ ಬಂದ ಅನೇಕ ಜನಪದ ಗೀತೆಗಳು ನಮ್ಮ ಮುಂದಿವೆ.

ಕಲ್ಲುಕೊಟ್ಟಮ್ಮಗೆ ಎಲ್ಲ ಭಾಗ್ಯವು ಬರಲಿ
ಪಲ್ಲಕ್ಕಿ ಮೇಲೆ ಮಗ ಬರಲಿ- ಈ ಮನೆಗೆ
ಮಲ್ಲಿಗೆ ಮುಡಿಯೋ ಸೊಸೆ ಬರಲಿ

ಈ ತ್ರಿಪದಿ ಹೆಣ್ಣಿನ ಅಂತರಂಗದಿಂದ ಬಹಿರಂಗಕ್ಕೆ ಬಂದ ಕೃತಜ್ಞತೆಯ ಸಂಪ್ರೀತಿ. ರಾಗಿ ಬೀಸಲು ರಾಗಿಕಲ್ಲು ಕೊಟ್ಟ ಹೆಣ್ಣು ಮಗಳಿಗೆ ಅಭಿನಂದಿಸುವ ಹೃದಯವಂತಿಕೆಯ ತ್ರಿಪದಿಯಾಗಿದೆ. ನೀನು ಕಲ್ಲನ್ನು ಕೊಟ್ಟೆ ತಾಯಿ. ನಾನು ಹಿಟ್ಟನ್ನು ಬೀಸಿಕೊಂಡೆ. ನಾನು ಬೀಸಿಕೊಂಡಿದ್ದಕ್ಕೆ ನಿನಗೇ ನಾನೇನನ್ನೂ ಕೊಡಲು ಶಕ್ತಳಲ್ಲ. ಎಂದು "ನಿನ್ನ ಮಗನಿಗೆ ಮಲ್ಲಿಗೆಯಂತಹ ಮನಸ್ಸಿನ ಮಗಳು ಬರಲಿ" ಎಂದು ಹಾರೈಸಿ ಹೋಗುತ್ತಾಳೆ. ಹೀಗೆ ಪ್ರಾರಂಭ ಮಾಡಿದ ಹೆಣ್ಣು ಬೆಳಿಗ್ಗೆ ಮನೆಯ ಮುಂದೆ ಸೆಗಣಿ ನೀರು ಹಾಕಿ ರಂಗೋಲೆ ಬಿಡುವಾಗ ಹಾಡು ಕಟ್ಟಿ ತನ್ನ ಮನೆದೇವರನ್ನು ನೆನೆಯುತ್ತಾ..

ತಿಂಗಾಳು ಮುಳುಗಿದವೋ ರಂಗೋಲೆ ಬೆಳಗಿದವೊ
ತಾಯಿ ಚೌಡವ್ವನ ಪೂಜೆಗೆಂದು ಬಾಳೆ ಬಾಗಿದವೊ

ಎಂಬ ಭಕ್ತಿ ಭಾವನೆಯನ್ನು ಜನಪದ ಹಾಡಾಗಿ ಸೃಷ್ಟಿಸಿದ್ದಾಳೆ. ತನ್ನ ಮನೆ ದೇವರಾದ ಚೌಡಿ, ಚಾಮುಂಡಿ, ದುರ್ಗಿ, ಮಾರಮ್ಮ ಹಾಗೂ ಎಲ್ಲಮ್ಮನನ್ನು ನೆನೆಯುತ್ತಾ ರಾತ್ರಿ ಕಳೆಯುತ್ತದೆ. ನಿನ್ನ ಪೂಜೆಗೆ ರಂಗೋಲೆ ಬೆಳಗಿತು ಬಾಳೆ ಗೊನೆಗಳೆ ಬಾಗಿ ನಿಂತಿವೆ ಎಂದೆಲ್ಲ ಪ್ರಾರ್ಥಿಸುವ ಹೆಣ್ಣು, ಬಾಗಿಲ ಮುಂದೆ ರಂಗೋಲೆ ಬಿಡುವ ಪ್ರಕ್ರಿಯೆಯೇ ಆನಂದದ ಶುಭ ದಿನ ಆರಂಭವಾಗಿರುವುದರ ಸಂಕೇತ. ಬೆಳಗಿನ ಸೂರ್ಯನ ಸೂಜಿಮೊನೆಯ ಕಿರಣಗಳನ್ನು ಸ್ವಾಗತಿಸುವವಳು ಹೆಣ್ಣೇ. ಗಂಡನು ಹಸು, ಎತ್ತುಗಳ ಜೊತೆ

ಹೆಗಲ ಮೇಲೆ ನೊಗ-ನೇಗಿಲು ಹೊತ್ತು ಮುಂಜಾವಿನ ಮುಸುಕಿನಲ್ಲಿ ಹೊಲದ ಮಣ್ಣಿಗೆ ನೇಗಿಲೂಡಿ ನನ್ನ ಮನೆ 'ಎಚ್ಚೊಕ್ಕಲಾಗಲಿ' ಎಂದು ಸೂರ್ಯನಿಗೆ ನಮಸ್ಕರಿಸಿ ಹೊನ್ನೇರು ಕಟ್ಟುವುದೇ ಒಂದು ವೈಭವ. ಬಿಸಿಲು ನೆತ್ತಿಗೇರುವ ಹೊತ್ತಿಗೆ ತನ್ನ ಅವಿಭಾಜ್ಯ ಅಂಗವಾಗಿರುವ ಅರ್ಧಾಂಗಿ ಮಕರಿಯಲ್ಲಿ ಹಿಟ್ಟೋ, ರೊಟ್ಟಿಯನ್ನೇ ಹೊತ್ತುಕೊಂಡು ಬರುವ ಹಾದಿ ನೋಡುತ್ತಿದ್ದ ಹಾಗೆ ಹೊಲದಲ್ಲಿ ಪ್ರತ್ಯಕ್ಷವಾಗುತ್ತಿದ್ದಳು. ತನ್ನ ಹೆಂಡತಿ ಭಯಭೀತಿ ಮತ್ತು ಪ್ರೀತಿ ಎಲ್ಲವನ್ನು ತನ್ನೊಡಲೊಳಗೆ ತುಂಬಿಕೊಂಡು ಗಂಡನಿಗೆ ಉಣಲು ಬಡಿಸುವ ಆತ್ಮೀಯ ಪ್ರೀತಿಯ ದೃಶ್ಯ ಈಗ ನೋಡಲು ಸಾಧ್ಯವೇ ಇಲ್ಲ. ಗಂಡನಿಗೆ ಕೊಟ್ಟು ಮಿಕ್ಕಿದ ಊಟವನ್ನು ತಾನು ಊಂಡಾಕ್ಷಣ ಮತ್ತೊಂದು ಕೆಲಸದ ಪ್ರಜ್ಞೆ ಅವಳನ್ನು ಕಾಡುತ್ತಿತ್ತು. ತಾನು ತಂದಿದ್ದ ಬಟ್ಟೆಗಳನ್ನು ಪಕ್ಕದ ಕೆರೆಯಲ್ಲೋ, ಕಟ್ಟೆಯಲ್ಲೋ ತೊಳೆದು ಒಣ ಹಾಕಿದ ಮೇಲೆ ತನ್ನ ಗಂಡನ ಜೊತೆಯಲ್ಲೇ ಮತ್ತೆ ಹೊಲದ ಕಳೆ ಕೀಳುವುದು, ಹೆಂಟೆ ಹೊಡೆಯುವುದು ಮುಂತಾದ ಕೆಲಸದಲ್ಲಿ ಭಾಗಿಯಾಗುತ್ತಿದ್ದಳು. ಆ ಕಾಲದಲ್ಲಿ ನೆತ್ತಿಯ ಮೇಲಿನ ಬಿಸಿಲಿನ ತಾಪಕ್ಕೆ ತನ್ನ ಹೊಟ್ಟೆಯೊಳಗೆ ಬೆಳೆಯುತ್ತಿರುವ ಮಗುವಿನ ಹಂಬಲ. ತನ್ನ ಹೊಟ್ಟೆ ಮತ್ತು ನಡು ನೋವನ್ನು ಮರೆಸಿಕೊಳ್ಳಲು ಕಟ್ಟಿಕೊಂಡ ಜನಪದ ತುಣುಕು ಹೀಗಿದೆ..

ಕಟ್ಟುಕಟ್ಟೆ ಚಂದ ಕಟ್ಟೆಯ ಭಾವ್ ಚಂದ
ಹೇ ಗಿಣಿಯೆ ಹೇ ಗಿಣಿಯೇ
ಕಟ್ಟೆ ಮೇಲ್ ಬರುವ ಮಗ ಚಂದ
ಹೇ ಗಿಣಿಯೆ ಹೇ ಗಿಣಿಯೇ
ನನ್ನ ಹೊಟ್ಟೆ ಮೇಲಾಡೊ
ಮಗ ಚಂದ ಹೇ ಗಿಣಿ ಹೇ ಗಿಣಿಯೇ..

ಹೀಗೆ ತನ್ನ ಹೊಟ್ಟೆ ಒಳಗಿನ ಮಗು ಈ ಕೆರೆಯ ಏರಿಯ ಮೇಲೆ ಬರುತ್ತಿದ್ದರೆ ಎಷ್ಟು ಸುಂದರವಾಗಿ ಕಾಣಬಹುದು ಎಂಬುದು ಅತ್ಯಂತ ಸುಂದರ ಕಲ್ಪನೆ. ಎಷ್ಟೆಲ್ಲ ಕೆಲಸದ ನಡುವೆಯೂ ತನ್ನ ಮಗುವನ್ನು 'ಗಿಣಿ'ಗೆ ಹೋಲಿಸಿದ್ದಾಳೆ ತಾಯಿ. ಈ ಜನಪದ ತುಣುಕು ನೋವನ್ನು ಮರೆಸುತ್ತದೆ. ಹೊಲದಲ್ಲೆ ಇದ್ದ ಕಾಯಿ, ಸೊಪ್ಪು ಕೊಯ್ದುಕೊಂಡು, ತಾನು ತಂದಿದ್ದ ತಣಿಗೆ, ಚೊಂಬನ್ನು ಕೆರೆಯಲ್ಲಿ ಬೆಳಗಿ ಹೊತ್ತುಕೊಂಡು ಮನೆಗೆ ಬರುವ ಹೊತ್ತಿನಲ್ಲಿ ಹೊಲದಲ್ಲಿ ನಿಂತು ನಾವು ಉತ್ತುಬಿತ್ತಿದ್ದೇವೆ ಯಾವ ಮೂಲೆಯಲ್ಲಿ, ಮೋಡದಲ್ಲಿ ಅಡಗಿದ್ದೀಯ ನೀನು? ಸಂಜೆಗೆ ಮಳೆ ಕರುಣಿಸೊ ಎಂದು ಮಳೆರಾಯನನ್ನು ಪ್ರಾರ್ಥಿಸುತ್ತಾಳೆ.

ಮಳೆಯಪ್ಪ ಮಳೆ ರಾಜ
ಮೊದಲ ಕೂರಿಗೆ ರೈತರು ಹೊಲದಾಗ

ಮುತ್ತಿನಂತ ಮಳೆಯ ಕರುಣಿಸೊ...

ಸಂಜೆಯ ಕೆಂದೂಳಿನೊಡನೆ ಸೂರ್ಯ ಮುಳುಗುವ ಹೊತ್ತಿಗೆ ಮನೆಗೆ ಬಂದು ಸೇರುತ್ತಿದ್ದಂತೆ, ಹಾಲು ಕರೆದು ಮಕ್ಕಳಿಗೆ ಕುಡಿಸುವ ಪ್ರತೀತಿ. ಮಾನವ ಜೀವನದ ಸ್ಥಿತಿಗತಿ, ನೀತಿ ನಿಯಮ, ನಿಷ್ಠೆ, ನಂಬಿಕೆ, ಆಚಾರ ವಿಚಾರಗಳೇ ಜಾನಪದ ಸಂಪ್ರದಾಯದ ಕಣಜ. 'ಲೋಕಕ್ಕೆ ಲೋಕೋಕ್ತಿ' ಹೇಳುವ ಮೂಲ ಬೇರಿನ ಸ್ಥಾಯಿ ಭಾವ ತಾಯಿ. ಮದುವೆಯಾದ ಮೇಲೆ ಹೆಣ್ಣಿನ ಬಾಳು ಇಷ್ಟೇ ಎಂದು ನೊಂದುಕೊಂಡು, ಗಂಡನ ಮನೆಗೆ ಹೋಗುವ ದೃಶ್ಯ ಕಲ್ಪನೆಗೆ ಅಸಾಧ್ಯವಾದದ್ದು. ತನ್ನ ಸಣ್ಣ ವಯಸ್ಸಿನಿಂದ ಬೆಳೆದು ಬಂದ ಎಲ್ಲ ನೆನಪಿನ ದೋಣಿಯನ್ನು ಹೊತ್ತು ತಾಯಿ ಮನೆ ಬಿಡುವ ಸ್ಥಿತಿಯಲ್ಲಿ ಅವಳು,

ಹಾಲುಂಡ ತವರೀಗ ಏನೆಂದು ಹಾಡಲಿ
ಹೊಳೆದಂಡೇಲಿರುವ ಗರಿಕೆಯ– ಕುಡಿಯಂಗೆ
ಹಬ್ಬಲಿ ನನ್ನ ರಸಬಳ್ಳಿ.

ಎಂದಿದ್ದಾಳೆ. ನನ್ನ ತಾಯಿ ಹಾಲುಂಡಿದ್ದೇನೆ. ಹಾಡಿದ್ದೇನೆ, ಊರ ತುಂಬ ಮಲ್ಲಿಗೆಯ ಹೂವಿನಂತೆ ಹಬ್ಬಿದ್ದೆ, ಇಂತಹ ಮನೆಗೆ ಏನೆಂದು ಕೃತಜ್ಞತೆ ಸಲ್ಲಿಸಲಿ ಎಂದು ದುಃಖ ದುಮ್ಮಾನದ ಒಡಲೊತ್ತು ತನ್ನ ತವರು ಹೊಳೆದಂಡೆಯಲ್ಲಿರುವ ಗರಿಕೆಯು ಎಷ್ಟು ವಿಶಾಲವಾಗಿದೆಯೋ ಅಷ್ಟೇ ವಿಶಾಲವಾಗಿ ಬೆಳೆಯಲಿ ಎಂದು ಹಾರೈಸುತ್ತಾಳೆ. ಕವಿ ಹೆಣ್ಣನ್ನು ಪ್ರಕೃತಿಗೆ, ನಕ್ಷತ್ರ, ಚಂದ್ರನಿಗೆ, ಹೂವಿಗೆ ಹೋಲಿಸಿದ್ದಾನೆ. ಋತುಮಾನಕ್ಕೆ ತಕ್ಕಂತೆ ಥಟ್ಟನೆ ಕಟ್ಟಿದ ಹಾಡು ಹೆಣ್ಣಿನ ಹೆಂಗರುಳಿನ ಸ್ಥಿತಿ ಅನ್ನಿಸಿದರೂ, ಅವಳೊಳಗೆ ಇರುವ ಅನನ್ಯ ಅಕ್ಷರಮಾಲೆಯ ಅಮೂರ್ತಜ್ಞಾನದ ರೂಪಕವೇ ನಮ್ಮ ಕಣ್ಮುಂದೆ ಕಾಣುತ್ತದೆ. ಈ ಪರಿಕಲ್ಪನೆಗೆ ಹೆಣ್ಣು ನಮಗೊಂದು ಜಾನಪದ ಜ್ಞಾನ ಕೋಶವಾಗಿ ಕಾಣುತ್ತಾಳೆ. ಇನ್ನೊಂದೆಡೆ ಮದುವೆಯಾಗಿ ಹೊರಟ ಹೆಣ್ಣನ್ನು ಆ ಊರ ಗೆಳೆಯ ಹೇಗೆ ನೆನಪಿಸಿಕೊಳ್ಳುತ್ತಾನೆಂದರೆ..

ಗಿಡದ ತುಂಬೆಲ್ಲ ತುಂಬಾವೆ ಸಿಹಿ ಮಾವು
ತಿನ್ನೊರ್ಯಾರಿಲ್ಲ ಮನೆಯಾಗೆ–ನನ ಗೆಳತಿ
ತಿನ್ನೋಕೆ ತಾನಾರ ಬಂದೋಗೆ.

ಈ ತ್ರಿಪದಿ ಮಡುಗಟ್ಟಿದ ಸ್ನೇಹ ಸಂಬಂಧವನ್ನು ಒಡೆದು ಹೇಳುತ್ತದೆ. ಗೆಳೆಯ ತನ್ನ ಗೆಳತಿಯನ್ನು ನೆನೆಯುವ ಕ್ಷಣ. ನನ್ನ ಹಿತ್ತಲ ಮಾವು ತೂಗಿ ಬಾಗಿವೆ ನೀನಾದರೂ ಬಂದು ತಿಂದೋಗು ಎಂಬ ಮಾತಿನಲ್ಲಿನ ಅಂತರ್‌ಪ್ರೀತಿಯನ್ನು ಗಮನಿಸಬೇಕು. ಈ ಕಡೆ ಮದುವೆಯಾದ ಹೆಣ್ಣು ಮಗಳು ಆಷಾಢ ಬಂದರೂ ನನ್ನನ್ನು ಪಂಚಮಿಗೆ, ಗೌರಿಹಬ್ಬಕ್ಕೆ ಕರೆಯಲು ಏಕೆ ನಮ್ಮ ಅಣ್ಣ ಬರಲಿಲ್ಲ ಎಂದು ಹಾದಿ ಕಾಯುವುದನ್ನು ಗೀತೆಯೊಂದು

ಕಟ್ಟಿ ಕೊಡುತ್ತದೆ. ಒಡಹುಟ್ಟಿದ ತಂಗಿ ತನ್ನಣ್ಣ ಬರುತ್ತಿದ್ದಾನೆಂದು ಕೆರೆಯ ಏರಿಯ ಮೇಲೆ ನಿಂತು..

ಆಷಾಢ ಮಾಸ ಬಂದೀತವ್ವ ಕಾಸಾದ ಅಣ್ಣ ಬರಲಿಲ್ಲ
ಎಷ್ಟು ನೆನೆಯಲಿ ಅಣ್ಣನ ದಾರಿಯ
ಸುವ್ವಿನಾರಿ ಸುವ್ವಾರಿ.

ಎಂದು ತನ್ನ ಗೆಳತಿಗೆ ಹೇಳುವ ರೀತಿ ಹೃದಯ ತಟ್ಟುವ ಹಾಗಿದೆ. ಗೌರಿ ಹಬ್ಬವೆಂದರೆ ಹೆಣ್ಣು ಮಕ್ಕಳಿಗೆ ಎಲ್ಲಿಲ್ಲದ ಸಂತೋಷ, ಸಡಗರ. ಸಂಭ್ರಮಕ್ಕೆ ತನ್ನ ತವರು ಮನೆ ಬಿಟ್ಟರೆ ಮತ್ತೊಂದು ಸ್ಥಳವೇ ಇಲ್ಲ ಎನ್ನುವಂತೆ ಅವಳು ಭಾವಿಸುತ್ತಾಳೆ. ಎಷ್ಟೆ ಬಡತನ ಇರಬಹುದು, ಬಲ್ಲಿದರಿರಬಹುದು. ತಾಯಿ ಮನೆಯ ನೆನಪು ಕಾಡದೇ ಇರದು. ತನ್ನ ಮನೆಯ ಮುಂದೆ ಬಾಗಿಲು ತೊಳೆದು ರಂಗೋಲೆ ಬಿಡುತ್ತಿದ್ದ ನೆನಪು, ಬಾವಿಯಿಂದ ನೀರು ಸೇದುವುದಕ್ಕೆ ಹೋಗುವ ಆತುರ, ನೀರು ತರುವಾಗ ತನ್ನೂರ ಗೆಳತಿಯರ ಜೊತೆ ತನ್ನ ಗಂಡನ ಮನೆಯ ವಿಚಾರ ಹೇಳುವ ತುಮುಲ, ಜೊತೆಗೆ ತನ್ನೂರ ಪ್ರೀತಿಯ ಗೆಳೆಯನನ್ನು ನೋಡುವ ಹಂಬಲ, ಇವೆಲ್ಲದರ ಆಚೆ ತನ್ನ ತಾಯಿ ತಂದಿರುವ ತೌರ್ಬಣ್ಣ (ಸೀರೆ) ಉಟ್ಟು, ಹೊಸ ಬಳೆ ತೊಟ್ಟು, ಅಷ್ಟೋ ಇಷ್ಟೋ ಇರುವ ಬಂಗಾರ ತೊಟ್ಟು ನಾಗರಕಲ್ಲಿಗೆ ತನಿ ಎರೆಯಲು ಹೋಗುವುದಕ್ಕೆ ಅವಳು ಪಡುವ ಕಾತುರವನ್ನು ವರ್ಣಿಸಲಾಗಿದೆ. ಈ ಸಂದರ್ಭದಲ್ಲಿ ಅವಳು ಹೀಗೆ ಹಾಡುತ್ತಾಳೆ.

ತಾಯಿ ಇದ್ದರೆ ಭೋಗ ತಂದೆ ಇದ್ದರೆ ಭೋಗ
ನೀರೆರೆದ್ರೆ ಬಾಳೆಗೊನೆ ಭೋಗ– ತಾಯಮ್ಮ
ನೀ ಇದ್ರೆ ಮನೆಗೆ ಐಭೋಗ.

ತಾಯಿ ಇದ್ದರೆ ಆ ಮನೆ ಆನಂದ ಐಭೋಗ ಎನ್ನುವ ಒಡಲಾಳದ ಮಾತನ್ನು ಹೆಣ್ಣು ಮಗಳು ಈ ಮೇಲಿನ ಹಾಡಿನಲ್ಲಿ ಕಟ್ಟುತ್ತಾಳೆ. ತಾಯಿ ಇಲ್ಲದ ಮನೆಗೋದರೆ ಹೇಗಿರಬಹುದು ಎಂಬುವುದು ಅನೇಕ ಹೆಣ್ಣು ಮಕ್ಕಳ ಅನುಭವದ ಮಾತುಗಳು ತಿಳಿಸುತ್ತವೆ.

ಹೋಗ್ತೀನಿ ಹೊಸ್ತಿಲೆ ಹೋಗ್ತೀನಿ ಬಾಗಿಲೇ
ಹೋಗ್ತೀನಿ ನನ್ನ ನಡುಮನೆಯೆ–ಅಣ್ಣಯ್ಯ
ತಾಯಿಲ್ದ ತವರೀಗೆ ಬಾರಬಾರ್ದು.

ತಾಯಿ ಇದ್ದರೆ ತೌರ್ಮನೆ, ತಾಯಿ ಇಲ್ಲದ ಮನೆ ಒಣಗಿದ ಬರಡು ಮನೆ, ಸಂಬಂಧವಿಲ್ಲದ ರೀತಿಯ ಮನೆ. ತಾಯಿ ಇಲ್ಲದ ತವರಿಗೆ ಹೋದರೆ ನೀರಿರದ ಕೆರೆಗೆ ಕರು ಹೋದಂತೆ ಎಂಬ ಕಲ್ಪನೆಯ ಮೂಲಕ ದುಃಖವನ್ನು ಹೆಣ್ಣು ಅಭಿವ್ಯಕ್ತಿಸುತ್ತಾಳೆ. ನಾನು ಪ್ರೀತಿಯ ಅಣ್ಣ ಇದ್ದಾನೆ ಎಂಬ ಕಾರಣಕ್ಕೆ

ಬಂದೆ, ಈ ಮನೆಯ ಬಾಗಿಲಲ್ಲಿ ಎಷ್ಟು ಓಡಾಡಿದ್ದೇನೆ, ಈ ನಡುಮನೆಯನ್ನು ಎಷ್ಟು ಸಾರಿಸಿ ಗುಡಿಸಿದ್ದೇನೆ, ಆಟವಾಡಿ ಉಂಡಿದ್ದೇನೆ, ಇವತ್ತು ನನ್ನಣ್ಣ ನನ್ನನ್ನು ದೂರಗೊಳಿಸಿದ್ದಾನೆ. ಎಂದೆಲ್ಲ ಆ ಮನೆಯ ಹೊಸ್ತಿಲಿಗೆ ನಮಸ್ಕರಿಸಿ ತಾಯಿ ಇಲ್ಲದ ತವರೀಗೆ ಬರಬಾರದು ಎಂಬ ಅಕ್ರಂದನದ ನುಡಿ ನುಡಿದು ಹೆಣ್ಣು ಮಗಳು ಹೊರಟು ಹೋಗಿರುವ ಸಂಗತಿಗಳು ಸಾಕಷ್ಟಿವೆ. ತನ್ನ ಗಂಡನ ಮನೆ ಹಾದಿ ಹಿಡಿದು...

ಅಣ್ಣ ಬಾಳಿದರೇನು ತಮ್ಮ ಬಾಳಿದರೇನು
ತನ್ನ ಕೈ ಹಿಡಿದ ಪುರುಷ-ಬಾಳಿದರೆ
ಉಣ್ಣಲಿಕ್ಕು ಭಾಗ್ಯ ತಿನ್ನಲಿಕ್ಕು.

ಎಂದು ನೆನೆಯುತ್ತಾ ತನ್ನ ಗಂಡನ ಮನೆಯೇ ಮುಂದಕ್ಕೆ ನನಗೆ ಶಾಶ್ವತ. ತಾಯಿ ಇಲ್ಲದ ತವರು ಇಂದು ಮರಳುಗಾಡು ಎಂಬ ಪ್ರಜ್ಞೆ ಹೆಣ್ಣಿಗೆ ಕಾಣಿಸುತ್ತದೆ. ಜಾನಪದಕ್ಕೆ ಹೆಣ್ಣೇ ಮೂಲ, ತಾಯಿ ಬೇರು. ಹೆಣ್ಣೇ ಜಾನಪದ ಸೃಷ್ಟಿಕರ್ತೆ ಎಂಬ ಮಾತು ಸತ್ಯವಾದದ್ದು, ನಿತ್ಯವಾದದ್ದು. ಜೊತೆಗೆ ಜಾನಪದ ಸೌಂದರ್ಯ ನೀತಿಗೆ ಹೆಣ್ಣು ಮೂಲವಾದ್ದರಿಂದ ತಾಯಿ ನೆಲೆಯಲ್ಲಿ ಜಾನಪದ ಸೃಷ್ಟಿಗೆ ತಾಯಿ ಕಾರಣ. ಮಕ್ಕಳ ಸೃಷ್ಟಿಗೂ ಹೆಣ್ಣು ಕಾರಣ. "ಭೂಮಿ ತಾಯಿ ಹೆಣ್ಣು" ಇದರೊಳಗೆ ಎಲ್ಲವೂ ತುಂಬಿಕೊಂಡಿದೆ. ಇದನ್ನು ಉಳಿಸಿ ಬೆಳೆಸಿಕೊಳ್ಳುವ ಜವಾಬ್ದಾರಿ ಯಾರದು ಎಂಬ ದೊಡ್ಡ ಪ್ರಶ್ನೆ ನಮ್ಮ ಮುಂದಿದೆ. ಮಕ್ಕಳಿಗೆ ತಾಯಾಗಿ, ಪ್ರಕೃತಿಗೆ ತಾಯಾಗಿ, ಗುಣವಂತಿಕೆಯ ಸೌಂದರ್ಯವಾಗಿ ಹೆಣ್ಣು ಕಾಣಿಸುತ್ತಾಳೆ.

ಮೂಗುತಿಗೆ ಮುತ್ತೇಕೆ ಚೆಲುವೇಗೆ ಚಿನ್ನೇಕೆ
ಸಾದೆತ್ತಿಗೇಕೆ ಮೂಗುದಾರ- ತಂಗವ್ವ
ಗುಣವಂತೆಗೇಕೆ ಈ ದುಃಖ.
"ವಿವೇಕದ ಮೌನ ಹೆಣ್ಣಿಗೆ ಯಾವ ಚಿನ್ನವು
ಅವಶ್ಯವಿಲ್ಲ ಗುಣವೆ ಚಿನ್ನ"

ಎಂಬ ತ್ರಿಪದಿ ಮಾನವೀಯ ಮನೋಧರ್ಮದಿಂದ ಕಾಣಿಸಿಕೊಳ್ಳುತ್ತದೆ. ಇವತ್ತಿನ ಜಾಗತೀಕರಣದ ಹೆಣ್ಣಿಗೂ ನಮ್ಮ ಗ್ರಾಮೀಣ ಬದುಕಿನ ಹೆಣ್ಣಿಗೂ ಎಷ್ಟೆಲ್ಲಾ ವ್ಯತ್ಯಾಸವಿದೆ ಎಂಬುವುದು ನಮಗೆ ಅರಿವಾಗುತ್ತದೆ. ಆದ್ದರಿಂದ ನಮ್ಮ ಜನಪದ ಹೆಣ್ಣುಮಕ್ಕಳಲ್ಲಿ ಅನನ್ಯವಾದ ಗೌರವ, ಪ್ರೀತಿ, ಹಂಬಲ ಯಾವತ್ತೂ ಜೀವಂತವಾಗಿರುತ್ತದೆ. ಆದ್ದರಿಂದ "ಜಾನಪದ ಜನನಕ್ಕೆ ಹೆಣ್ಣೆ ಮೂಲ ಸೃಷ್ಟಿಕರ್ತೆ" ಎಂಬುದು ಸತ್ಯವಲ್ಲವೇ?

****

(೩) ಶಾಲಾ ಕಾಲೇಜಿಗೆ ಜಾನಪದ ಪಠ್ಯವಾದರೆ ಮಾತ್ರ ಜಾನಪದ ಉಳಿವು

ಸಮಾಜ ಬದಲಾಗುತ್ತಿದೆ. ಶಿಕ್ಷಣದಲ್ಲಿ ಏನೇನೋ ವಿಚಾರಗಳನ್ನು ತರುತ್ತಿದ್ದೇವೆ. ವಿದ್ಯಾರ್ಥಿಗಳಿಗೆ ತಿಳಿಸುತ್ತಲೂ ಇದ್ದೇವೆ. ಅತ್ಯುತ್ತಮ ಪುಸ್ತಕಗಳು ನಮ್ಮ ನಡುವೆ ಇವೆ. ಹಾಗೆಯೇ ನಮ್ಮ ಸಮಾಜ ವೈಜ್ಞಾನಿಕವಾಗಿಯೂ ಬೆಳೆಯುತ್ತಿರುವುದನ್ನು ಕಾಣುತ್ತಲೂ ಇದ್ದೇವೆ. ಇವೆಲ್ಲವನ್ನು ಮೆಚ್ಚಬೇಕಾದ್ದೆ ಸರಿ. ಇವತ್ತು ತಂದೆ ತಾಯಂದಿರು ತಮ್ಮ ಮಕ್ಕಳು ಬೆಳೆದು ವಿದ್ಯಾಭ್ಯಾಸ ಮುಗಿಸಿ ನಂತರ ಅವರಿಗೊಂದು ಕೆಲಸ ಸಿಕ್ಕಿಬಿಟ್ಟರೆ ನಮ್ಮ ಕೆಲಸ ಮುಗಿದಂತೆಯೇ ಸರಿ ಎಂದು ಭಾವಿಸಿಕೊಳ್ಳುತ್ತಾರೆ. ಇದರ ಜೊತೆಗೆ ಮನೆಯೊಂದಿದ್ದರೆ ಸಾಕು ಎಂಬ ಸ್ಥಿತಿಗೆ ನಮ್ಮ ಮನಸ್ಸುಗಳು ಬಂದು ನಿಂತಿವೆ. ಆದರೆ! ಗ್ರಾಮಗಳ ಜಾನಪದ ಇವತ್ತು ನಾಶದ ಅಂಚಿನಲ್ಲಿವೆ. ಇವು ಉಳಿಯಲು ಯಾವ ದಾರಿ ಕಂಡುಕೊಳ್ಳಬೇಕಾಗಿದೆ ಎಂಬುದನ್ನು ಯಾರು ಯೋಚಿಸಬೇಕು? ಶಿಕ್ಷಣದಲ್ಲಿ ಜಾನಪದವನ್ನು ಅಳವಡಿಸಿಕೊಂಡರೆ ಮಾತ್ರ ಕಲೆಗಳು ಉಳಿಯುತ್ತವೆ. ಇದಕ್ಕೆ ಸಂಬಂಧಿಸಿ ಪುಸ್ತಕಗಳು ಎಷ್ಟು ಬಂದಿವೆ, ವಿಶ್ವವಿದ್ಯಾಲಯ ಮಟ್ಟದಲ್ಲಿ ವಿಶೇಷ ಆಸಕ್ತಿಯುಳ್ಳವರು ಜಾನಪದವನ್ನು ತಿಳಿದುಕೊಳ್ಳಬಹುದು ಎಂಬುದೊಂದಿದೆ. ಅದನ್ನು ಬಿಟ್ಟರೆ ಶಾಲಾ ಕಾಲೇಜುಗಳಲ್ಲಿ, ಪ್ರಾಥಮಿಕ ಹಂತದಲ್ಲಿ ಇಲ್ಲವೇಕೇ? ಶಾಲಾ ಕಾಲೇಜುಗಳಲ್ಲಿ ಪ್ರಾಥಮಿಕ ಹಂತದಿಂದ ಜಾನಪದ ಪಠ್ಯಗಳು ಇರಬೇಕು. ಅದರಲ್ಲಿ ಜಾನಪದ ಎಂದರೇನು? ನಮಗೆ ಆದರ್ಶವಾಗಿರುವ ಕಥೆಗಳನ್ನು ಪಠ್ಯಗಳಲ್ಲಿ ತರುವ ಯೋಜನೆ ಮಾಡುತ್ತಿಲ್ಲವೇಕೆ? ಯುವಕರಿಗೆ ಜಾನಪದದ ಅರಿವು ನಾವೇ ಮೂಡಿಸುತ್ತಿಲ್ಲ ಎಂಬುದು ನಿಜವಲ್ಲವೇ? ಬದುಕಲು ಶಿಕ್ಷಣ ಎಷ್ಟು ಅವಶ್ಯಕವೋ ನಾಡಿನ ಜನರ ಜಾನಪದ ಕಲೆಗಳು ಅಷ್ಟೇ ಮುಖ್ಯ. ಎಲ್ಲಾ ಕಲೆಗಳಿಗೆ ತಾಯಿ, 'ಜಾನಪದ' ಎಂದು ಗೊತ್ತಿದ್ದರೂ ಅದರ ಬಗ್ಗೆ ಆಸಕ್ತಿ, ಅರಿವು ಮೂಡಿಸಿಕೊಳ್ಳುವ ಗೋಜಿಗೆ ಯಾರೂ ಏಕೆ ಹೋಗುತ್ತಿಲ್ಲ, ಈ ವಿಚಾರ ಯೋಚಿಸಬೇಕಾದ್ದಲ್ಲವೇ? ಜನಜೀವನದ ಜೀವನಾಡಿಯಾಗಿ ಹುಟ್ಟಿ ಶ್ರಮದ ಸೆಲೆಯಲ್ಲಿ ಬಂದ ಜಾನಪದ ಕಲೆಗಳನ್ನು ಇವತ್ತಿನ ಯುವ ಜನತೆಗೆ ಕಲಿಸುವುದು ಹೇಗೆ? ತಿಳಿಸುವುದು ಹೇಗೆ? ಮುಂದಿನ ಜನಾಂಗಕ್ಕೆ ಇದನ್ನು ಜೀವಂತವಾಗಿ ಧಾಟಿಸುವುದು ಅತೀ ಮುಖ್ಯ ಎಂದು ಹೇಳುತ್ತಿದ್ದೇವೆಯೇ ಹೊರತು ಎಷ್ಟರ ಮಟ್ಟಿಗೆ ಇದನ್ನು ಜಾರಿಗೆ ತರುತ್ತಿದ್ದೇವೆ? ಕಲಿಸುತ್ತಿದ್ದೇವೆ? ಇವೆಲ್ಲ ಯಾರ ಹೊಣೆ?

ಪ್ರಾಥಮಿಕ ಶಾಲೆಯಿಂದ ಕಾಲೇಜಿನ ಶಿಕ್ಷಣದವರೆಗೆ ಜಾನಪದದ ಬಗ್ಗೆ ಆಸಕ್ತಿ ಮೂಡಿಸುವ ಜನಪದ ಪ್ರಕಾರಗಳನ್ನು ಬಳಕೆಗೆ ತರುವ ಕೆಲಸವಾಗಬೇಕಲ್ಲವೆ? ಈಗಿನ ಯುವ ಜನತೆ, ಡಾಕ್ಟರ್, ಇಂಜಿನಿಯರ್‌ಗಳಾಗಿ ಅಮೇರಿಕಾದಲ್ಲಿ ತಳವೂರಿಬಿಟ್ಟರೆ ಅದು ದೊಡ್ಡ ಸಾಧನೆಯೆ ಸರಿ. ಆದರೆ...

ಈ ದೇಶದ ಕಲೆಗಳ ಶ್ರೀಮಂತಿಕೆಗೆ ಹಣದ ಶ್ರೀಮಂತಿಕೆಯನ್ನು ಹೋಲಿಸಲು ಸಾಧ್ಯವೆ? ಕಲೆಗಳಿಲ್ಲದ ದೇಶ ದೇಶವೆ? ಕಲಾವಿದರಿಲ್ಲದ ದೇಶ ದೇಶವೆ? ಜಾನಪದ ಸಂಸ್ಕೃತಿ ಇಲ್ಲದ ನಾಡು ನಾಡೆ? ಹೌದು. ಅಂತಹ ದೇಶ ದೇಶವಲ್ಲವೆಂದು ಹೇಳುತ್ತೇವೆ ನಿಜ. ಆದರೆ ಒಂದು ದೇಶ ಆರ್ಥಿಕವಾಗಿ ಹಿಂದುಳಿದರೆ ಕೋಟ್ಯಾಂತರ ರೂಪಾಯಿ ಸಾಲ ತಂದು ದೇಶವನ್ನು ಉಳಿಸಬಹುದು, ಮುನ್ನಡೆಸಬಹುದು. ಆದರೆ ಈ ದೇಶ, ನಾಡಿನ ಜಾನಪದ ಕಲೆಗಳು ನಾಶವಾದರೆ ಕೋಟಿಗಟ್ಟಲೆ ಹಣ ಕೊಟ್ಟು ಬೇರೆ ದೇಶದಿಂದ ಅವುಗಳನ್ನು ತರಲು ಸಾಧ್ಯವೇ? ಮುಂದಕ್ಕೆ ಬೆಳೆ ಬೆಳೆಯುವುದಕ್ಕೆ ಭೂಮಿಯೇ ಸಿಗಲು ಕಷ್ಟವಾಗುತ್ತದೆ ಎಂಬ ಕಾಲ ಬರುತ್ತಿರುವಾಗ ಈ ಜನಪದ ಕಲೆಗಳೇಕೆ ಎಂಬ ಪ್ರಶ್ನೆ ಈಗಾಗಲೇ ನಮ್ಮ ಮುಗ್ಧ ಹಳ್ಳಿಯ ಜನಪದ ಕಲಾವಿದರ ಮನದಲ್ಲಿ ಮೂಡಿವೆ. ಇಂಥ ಸ್ಥಿತಿಯಲ್ಲಿ ನೂರಾರು ವರ್ಷಗಳಿಂದ ಶಾಲೆಯ ಮೆಟ್ಟಿಲೇರದ ನಮ್ಮ ಜನರು ಕಟ್ಟಿದ ಜನಪದ ಕಲೆಗಳನ್ನು ಬಲಪಡಿಸುವ ಬಗೆ ಹೇಗೆ? ಹಲವಾರು ವಿದ್ವಾಂಸರು ಹೇಳುವ ರೀತಿಯಲ್ಲಿ, ಜಾನಪದ ಶಿಕ್ಷಣವಾಗಬೇಕು. ಜಾನಪದ ಪ್ರತ್ಯೇಕ ಪಠ್ಯವಾಗವೇಕು. ಆಯಾ ತರಗತಿಗೆ ಅನುಗುಣವಾಗಿ, ನೂರಾರು ಪ್ರಕಾರವಿರುವ ಜಾನಪದವನ್ನು ಕಲಿಸುವ ಕೆಲಸವಾದಾಗ ಮಾತ್ರ ಅದು ಉದ್ಧಾರವಾಗುತ್ತದೆ, ಉಳಿಯುತ್ತದೆ. ಇವೆಲ್ಲ ಯಾರ ಜವಾಬ್ದಾರಿ? ಗ್ರಾಮ್ಯ ಕಲೆಗಳು ಶ್ರಮಿಕ ಜನರ, ಕೆಳವರ್ಗಗಳ ಬೆವರಲ್ಲಿ ಅರಳಿದ ದುಃಖ ದುಮ್ಮಾನಗಳನ್ನು ಮರೆಯಲು, ನೆಮ್ಮದಿಗೋಸ್ಕರ ಕಟ್ಟಿಕೊಂಡ ಕಲೆಗಳಾಗಿವೆ. ಇವುಗಳು ಪಾರಂಪರಿಕ ಕಲೆಗಳಾಗಿ ಬೆಳೆದಿವೆ. ವಿಶಿಷ್ಟ ವೈಭವದ ಜನಪದ ಕಲಾ ಸಂಸ್ಕೃತಿ ನಮ್ಮ ನಾಡಿನಲ್ಲಿ ಹುಟ್ಟಿರುವುದು ನಮ್ಮ ಭಾಗ್ಯವಲ್ಲವೇ ಯೋಚಿಸಿ! ಇಂತಹ ಬೇರೆ ಬೇರೆ ವಿಷಯಗಳನ್ನು ಜಾನಪದ ಅಂತರ್‌ಶಿಸ್ತಿಗೆ ಒಳಗೊಳ್ಳುವಂತೆ ಮಾಡುವುದು, ಎಲ್ಲಕ್ಕಿಂತ ಮಿಗಿಲಾಗಿ ಪಠ್ಯಪುಸ್ತಕಗಳಾಗಿ ಶಾಲಾ ಕಾಲೇಜುಗಳಲ್ಲಿ ಜಾನಪದ ವಿಷಯವನ್ನು ಅಳವಡಿಸಬೇಕಾಗಿದೆ. ಇದಕ್ಕೆಲ್ಲ ಕಲಾವಿದರೆ ಶಿಕ್ಷಕರಾಗಬೇಕು. ಹಳೆ ಮೈಸೂರು, ಉತ್ತರ ಕರ್ನಾಟಕ, ಕರಾವಳಿ ಮತ್ತು ಮಧ್ಯ ಕರ್ನಾಟಕಗಳ ಭಾಷಾ ವೈವಿಧ್ಯತೆಯ ಹಿನ್ನೆಲೆಯಲ್ಲಿ ಪಠ್ಯಕ್ರಮ ತಯಾರಾಗಬೇಕು. ಈ ಪರಿಕಲ್ಪನೆಯ ವಿಧಾನದಲ್ಲಿ ಪಠ್ಯಪುಸ್ತಕವಿರಬೇಕು. ಜಾನಪದವು ಗೊತ್ತಿಲ್ಲದ ಶಿಕ್ಷಕರಿಗೆ ಡಿಪ್ಲೋಮಾ ತರಗತಿಗಳನ್ನು ಕೊಡಿಸಿ ಅವರಿಗೆ ತರಬೇತಿ ನೀಡುವುದು ಮುಖ್ಯವಾಗುತ್ತದೆ. ಜಾನಪದ ಕಲಿಸುವುದಕ್ಕೆ ಪದವಿಗಳು ಮುಖ್ಯವಲ್ಲ. ಕಂಠಸ್ಥ ಜ್ಞಾನ ಮುಖ್ಯವಾಗಬೇಕು. ಕಲಾ ಪ್ರಕಾರಗಳ ತಿಳುವಳಿಕೆಯ ಅರಿವು ಪ್ರಾಮುಖ್ಯವಾಗಬೇಕು. ನಾನು ಗ್ರಹಿಸಿದಂತೆ ಯಾವುದೇ ಕಲಾ ಪ್ರಕಾರದಲ್ಲಿ ಹಾಡು, ನೃತ್ಯ, ಸಾಹಿತ್ಯ ಈ ಅಂಶಗಳು ಎದ್ದು ತೋರುತ್ತವೆ. ಶಾಲೆಯಲ್ಲಿ ಮಕ್ಕಳಿಗೆ ಪಾಠದ ಜೊತೆಯಲ್ಲಿ ಜಾನಪದ ಸಾಹಿತ್ಯ ಮತ್ತು ಕಲೆಗಳನ್ನು ಅವರಿಗೇ ಅರಿವಿಲ್ಲದ ರೀತಿಯಲ್ಲಿ ಕಲಿಸುವಂತಾಗಬೇಕು. ಈ ಜಾನಪದ

ಕಲೆಗಳು ಅಂದಿನ ನಮ್ಮಜ್ಜ-ಅಜ್ಜಿಯರ ಕಲೆಗಳು ಎಂಬ ಬೇಜಾವಾಬ್ದಾರಿ ಮತ್ತು ಕೀಳರಿಮೆ ಇಟ್ಟುಕೊಳ್ಳದೆ ಅವುಗಳ ಕುರಿತು ಗೌರವ ಮೂಡಿಸಿಕೊಳ್ಳುತ್ತಾ ಆಪ್ತತೆಯ ಮಾತುಗಳನ್ನು ಮಕ್ಕಳಿಗೆ ತಟ್ಟುವಂತೆ ಹೇಳಬೇಕು. ಜನಪದ ಸಂಗೀತ ನೇರವಾಗಿ ಎದೆಯಿಂದ ಎದೆಗೆ ಹರಿಯುವ ಮನಕ್ಕೆ ಮುಟ್ಟುವ ಶ್ರೇಷ್ಠ ಕಲೆಯೆಂದರೆ ಸಾಲದು, ಇವುಗಳು ನಮ್ಮ ಮನಸ್ಸುಗಳನ್ನು ಕಟ್ಟುತ್ತವೆ ಎಂಬ ಭಾವನೆಯನ್ನು ನಾವು ಮೊದಲು ಮೂಡಿಸಿಕೊಳ್ಳಬೇಕು. ಕರ್ನಾಟಕದಲ್ಲಿ ಊರಿಗೊಂದು ದೇವರ ಗುಡಿ, ಮನೆಗೊಂದು ಟಿ.ವಿ ಬಂದು ನಮ್ಮ ಕಲೆಗಳನ್ನು ಹೆಮ್ಮಾರಿಯಾಗಿ ನುಂಗಿ ಯಾವ ನೀತಿ-ರೀತಿಯೂ ಇಲ್ಲದೆ, ಆದರ್ಶವಿಲ್ಲದೆ, ಹಿಂದಿನ ಮಹಾತ್ಮರ ಮಾತುಗಳನ್ನು ಮರೆಯುವಂತೆ ಮಾಡುತ್ತದೆ. ನಮ್ಮೊಳಗಿರುವ ಜಾನಪದ ಸಂಸ್ಕೃತಿಯನ್ನೇ ಹಾಳು ಮಾಡುತ್ತಿರುವ ಕಾಲ ಬಂದುಬಿಟ್ಟಿದೆ. ಮನೆಯಲ್ಲಿ ತಮ್ಮ ವಂಶಾವಳಿ ಹೇಗೋ ಊರುಗಳಲ್ಲಿನ ಜನಪದ ಕಲೆಗಳೂ ಅಷ್ಟೇ ದೊಡ್ಡವು. ಅವುಗಳ ಬಗ್ಗೆ ಗೌರವವನ್ನು ತಾಳಿ ನಮ್ಮೂರಿನ ಕಲೆಗಳನ್ನು ನಾವೆ ಉಳಿಸಿ ಬೆಳೆಸಬೇಕಾಗಿದೆ. ಪ್ರಚಾರ ಮಾಡಬೇಕಾಗಿದೆ.

ಈಗಾಗಲೇ ಹೇಳಿದಂತೆ ಶಾಲಾ ಶಿಕ್ಷಕರೆ ದೊಡ್ಡ ಪ್ರಸಾರ ಮಾಧ್ಯಮ. ಅವರ ಬಾಯಲ್ಲಿ ಈ ಜಾನಪದ ನಲಿದಾಡಬೇಕು, ದಿನನಿತ್ಯ ಮಕ್ಕಳ ಕಿವಿಗೆ ಒಳ್ಳೆಯ ಮಾತಿನ ಜೊತೆ ಒಳ್ಳೆಯ ಜನಪದ ಗೀತೆ, ಕೋಲಾಟದ ಹಾಡುಗಳು ಬೀಳಬೇಕು. ಆಗಾಗ ಶಿಕ್ಷಕರು ಜನಪದ ನೀತಿಕಥೆಗಳನ್ನು ಅಲ್ಲದೇ ಉಪಕಥೆಗಳನ್ನು ಅರ್ಥೈಸಿ ಹೇಳಬೇಕು. ಜಾನಪದದಲ್ಲಿ ವಿಜ್ಞಾನವಿದೆ, ಗಣಿತವಿದೆ, ಪರಿಸರವಿದೆ, ಆಟಗಳಿವೆ, ಜೊತೆಗೆ ಹಾಸ್ಯ, ಗಾದೆ, ಒಗಟು ಮತ್ತು ಒಡಪುಗಳಿವೆ. ಅವುಗಳನ್ನೆಲ್ಲ ಹುಡುಕಿ, ತಡಕಿ, ಪಠ್ಯಕ್ರಮದಲ್ಲಿ ಇಡುವ ಅಗತ್ಯವಿದೆ. ಇದಕ್ಕೆಲ್ಲ "ಜಾನಪದ ಜ್ಞಾನ" ಹೊಂದಿರುವ ವಿದ್ವಾಂಸರ ಸಮಿತಿಯೂ ಮುಖ್ಯವೆನಿಸುತ್ತದೆ. ಕೃಷಿಕರಲ್ಲಿ ಮಹತ್ತರವಾದ ಶಿಕ್ಷಣವಿದೆ. ಬಹಳ ಎತ್ತರದ ಪದವಿಯಲ್ಲಿರುವವರಿಗೆ, ರಾಗಿ ಮೆದೆ ಹಾಕುವುದು ಗೊತ್ತಿಲ್ಲ, ಕಣದ ಕೆಲಸ ಮಾಡುವುದು ತಿಳಿದಿಲ್ಲ. ಇದೂ ಒಂದು ಶಿಕ್ಷಣವೆ! ಜೊತೆಗೆ ವಿದ್ಯಾಭ್ಯಾಸದ ಜೊತೆಗೆ ಜನಪದ ವೈದ್ಯದ ವಿಷಯವೂ ಇರಬೇಕು. ಅದೇ ರೀತಿ ಜನಪದ ತ್ರಿಪದಿ ಗೀತೆಗಳು ಬಾಡಿ ಹೋಗುವ ಮುನ್ನ ಯುವಕರ ನಾಲಿಗೆಯಲ್ಲಿ ಹಾಡುಗಳಾಗಿ ಅರಳಬೇಕು. ನಾಟಿ ಪದಗಳು, ಗಾಡಿ ಪದಗಳು, ಮದುವೆ ಪದಗಳು, ರೈತಗೀತೆ, ದೋಣಿ ಗೀತೆ, ಗಾಣದ ಗೀತೆ ಇವೆಲ್ಲ ಒಂದು ದೊಡ್ಡ ಜಾನಪದ ಕಣಜ. ಇವು ಅಕ್ಷರವೇ ಅರಿಯದ ಶಾಲೆಯ ಮೆಟ್ಟಿಲೇರದ ಅಂತರಂಗದ ಎದೆಗಳಲ್ಲಿ ಹುಟ್ಟಿಬಂದಿವೆ. ಯಾವ ಪದವಿಯನ್ನೂ ಮಾಡದವರು ಇಷ್ಟೆಲ್ಲ ಕಟ್ಟಿರುವುದು ಈ ನಾಡಿನ ಭಾಗ್ಯವಲ್ಲವೆ. ಗ್ರಾಮ ಕಲೆಗಳಲ್ಲಿ ಇದು ಇಲ್ಲ ಎಂದು ಹೇಳುವುದು ಸಾಧ್ಯವಿಲ್ಲ. ಈಗೀಗಂತು ಹಳ್ಳಿಯ ತಾಜಾತನ ನಗರಕ್ಕಿಂತ ಕೀಳಾಗುವ ಸ್ಥಿತಿಗೆ ಬರುತ್ತಿದೆ. ಆ ಮುನ್ನವೇ

ನಮ್ಮ ಹಳ್ಳಿಯ ಯುವಕರು ನಮ್ಮೂರ ಜನಪದ ಕಲೆಗಳು, ನಮ್ಮೂರ ಜನಪದ ಗೀತೆಗಳು ಎಂಬ ಪ್ರೀತಿಯನ್ನು ಹುಟ್ಟಿಸಿಕೊಳ್ಳಬೇಕಾಗಿದೆ. ಅದರಲ್ಲಿ ಶಾಲಾ ಕಾಲೇಜುಗಳು ಅತೀ ಮುಖ್ಯ ಪಾತ್ರ ವಹಿಸಬೇಕು. ಶಿಕ್ಷಕರು ಜಾನಪದ ಸೂತ್ರಧಾರರಾಗಬೇಕು. ವಿದ್ಯಾರ್ಥಿಗಳು ಜಾನಪದ ಪಾತ್ರಧಾರಿಗಳಾಗಬೇಕು. ಆಗ ಮಾತ್ರ ನಮ್ಮ ಜನ ಸಂಸ್ಕೃತಿ, ಜನನಾಡಿಯ ಜಾನಪದ ಉಳಿಯಲು, ಬೆಳೆಯಲು ಸಾಧ್ಯ. ಇವೆಲ್ಲವೂ ನಮ್ಮ ಕೈಯಲ್ಲೆ ಇದೆ ಎಂದರೆ ತಪ್ಪಾಗಲಾರದು. ನಾವೇನು ಮಾತನಾಡುತ್ತೇವೆಯೋ ಅದೇ ರೀತಿ ಮಕ್ಕಳು ಅನುಕರಣೆ ಮಾಡುತ್ತಾರೆ, ನಾವೇನು ಕಲಿಸುತ್ತೇವೆಯೋ ಅದೇ ರೀತಿ ಮಕ್ಕಳು ಕಲಿಯುತ್ತಾರೆ. ಈ ಚಿನ್ನದ ನಾಡಿನ ಒಲವಿನ ಬೀಡಿನ ಜಾನಪದ ಶೃಂಗಾರವನ್ನು ನಮ್ಮ ಮಕ್ಕಳು ಕೊರಳಲ್ಲಿ ಹಾಕಿಕೊಂಡು ಕಂಠದಲ್ಲಿ ಝೇಂಕರಿಸಿ, ಕಾಲಿನಲ್ಲಿ ಹೆಜ್ಜೆಗಳಾಗಿ, ತಲ್ಲಣಿಸುವಂತೆ ಮಾಡಬೇಕು. ಮುಂದಿನ ಜನಾಂಗಕ್ಕೆ ಈ ಕಲೆಗಳು ಉಳಿವಂತೆ ನಾವು ಮಾಡಿದರೆ ಈ ನಾಡನ್ನು ಗೌರವಿಸಿದಂತಾಗುತ್ತದೆ. ಹೀಗೆ ಮಾಡದೆ ಹೋದರೆ ತಮ್ಮ ಮೂಲ ಜಾನಪದ ಕಲೆಯನ್ನು ನಾವೇ ಕೊಂದಂತಾಗುತ್ತದೆ ಎಂಬುದರಲ್ಲಿ ಯಾವ ಅನುಮಾನವೂ ಇಲ್ಲ. ಒಂದು ವೇಳೆ ಹಾಗಾದರೆ ನಮ್ಮ ಮಕ್ಕಳನ್ನು ನಾವೇ ನಾಶಮಾಡಿದ ಹಾಗೆ. ಕನ್ನಡ ಜಾನಪದವನ್ನು ಮೇರು ಶಿಖರಕ್ಕೇರಿಸಿದಂತಾಗುತ್ತದೆ. ಇದೇ ಈ ಲೇಖನದ ಅತ್ಯಂತ ಅಂತರಾಳದ ಮಾತುಗಳಾಗಿವೆ. ಈಗ ಪ್ರಾರಂಭವಾಗಿರುವ ಜಾನಪದ ವಿಶ್ವವಿದ್ಯಾಲಯವೂ ಈ ಅಂಶಗಳನ್ನಿಟ್ಟುಕೊಂಡು ಮುಖ್ಯವಾಗಿ ಚಿಂತಿಸಬೇಕಾಗಿದೆ. ಇವೆಲ್ಲ ಈಗ ಗೊತ್ತಾಗವುದಿಲ್ಲ, ಕಲೆಗಳೆಲ್ಲ ನಾಶವಾಗಿ ವಿಜಯನಗರ ಹಾಳಾಗಿ ಹೋದಾಗ ಅಯ್ಯೋ ಹಾಳು ಹಂಪಿಯೆ ಎಂದು ಚಿಂತಿಸುತ್ತಾ ಈಗ ಸಂಶೋಧನೆಗೆ ತೊಡಗಿದ್ದೀವಲ್ಲ, ಆ ರೀತಿ ಜಾನಪದದ ಸ್ಥಿತಿ ಆಗಬಾರದು. ಇದರ ಮೇರುಶಕ್ತಿ ಬಹಳ ಎತ್ತರವಾದದ್ದು ಎಂದು ಈ ವಿನಮ್ರ ಮಾತುಗಳನ್ನು ಮತ್ತು ನನ್ನ ಆಲೋಚನೆಯನ್ನು ತಮಗೆ ತೆರೆದಿಟ್ಟಿದ್ದೇನೆ.

****

(೪) ಕರ್ನಾಟಕದ ಜನಪದ ಕುಣಿತಗಳ ಹಿನ್ನೋಟ, ಮುನ್ನೋಟಗಳು

ಊರು, ತಂದೆ ತಾಯಿ, ನಮ್ಮೂರ ಶಾಲೆ, ತಾಲ್ಲೂಕು, ಜಿಲ್ಲೆಗಳೊಂದಿಗೆ ಅಲ್ಲಿ ಹುಟ್ಟಿ ಬೆಳೆದ ಪ್ರತಿಯೊಬ್ಬ ವ್ಯಕ್ತಿಗೂ ಅವಿನಾಭಾವ ಸಂಬಂಧಗಳಿರುತ್ತವೆ. ಹಿರಿಯರನ್ನು ನಾವು ಪ್ರಶ್ನಿಸಿದರೆ ಥಟ್ ಅಂತ ಅವರು ತಾವು ಬೆಳೆದ ಊರು, ಶಾಲೆ, ಜಾತ್ರೆ ಹಬ್ಬಗಳ ಬಗ್ಗೆ ಅನೇಕ ಸಂಗತಿ ಸಮಾಚಾರಗಳನ್ನು ನಮ್ಮ ಮುಂದೆ ಇಡುತ್ತಾರೆ. ಈಗ ನಾವು ಹಳ್ಳಿಗಳಿಗೆ ಮಕ್ಕಳನ್ನು ವಿಸಿಟಿಂಗ್‌ಗೆ ಕರೆದೊಯ್ಯುತ್ತಿದ್ದೇವೆ ಅನ್ನುವ ರೀತಿಯಾಗಿದೆ. ಹಿಂದೆಲ್ಲಾ ನಮ್ಮೂರ ಜಾತ್ರೆ, ಹಬ್ಬಗಳು ಎಂದರೆ ನಮಗೊಂದು ಸಂಭ್ರಮ. ಊರ ಹಬ್ಬಕ್ಕೆ ಸಿದ್ಧತೆ

ನಡೆಸುತ್ತಿದ್ದುದ್ದು ಇಂದಿಗೂ ನೆನಪಿದೆ. ಊರ ಯಜಮಾನರು ಕುಳಿತು ನ್ಯಾಯಮಾಡಿ ಹಬ್ಬ ಜಾತ್ರೆಗಳನ್ನು ಹೇಗೆ ಮಾಡಬೇಕು ಎಂಬ ಚರ್ಚೆ ನಡೆಸುತ್ತಿದ್ದರು. ಅದೇ ರೀತಿ ನಮ್ಮ ಜನಪದ ಕುಣಿತಗಳ ಬಗ್ಗೆಯಂತೂ ಹೇಳತೀರದು. ಜಾನಪದ ಎಂದಾಕ್ಷಣ, ನಮ್ಮೂರಿನ ಕುಣಿತಗಳು, ತಮಟೆ ಢಮರುಗವೆ ನಮ್ಮ ಕಣ್ಣ ಮುಂದೆ ನಿಂತು ಬಿಡುತ್ತವೆ. ನಮ್ಮೂರಿನ ಕುಳ್ಳಪ್ಪ ತಮಟೆ ನುಡಿಸುತ್ತಿದ್ದುದ್ದು, ನಮ್ಮೂರ ಹುಲಿವೇಷ, ನಾಟಕ, ಭಜನೆ, ಈಗಲೂ ಮರೆಯದ ನೆನಪುಗಳಾಗಿ, ಮರೆಯಲಾಗದ ರಾತ್ರಿಗಳಾಗಿ ನಮ್ಮನ್ನು ಕಾಡುತ್ತವೆ. ಅದೇ ರೀತಿ ಕರ್ನಾಟಕದ ಯಾವುದೇ ಗ್ರಾಮಗಳಲ್ಲಿ ಅದೆಷ್ಟು ಗ್ರಾಮ ದೇವತೆ, ಹಬ್ಬ, ಜಾತ್ರೆ, ಆಚರಣೆ ಜೊತೆಗೆ ಜನಪದ ಹಾಡು ಕುಣಿತಗಳಿವೆಯೋ ಲೆಕ್ಕವೆ ಇಲ್ಲ. "ಊರಿಗೊಂದು ದೇವರು, ಮನೆಗೊಬ್ಬ ಜನಪದ ಕಲಾವಿದ" ಎಂಬ ಗಾದೆಯೇ ಜನಪದರಲ್ಲಿ ಇದೆ. ಮಾನವರು ಅನೇಕ ಕುಣಿತಗಳನ್ನು ಸೃಷ್ಟಿಸಿಕೊಂಡವರು. ಜಾತಿ ಭೇದವಿಲ್ಲದೆ ಹಿಂದೂ ಮುಸ್ಲಿಮರೆನ್ನದೆ, ಹಾಡಿ ಕುಣಿದಿರುವುದಕ್ಕೆ ರಿವಾಯಿತ್ ಹಾಡುಗಳೇ ಸಾಕ್ಷಿಯಾಗಿವೆ. ಈ ಜನಪದ ಕಲೆಗಳು ಭಾವೈಕ್ಯತೆಯ ಸಂಕೇತವು ಆಗಿವೆ. ಒಂದೇ ಜನಾಂಗ ಕುಣಿಯುವುದಕ್ಕಿಂತ ಊರು ಕೇರಿಯ ಎಲ್ಲಾ ಜನಾಂಗದವರು ಸೇರಿ ಕುಣಿಯುತ್ತಿದ್ದರು. 'ಜನಪದ ವಾದ್ಯ, ಹಾಡು ಮತ್ತು ಕುಣಿತ'ಗಳು ಹೊಂದಿರುವ ವಿಶಿಷ್ಟತೆಯೇ ಬೇರೆ. ಮುಗ್ಧ ಜನಪದರು ಇವುಗಳನ್ನು ತಮ್ಮ ಸಂತೋಷಕ್ಕೆ ಕಟ್ಟಿಕೊಂಡಂತವು ಈಗ ಜನಪದ ಕುಣಿತ ಕಲೆಗಳಾಗಿ ಪರಿವರ್ತನೆಗೊಂಡಿವೆ. ಇವುಗಳ ವೈಭವ ಇಷ್ಟೆ ಎಂದು ಬಣ್ಣಿಸಲಾಗದು. ಅವುಗಳು ಹೇಗಿದ್ದವು, ಎಷ್ಟಿದ್ದವು ಎಂದು ಪಟ್ಟಿ ಮಾಡಿದರೆ ಲೆಕ್ಕವೇ ಸಿಗದು. ಅವುಗಳಲ್ಲಿ ಕೆಲವು ಮಾತ್ರ ಈಗ ಕಂಡುಬರುತ್ತವೆ. ಈ ಕಲೆಗಳನ್ನು ನಾವು ನೋಡಬೇಕು. ಆಗ ಅವುಗಳ ಸೌಂದರ್ಯ ಕಾಣುತ್ತದೆ. ಜಾನಪದ ಎಂದರೆ ಹಾಡು, ಶಬ್ಧದ ಸಡಗರ. ಈ ಶಬ್ಧ, ಸಡಗರ ರೂಪಗಳು ವೈವಿಧ್ಯಮಯ ಭೂಸ್ವರೂಪದ ಹಿನ್ನಲೆಯ ಜೊತೆಗೆ ಆಯಾ ಜನಾಂಗಗಳನ್ನು ಪ್ರತಿನಿಧಿಸುತ್ತವೆ. ಅಲಾವಿ ಕುಣಿತ, ಅಲಾಯಿ ಹೆಜ್ಜೆ, ಹೆಜ್ಜೆ ಮೇಳ, ಚೌಡಮ್ಮನ ಕುಣಿತ, ವಾಘೆ ಮುರುಳು, ವೇಷಗಾರರು, ಕಟ್ಟು ಕೋಪದ ಕುಣಿತ, ದುಮ್ಮಾಲಿ ಮೇಳ, ಭಜನ್ ಬರೋಡ್, ಪುರುವಂತಿಕೆ, ಮಂಡಲ ಕುಣಿತ, ಕೊಡಗಿನ ಕುಣಿತ, ವಾಲಗತ್ತಾಟ್, ವೀರಭದ್ರ ಕುಣಿತ, ದಪ್‌ಆಟ್, ನಂದಿ ಧ್ವಜ ಕುಣಿತ, ಬಿಲ್ಲಾಟ್, ಜೋಯಿಪಾಟ್, ಕೈಪಲೆ ಆಟ್, ಕೋರ್ತಿ ಆಟ, ಶಿವಮೊಗ್ಗದ ಕುಣಿತಗಳು, ಗೇರ್‌ಕುಳ್ಳ ಕುಣಿತ, ದೊಂಬರ ಕುಣಿತ, ಡೊಳ್ಳು ಕುಣಿತ, ಲಮಾಣಿ ಕುಣಿತ, ಅಂಟಿಕೆ ಪಂಟಿಕೆ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಕಾಡ್ಯ ಕುಣಿತ, ಗೋಪು ಕುಣಿತ, ಹೂವಿನ ಮಕ್ಕಳ ಕುಣಿತ, ಪ್ರೇತ ಕುಣಿತ, ಬೇಡರ ಕುಣಿತ, ಸಿಂಹ ನೃತ್ಯ, ದಕ್ಷಿನ ಕನ್ನಡ ಕುಣಿತಗಳಲ್ಲಿ ಕಂಗಿಲು ಕುಣಿತ, ಕರಂಗೋಲು ಕುಣಿತ, ಕೊರಗರ ಕುಣಿತ, ಜೋಡಿ ವೇಷ, ತುಳಸಿ ಪೂಜೆ ಕುಣಿತ, ಬಾಲೆ ಸಂತು,

ಭೂತಾರಾಧನೆ, ನಾಗಮಂಡಲ, ಪಾಣಾರ ಕುಣಿತ, ಸಂಗ್ರಾಮ ಕುಣಿತ, ಬಯಲು ಸೀಮೆ ಕುಣಿತಗಳಲ್ಲಿ ಅಂಬುಜಯ್ಯನ ಕುಣಿತ, ಒನಕೆ ಕುಣಿತ, ಕಂಬಿ ಕುಣಿತ, ಕನ್ನಡಕಿ ಕುಣಿತ, ಕರಗ ಕುಣಿತ, ಕಾಡೆಮ್ಮೆ ಕುಣಿತ, ಕಾವಟ ಕುಣಿತ, ಕಾಸೆ ಕುಣಿತ, ಕೀಲು ಕುದುರೆ ಕುಣಿತ, ಕೊಡದ ಕುಣಿತ, ಕೋಡಂಗಿ ಕುಣಿತ, ಗಾರುಡಿ ಗೊಂಬೆ ಕುಣಿತ, ಕೋಳಿ ಕುಣಿತ, ಜಂಗೀ ಕುಣಿತ, ದೊಂಬಿದಾಸರ ಕುಣಿತ, ಹಲಗೆ ಕುಣಿತ, ವೀರಗಾಸೆ, ರಂಗದ ಕುಣಿತ, ಗೊರವ ಕುಣಿತ, ಚಿಟ್‌ಮೇಳ, ಕರಪಾಲ ಮೇಳ, ಡೊಳ್ಳು ಕುಣಿತ, ತಾರಗಾಡಿ ಕುಣಿತ, ತೊಂಡಲದೇವರ ಕುಣಿತ, ಪೂಜಾ ಕುಣಿತ, ಪೋಟಿ ವೇಷ, ಬಾಣದೇವರ ಕುಣಿತ, ಭಾಗವಂತಿಕೆ ಮೇಳ, ಮರಗಾಲು ಕುಣಿತ, ಹುಲಿವೇಷದ ಕುಣಿತ, ಪಟದ ಕುಣಿತ, ಪಾಳೆಗಾರರ ಕುಣಿತ, ಸೋಮನ ಕುಣಿತ, ಹಲಗೆ ಕುಣಿತ, ಹುಲಿವೇಷದ ಕುಣಿತ, ಸಂತಾಮ ಕುಣಿತ, ಸಿಂಡೀರಣ್ಣನ ಕುಣಿತ, ಕೀಡಾಂಬರಿ ಕುಣಿತ, ವೀರಮಕ್ಕಳ ಕುಣಿತ, ಆದಿವಾಸಿ ಮಕ್ಕಳ ಕುಣಿತ, ತಾರ್ಲೆ ಕುಣಿತ, ಸೋಲಿಗರ ಕುಣಿತ, ಬೋಳಕಾಟ್, ಆಟಿಕಳಂಜಿ ಕುಣಿತ, ಇರುಳಿಗರ ಕುಣಿತ, ಎರವರ ಕುಣಿತ, ಕೊಂಬಾಟ್, ಕೊರವರ ಕುಣಿತ, ಚೆನ್ನುಕುಣಿತ, ಡಮಾಮಿ ಕುಣಿತ, ಡೋಳಪಾಟ್, ದುಡಿ ಕುಣಿತ, ಪ್ರದರ್ಶನಾತ್ಮಕ ಕಲೆಗಳು, ತಾಲ ಮೇಳ ಕುಣಿತ, ಗಗ್ಗರ, ಗೆಜ್ಜೆ, ಡಂಕಾ, ಗಂಗಳ, ಚರ್ಮವಾದ್ಯಗಳು, ಕಣಿ, ನಗಾರಿ, ದಪ್ಪು, ತಂತಿ, ಚರ್ಮ, ಗಾಳಿ ವಾದ್ಯಗಳ ಮೇಳ, ಹೀಗೆ ಅನೇಕ ಕಲೆಗಳ ಆಗರವಾಗಿ ಕರ್ನಾಟಕವನ್ನು ಕಾಣಬಹುದಾಗಿದೆ. ಇವುಗಳಲ್ಲಿ ಎಷ್ಟೋ ಕುಣಿತಗಳು ಮಾಯವಾಗಿವೆ. ಇಷ್ಟೊಂದು ಕಲೆಗಳು ನಮ್ಮಲ್ಲಿ ಇದ್ದವು ಹಾಗೂ ಈಗಲೂ ಹಲವು ಇವೆ ಎಂಬುದು ಸಂತಸದ ವಿಷಯ.

ಇವೆಲ್ಲಾ ಕುಣಿತಗಳು ಹುಟ್ಟಿದ್ದು, ಮಾನವ ಆದಿಮಾನವನಾಗಿ ಕಾಡು ಗುಹೆಗಳಲ್ಲಿ ಪ್ರಕೃತಿಯ ಮಡಿಲಲ್ಲಿ ಅನೇಕ ಪ್ರಾಣಿ ಪಕ್ಷಿಗಳ ಜೊತೆ ಇದುದ್ದರಿಂದ. ಆ ಪ್ರಾಣಿ ಪಕ್ಷಿಗಳ ಚಟುವಟಿಕೆಗಳನ್ನು ಗಮನಿಸಿ, ಪಕ್ಷಿ ಕೂಗುತ್ತಿದ್ದ ರೀತಿ, ಪ್ರಾಣಿ ಕೂಗುತ್ತಿದ್ದ ರೀತಿ, ನವಿಲು, ಜಿಂಕೆ, ಕುಣಿಯುತ್ತಿದ್ದ ರೀತಿ ನೀತಿಗಳನ್ನು ನೋಡಿ, ಅನೇಕ ರೀತಿಯ ಕುಣಿತ ಈ ಮಾನವನಿಗೆ ಬಂದವು. ಹಳ್ಳಿ, ಗ್ರಾಮ ಎಂದು ಪ್ರಾರಂಭವಾದವೋ, ಪ್ರಕೃತಿ ಆರಾಧನೆ ಕಡಿಮೆ ಮಾಡಿ ಗ್ರಾಮದೇವತೆಗಳ ಆರಾಧನೆಗೆ ತೊಡಗಿದಾಗ ಈ ಕುಣಿತಗಳು ಹುಟ್ಟಿ ಬೆಳೆದವು. ಇವೆಲ್ಲ ಕುಣಿತಗಳು ಗ್ರಾಮದೇವತೆ ಹಬ್ಬ, ಜಾತ್ರೆಗಳಲ್ಲಿ ಬಹಳ ಭಕ್ತಿಯಿಂದ ನಂಬಿಕೆಯಿಂದ ಪ್ರದರ್ಶನವಾಗುತ್ತವೆ. ಕೋಲಾಟದಿಂದ ಗೆಜ್ಜೆ ಮೇಳದಿಂದ ಕಿನ್ನುರಿ ಹಾಡುಗಳಿಂದ, ವೀರಗಾಸೆ, ಡೊಳ್ಳು ಮತ್ತು ಅನೇಕ ಕಗ್ಗದ ಪದಗಳಿಂದ ಜಾತ್ರೆಗಳು ಮೆರೆಯುತ್ತವೆ. ಇವುಗಳ ಸರಳತೆ, ನೈಜತೆ, ಕಲಾವಿದರ ಅನನ್ಯ ನೆನಪಿನ ಶಕ್ತಿ, ಪಾಂಡಿತ್ಯ ಅಮೋಘವಾದುದು. ಇವೆಲ್ಲವೂ ಜನಪದದ ಜೀವನದ ಬದುಕಿನ ಅವಿಭಾಜ್ಯ ಅಂಗವೇ ಆಗಿಬಿಟ್ಟಿದ್ದವು. ನಮ್ಮ ಜನಪದ

ಪರಂಪರೆಯನ್ನು ಸಾರುವ ಸಾಲು ದೀಪಗಳಿದ್ದಂತೆ ಕಲೆಗಳು. ಪ್ರಕೃತಿಯನ್ನು ಪ್ರೀತಿಸುವುದರಲ್ಲಿ ಗ್ರಾಮೀಣ ಜನರಿಗೆ ನೆಮ್ಮದಿ. ನೆಲ, ಮುಗಿಲು, ಮಳೆ, ಬೆಳೆ, ಮರ, ಗಿಡಗಳೆಲ್ಲ ಅವರ ಪಾಲಿಗೆ ದೇವರೆ. ಮಳೆಬಂದರೊಂದು ಹಬ್ಬ, ಬೆಳೆ ಬಂದರೊಂದು ಹಬ್ಬ, ಚಳಿಗಾಲದಲ್ಲೊಂದು ಹಬ್ಬ, ಬೇಸಿಗೆ ಕಾಲದಲ್ಲೊಂದು ಹಬ್ಬ. ಹಬ್ಬಗಳು ಜನಪದ ಬದುಕಿನ ಪ್ರಮುಖ ಅಂಶಗಳು. ತಾವೇ ಉಂಡುಟ್ಟು ಬೆಳೆಯುವುದು ಮುಖ್ಯವಲ್ಲ. ನೆರೆಹೊರೆಯವರೆಲ್ಲರೂ ಸಾಮಾಜಿಕವಾಗಿ ಸೇರಿ ಹಬ್ಬ ಹರಿದಿನ ಆಚರಿಸುವುದರಿಂದ ಒಂದು ಐಕ್ಯತೆ, ಸಾಮರಸ್ಯ ಮತ್ತು ಬಾಂಧವ್ಯಗಳ ಬೆಸುಗೆಯನ್ನು ಭದ್ರಪಡಿಸುತ್ತವೆ. ಅಹಂಕಾರ, ಮತ್ಸರ, ಸೇಡು, ದೂರವಿಟ್ಟು ಪ್ರೀತಿಯ ಬದುಕನ್ನು ಇಲ್ಲಿ ಕಾಣಬಹುದಾಗಿದೆ.

ಅದಕ್ಕಾಗಿಯೇ ಜನಪದ ಕಲೆಗಳು "ನಮ್ಮ ಪರಂಪರೆ ಸಾರುವ ಸಾಲು ದೀಪಗಳು". ಫಿನ್‌ಲ್ಯಾಂಡಿನ ಪ್ರಸಿದ್ಧ ಜನಪದ ವಿದ್ವಾಂಸರಾದ ಲಾರಿ ಹ್ಯಾಂಕೊ, ಭೌತಿಕ ನಿರೂಪಣೆ, ಕ್ರಿಯಾತ್ಮಕ ನಿರೂಪಣೆ ಮುಂತಾದವನ್ನು ಚರ್ಚಿಸುತ್ತಲೆ ವೈಜ್ಞಾನಿಕ ವಿಧಾನದ ಕುರಿತು, ಪ್ರಸ್ತಾಪಿಸುತ್ತಾ ಇಲ್ಲಿ ವಸ್ತು ಬೇರೆ ಅಲ್ಲ, ವ್ಯಕ್ತಿ ಬೇರೆ ಅಲ್ಲ. ಬೇರೆ ಬೇರೆ ಘಟನೆ, ಅನುಭವಗಳು ಸಮುದಾಯದಲ್ಲಿವೆ. ಕಲಾವಿದ ಮೌಖಿಕವಾಗಿ ಸಾಹಿತ್ಯವನ್ನು ಪುನರ್‌ಸೃಷ್ಟಿಸಿ ಕಟ್ಟುತ್ತಾನೆ ಎನ್ನುತ್ತಾರೆ. ಜನಪದ ಪರಂಪರೆ ಮತ್ತು ಆಧುನಿಕತೆ ಮುಖಾಮುಖಿಯಾಗುವಾಗ ಇವೆಲ್ಲವೂ ನಡೆಯುತ್ತಿರುತ್ತವೆ. ಇಂತಹ ಕಲೆಗಳು ಅಂದಿನ ಸಮಾಜದ ಸಂದರ್ಭದಲ್ಲಿ ಜನಿಸಿದಂತಹವು. ಇವುಗಳನ್ನು ಇವತ್ತಿನ ಆಧುನಿಕ ಜಗತ್ತಿಗೆ ಪ್ರದರ್ಶಿಸುವುದು ಹೇಗೆ? ಕಲಿಸುವುದು ಹೇಗೆ? ಉಳಿಸುವು ಹೇಗೆ? ಎಂಬ ದೊಡ್ಡ ಪ್ರಶ್ನೆ ನಮ್ಮ–ನಿಮ್ಮ ಮುಂದಿದೆ. ಶಿಕ್ಷಣ ಪಡೆದಷ್ಟು ಜನರು ಆಧುನಿಕತೆಯ ಆಶ್ರಯಕ್ಕೆ ಅಂಟಿಕೊಳ್ಳುತ್ತಾರೆ. ಇದು ಸಹಜ ಕೂಡ. ಇಂತಹ ಸಮಯದಲ್ಲಿ ನಮ್ಮ ಕಲೆಗಳನ್ನು ಅವರ ಮನಸ್ಸಿಗೆ ಬಿತ್ತುವುದು, ಬೆಳೆಸುವುದನ್ನು ನಾವು ಮಾಡಬೇಕಾಗಿದೆ ಇದಕ್ಕಿಂತಲೂ ಯುವ ಜನಾಂಗವನ್ನು ಒಂದಿಷ್ಟು ಪ್ರೇರೇಪಿಸುವ ಕೆಲಸ ಮಾಡಿಬೇಕು. ಅದು ಕಲೆಯನ್ನು ಪ್ರೀತಿಸುವ ಗೌರವಿಸುವಂತೆ ಅವರ ಮನಸ್ಸುಗಳನ್ನು ಹೊರಳಿಸುತ್ತದೆ. ಅದಕ್ಕೆ ಸರಿಯಾಗಿ ಜಾನಪದದ ತಿಳುವಳಿಕೆ ಇರುವವರನ್ನು ಸಮಿತಿ ಮಾಡಿ ಜಿಲ್ಲೆಗೊಬ್ಬರಂತೆ ಸಂಚಾಲಕರನ್ನು ಮಾಡಿ ಆಯಾ ಜಿಲ್ಲೆಗಳಲ್ಲಿರುವ ಸುಂದರ ಕಲೆಗಳನ್ನು ಆಯಾ ಪ್ರಾದೇಶಿಕ ದೇಶ ಭಾಷೆಗಳ ಮೂಲಕ ಯುವ ಪೀಳಿಗೆಗೆ ತರಬೇತಿ ಕೊಡಿಸಬೇಕು. ಕಲೆಗಳನ್ನು ಈ ನೆಲದ ಮೂಲ ಸಂಸ್ಕೃತಿ ಎಂದು ತಿಳಿಸುತ್ತಲೇ ಅವುಗಳನ್ನು ಉಳಿಸಿ ಬೆಳೆಸುವ ಕಾರ್ಯವಾಗಬೇಕಾಗಿದೆ.

****

(೫) ನೆನೆಸೀದರ್‍ಯಾಂಗ್ಡ ದೊರೆತಾವು, ಹಾಡೆಂದರ್‍ಯಾಂಗ್ಡ ಹಾಡ್ಯಾವು

ಅಚ್ಚಳಿಯದ ಕಲೆಗಳಿದ್ದರೆ, ಅವು ಎದೆಯೊಳಗೇ ಹಬ್ಬಿರುವ ರಸಬಳ್ಳಿಯಂತಹ, ಮರೆಯಲಾರದ ಪದಗಳು. ಅವು ನಮ್ಮ ನಾಲಿಗೆ ಮೇಲೆ ಬೆಳೆದಿರುವ ಜನಪದ ಹಾಡುಗಳು. ಜ್ಞಾಪಿಸಿಕೊಂಡರೆ ಸಾಕು, ಹೆಣ್ಣು ಮಕ್ಕಳಿಗೆ ಹೇಗೆ ತೌರಿನ ಹಂಬಲ ತಟ್ ಅಂತ ಬರುತ್ತದೋ ಅದೇ ರೀತಿ ಎದೆಯೊಳಗಿರುವ ಜಾನಪದ ತಟ್ಟನೆ ನಾಲಿಗೆಗೆ ಬಂದೇ ಬಿಡುತ್ತವೆ. ಹಾಗೇ ಜಳಜಳನೆ ಬರುತ್ತಿದ್ದ ಹಾಡುಗಳು ಈಗ ನೆನೆಸೀದರ್‍ಯಾಂಗ್ಡ ದೊರೆತಾವೂ ಹಾಡಂದರ್‍ಯಾಂಗ್ಡ ಹಾಡ್ಯಾವು ಎಂಬ ತ್ರಿಶಂಕು ಸಂಸ್ಕೃತಿಯ, ತ್ರಿಶಂಕು ಬದುಕಿನ, ತ್ರಿಶಂಕು ಸ್ಥಿತಿಯಲ್ಲಿದ್ದೇವೆ. ಈ ಸಿನಿಮಾ ಮಾಯಾಲೋಕದ ಕೃತಕ ಆಡಂಬರದ ಸಂಸ್ಕೃತಿಯ ಮುಂದೆ ನಮ್ಮ ಬದುಕಿನ ಸತ್ಯವಾದ ಜಾನಪದವನ್ನು ಯಾರು ಕೇಳುತ್ತಾರೆ? ಎನ್ನುತ್ತಾರೆ ನಮ್ಮ ಜನಪದ ಕಲಾವಿದರು. ನಮ್ಮೆದುರಿಗೆ ಜಾನಪದ ಕೊರಗುತ್ತಾ ನಿಂತಿದೆ. ಮೆರವಣಿಗೆಯಲ್ಲಿ ಕಾಣುವ ಜನಪದ ಕುಣಿತಗಳು ಮಾತ್ರವೇ ನಮ್ಮ ಮುಂದೆ ಉಳಿದಿವೆ. ನಮ್ಮ ಮೂಲ ನಿವಾಸಿಗಳು ಕಂಡುಂಡ ಅನೇಕ ಸಂಪ್ರದಾಯ, ಆಚರಣೆ, ನಂಬಿಕೆಗಳು ನಮಗೆ ಪ್ರಸ್ತುತವೆನಿಸಿಬಿಡುತ್ತವೆ. ಇವತ್ತಿನ ಆಧುನಿಕತೆ ಅನೇಕ ಶತಮಾನಗಳಿಂದ ಹುಟ್ಟಿ ಬೆಳೆದುಬಂದ ಜಾನಪದದ ಮೂಲ ಕಾಂಡವನ್ನೆ ಕಿತ್ತು ಬಿಸಾಕುವಂತ ಸ್ಥಿತಿಗೆ ತಲುಪಿದೆ. ಅರ್ಚಕರಂಗಸ್ವಾಮಿ, ಮಧುರಚೆನ್ನ, ಮುದೇನೂರು ಸಂಗಣ್ಣ, ಕ.ರಾ.ಕೃ. ಜಿ.ಶಂ.ಪರಮಶಿವಯ್ಯ, ಹೆಚ್.ಎಲ್.ನಾಗೇಗೌಡ, ಲತ್ಥೆ, ಗದ್ದಿಗಿಮಠ, ಚಂದ್ರಶೇಖರ ಕಂಬಾರಂತಹ ಹಲವಾರು ಜನಪದ ಸಂಗ್ರಹಕಾರರ ಆಶಯಗಳನ್ನು ಕುಗ್ಗುವ ಹಾಗೆ ಮಾಡಿದ್ದೇವೇನೊ ಅನ್ನಿಸುತ್ತಿದೆ.

ಕೇವಲ ನಮ್ಮ ಬದುಕಿಗೆ, ನಮ್ಮ ಸಂತೋಷಕ್ಕೆ, ನಮ್ಮ ಈ ಆಡಂಬರದ ಜೀವನಕ್ಕೆಂದು, ನಮ್ಮ ಪರಂಪರೆಯ ಜೀವಾತ್ಮವೆನಿಸಿದ ಜಾನಪದವನ್ನು ಬಹಳ ಕೇವಲವಾಗಿ ಕಾಣುತ್ತಿದ್ದೇವೆ. ಇವತ್ತಿನ ಮಕ್ಕಳು ಕ್ಷಣಿಕ ಜೀವನಕ್ಕಾಗಿ ತಮ್ಮ ತಂದೆ ತಾಯಂದಿರನ್ನು ವೃದ್ಧಾಶ್ರಮಕ್ಕೆ ತಳ್ಳುತ್ತಾರೆ. ಅದೇ ರೀತಿ ನಮ್ಮ ಮನೆಯ ನಮ್ಮೂರಿನ ಕಲೆಗಳನ್ನೆಲ್ಲಾ ತಳ್ಳಿ ಮೂಲೆ ಗುಂಪು ಮಾಡುತ್ತಿದ್ದೇವೆ. ಕ್ಷಣಿಕ ಸುಖಕ್ಕಾಗಿ ಪಾಶ್ಚಿಮಾತ್ಯದ ಕಲಬೆರೆಕೆಯ ಸಂಸ್ಕೃತಿ, ನಂಬಿಕೆ, ಪ್ರೀತಿ ಸಂಬಂಧಗಳನ್ನು ಯಂತ್ರದ ರೀತಿ ಮಾಡಿಕೊಂಡಿದ್ದೇವೆ. ನಮ್ಮ ಆಲೋಚನೆಯ ರೀತಿಯು ಅದೇ. ನಮ್ಮ ಜನಪದರು ಯಾರ ಆಶ್ರಯದಲ್ಲೂ ಬೆಳೆದವರಲ್ಲ. ಯಾರ ಹಂಗೂ ಇಲ್ಲದೆ ಬೆಳೆದವರು. ಶಿಷ್ಟ ಸಂಗೀತ ಜನಪದ ಸಂಗೀತದ ಅನನ್ಯ ಫಲ ಎಂಬುದನ್ನು ಎಂದೂ ಯಾರೂ ಮರೆಯಬಾರದು. ಮನುಷ್ಯನು ಭಾಷೆ ಹುಟ್ಟಿಸಿಕೊಳ್ಳುವ ಮೊದಲು ಸಂಜ್ಞೆಯಿಂದಲೇ ಬದುಕಿದವನು. ಶರಣರು ಕೂಡ ಸರಳ ಭಾಷೆಯ ಜನವಾಣಿಯ ನೆಲೆಯಲ್ಲಿ ವಚನ ನಿರ್ಮಾಣ ಮಾಡಿದರು. "ಮುಗಿದಾವು ನಮ್ಮ ಜ್ವಾಳ ಉಳಿದಾವು ನಮ್ಮ ಹಾಡು" ಎಂಬ ಅನನ್ಯ ಜನಪದ ತ್ರಿಪದಿಯೇ ಹೇಳುವ ಹಾಗೆ, ಈಗ ಉಳಿದಿರುವ

ಕೆಲವೇ ಕೆಲವು, ಜನಪದ ಸಂಪತ್ತನ್ನು ಉಳಿಸಿಕೊಳ್ಳುವುದಕ್ಕೆ ನಾವು ನೀವೆಲ್ಲ ಶ್ರಮಿಸಿಬೇಕಾಗಿದೆ. ಈ ಕಲೆಗಳನ್ನು ಉಳಿಸುವ ಪ್ರಯತ್ನಕ್ಕೆ ಜನಪದ ಶ್ರೀಮಂತಿಕೆ ಅರಿತಿರುವಂತಹ ರಾಜಕೀಯ ವ್ಯಕ್ತಿಗಳು ಬೇಕಾಗಿದ್ದಾರೆ. ಅವರ ಒಂದು ಪ್ರೋತ್ಸಾಹವೇ ಸರ್ಕಾರದ ಪ್ರೋತ್ಸಾಹ. ಯಾವುದೇ ಸರ್ಕಾರವಿರಲಿ ನಮ್ಮ ಗ್ರಾಮ ಸಂಪತ್ತಾದ ಜಾನಪದವನ್ನು ಉಳಿಸುವಷ್ಟು ಮನಸ್ಸು ನಮ್ಮ ರಾಜಕಾರಣಿಗಳಿಗೆ ಬರಲಿ. ಅವರು ಎಷ್ಟು ಪ್ರೋತ್ಸಾಹ ಕೊಟ್ಟು ಈ ಕಲೆಯನ್ನು ಬೆಳೆಸುವುದಕ್ಕೆ ಮನಸ್ಸು ಮಾಡುತ್ತಾರೊ ಅಂತಹ ವ್ಯಕ್ತಿಗಳೇ ನಮ್ಮ ಜನಪದ ಚರಿತ್ರೆ ಉಳಿಸಲು ಬೆಳೆಸಲು ಸಾಧ್ಯವಾಗುತ್ತದೆ.

ಯಾವ ಬುದ್ಧಿ ಜೀವಿಗಳಿಂದಲೂ ಜಾನಪದ ಬೆಳೆಯುವುದಿಲ್ಲ. ಜನಪದ ಕಲಾವಿದರೇ ಜನಪದ ಉಳಿಸುವುದು ಬೆಳೆಸುವುದು. ನಮ್ಮ ಜನಪದ ಹಾಡು, ಕಲೆಗಳು ಬೆಳೆಯಬೇಕು. ಅಂದು ನಮ್ಮ ಮುಗ್ಧ ಜನ ಹಾಡಿದರು, ಕುಣಿದರು, ಬಡಿದರು, ಅವರೆಲ್ಲ ಹಾಗೆ ಕಣ್ಮರೆಯಾದರು. ಆದರೆ, ಜಾನಪದವನ್ನು ಮಾತ್ರ ಬಿಟ್ಟು ಹೋದರು. ಅದೇ ರೀತಿ, ಮೊದಲು ಜನಪದ ಗೀತೆಗಳನ್ನು ಜನಕ್ಕೆ ಮುಟ್ಟಿಸಬೇಕೆಂಬ ಆಶಯದಿಂದ, ಕಾಳಿಂಗರಾಯರು, ಬಾಳಪ್ಪ ಹುಕ್ಕೇರಿಯಂತವರು, ಜನಮೆಚ್ಚುವಂತೆ ಜನಪದ ಗೀತೆಗಳನ್ನು ಹಾಡಿದರು. ನಾವೂ ಇಂದು ಜನರು ಮೆಚ್ಚುವ ಹಾಗೆ ಹಾಡುಗಳನ್ನು ಹಾಡಬೇಕಾಗಿದೆ. ನಮ್ಮ ಅನೇಕ ಕಲೆಗಳನ್ನು ಪ್ರದರ್ಶಿಸಿಬೇಕಾಗಿದೆ.

ನೊರೆ ಹಾಲ ಕುಡಿಸಿದ್ದೆ ಸಕ್ರೀಯ ತಿನಿಸಿದ್ದೆ
ಬೆಳದಿಂಗಳಿಗು ಸೆರಗ–ವಾರಿ ಮಾಡಿದ್ದೆ,
ಈಗೆಂಥ ದುಃಖ ಹಡೆದವ್ವ

ಜನ್ಮ ಕೊಟ್ಟ ತಾಯಿ ಮಗುವನ್ನು ಎಷ್ಟು ಪ್ರೀತಿ ಪ್ರೇಮದಿಂದ, ಬೆಳೆಸುತ್ತಾಳೆ ಎಂಬುದನ್ನು ಹೇಳುವ ಮಾತುಗಳನ್ನು ಈ ತ್ರಿಪದಿಗಳಲ್ಲಿ ಕಾಣಬಹುದು. ನಿನಗೆ ಬಿಸಿಬಿಸಿ ಹಾಲು ಕುಡಿಸಿದ್ದೆ, ಸಕ್ಕರೆ ಸವಿ ಸವಿದಿದ್ದೆ, ನಿನಗೆ ತೆಂಗಿನ ಎಳನೀರಿನಿಂದ ಸ್ನಾನ ಮಾಡಿಸಿದ್ದೆ, ನೀನು ಕಪ್ಪಾಗುತ್ತೀಯ ಎಂದು ಬೆಳದಿಂಗಳ ಬೆಳಕಿಗೆ ನನ್ನ ಸೆರಗು ಮರೆ ಮಾಡಿದ್ದೆ. ನಿನ್ನನ್ನು ಸಾಕಿದ್ದೆ ಸಲುವಿದ್ದೆ ಎನ್ನುತ್ತಾಳೆ ಹೆತ್ತ ತಾಯಿ. ಅದಕ್ಕೆ ನಾವು ತಾಯಿತನ ಎನ್ನುವುದು.

ಅದೇ ರೀತಿಯಲ್ಲಿ ಜಾನಪದವೂ ಬೆಳೆದಿತ್ತು. ನಮ್ಮ ಹಿಂದಿನ ಕಲಾವಿದರು ಅದೇ ರೀತಿ ಪೋಷಿಸಿಕೊಂಡು ಹಾಡಿಕೊಂಡು, ಜನಪದ ಕಲೆಗಳನ್ನು ಹಬ್ಬ, ಜಾತ್ರೆ, ಸಂದರ್ಭಗಳಲ್ಲಿ ಪ್ರದರ್ಶಿಸಿಕೊಂಡು ಬಹಳ ನಿಷ್ಠೆಯಿಂದ ಸ್ವಚ್ಛಂದವಾಗಿ ಉಳಿಸಿ ನಮ್ಮ ಕೈಗೆ ಕೊಟ್ಟರು. ಅದನ್ನು ನಾವು, ಬಹಳ ಲಘುವಾಗಿ ತೆಗೆದುಕೊಂಡಿದ್ದೇವೆ. ಇದು, ನಮ್ಮದಲ್ಲ, ಕೆಳವರ್ಗದವರ ಫಲ. ಅವರು ಮಾತ್ರ ಉಳಿಸಿಕೊಳ್ಳಲಿ, ಎಂಬ ಭಾವನೆಯು ಬಂದು, ಅನೇಕ ಕಲೆಗಳನ್ನು ವೃದ್ಧಿಸಿಕೊಳ್ಳಲಾಗದೆ, ಆರ್ಥಿಕ ಸಮಸ್ಯೆಯಿಂದ ಅನೇಕ ತೊಂದರೆಗಳನ್ನು ಎದುರಿಸಲಾಗದೆ ಕಲೆಯನ್ನು ಕಲಾವಿದರು ಕೈ ಬಿಟ್ಟಿದ್ದಾರೆ

ಎನ್ನುವುದು ಅಕ್ಷರಶಃ ಒಪ್ಪಬೇಕಾದ್ದೆ. ಈಗ ಒಂದಿಷ್ಟು ಜನ ಅದನ್ನು ಕಲೆಯಾಗಿ ನೋಡದೆ ಬಂಡವಾಳವಾಗಿ ಕಾಣುತ್ತಾ, ಅಷ್ಟೋ ಇಷ್ಟೋ, ಕಲಿತು ಅದುವೇ ಬಹಳ ದೊಡ್ಡದು ಎಂದು ನಗರ ಜನಕ್ಕೆ ಮೋಡಿ ಮಾಡುತ್ತಾ, ಕುಣಿಯುತ್ತಾ ಬದುಕುತ್ತಿದ್ದಾರೆ.

ಹುಣಿಸೀ ಎಲೆಗಳು ಎಣಿಸಿ ನೋಡಿದರೇನ
ಮನಸೀನ ಹೆಣ್ಣು ಕೈ ಮೀರಿ– ಹೋದರ
ನೆನೆಸಿದರ‍್ಯಾಂಗ ದೊರೆತಾಳ,

ಮನದೊಳಗಿರುವ ಹೆಣ್ಣನ್ನು ತಂದು ಬಾಳಿಸುವುದು ಬಿಟ್ಟು, ಮನಸ್ಸಿರದ, ಪ್ರೀತಿ ಇರದ ಹೆಣ್ಣನ್ನು ತಂದು ಸುಖ ಸಿಕ್ಕಿಲ್ಲ ಎಂಬುದರಲ್ಲಿ ಅರ್ಥವಿಲ್ಲ ಎನ್ನುತ್ತದೆ ಈ ಮೇಲಿನ ತ್ರಿಪದಿ. ಕಲಾವಿದರ ಅಭಿವೃದ್ಧಿಗೆ, ಕಲಾ ಪರಿಕರ ತೆಗೆದುಕೊಳ್ಳುವಂತೆ ವ್ಯವಸ್ಥೆ ಮಾಡಿ, ಆಯಾ ಜಿಲ್ಲಾ ಘಟಕಗಳಲ್ಲಿ ಆಯಾ ಪ್ರಾದೇಶಿಕ ಕಲೆಗಳನ್ನು ಕಲಿಯುವಂತೆ ಯುವ ಪೀಳಿಗೆಯನ್ನು ತಯಾರು ಮಾಡಬೇಕಾಗಿರುವುದು ಸರ್ಕಾರದ ಮುಖ್ಯ ಕೆಲಸವಾಗಿದೆ. ಅಂದರೆ ಇದು ಸಂಸ್ಕೃತಿ ಇಲಾಖೆಯ ಪ್ರಮುಖ ಜವಾಬ್ದಾರಿ. "ನೆನೆಸಿದರ‍್ಯಂಗ್ಧ ದೊರೆತಾವು, ಹಾಡಿದರ‍್ಯಾಂಗ್ಧ ಹಾಡ್ಯಾವು ಕುಣಿ ಎಂದರ‍್ಯಾಂಗ ಕುಣಿದಾವು?." ನಾವು ಅದನ್ನು ಇವತ್ತಿನ ಪೀಳಿಗೆಗೆ ಹೇಳಬೇಕು. ನಮ್ಮ ಪ್ರದರ್ಶನ ಕಲೆಗಳನ್ನು ಕುಣಿದು, ಕಲಿಸಬೇಕು, ಬಡಿಹಾಂದರ‍್ಯಾಂಗ ಬಡಿದಾರು? ವಿವಿಧ ಪ್ರಕಾರದ ಪ್ರದರ್ಶನ ಕಲೆಗಳನ್ನು (ತಮಟೆ, ದಪ್ಪು ದಟ್ಟಿ ಮೇಳ, ಡೊಳ್ಳು, ಕಂಸಾಳೆ ಜಗ್ಗಲಿಗೆ) ಬಡಿದು ಕುಣಿದು ತೋರಿಸಬೇಕಾಗಿದೆ. ' ನಲಿ–ಕಲಿ' ಯೋಜನೆಯಂತೆ ನಾವು ಜನಪದ ಕಲಿಕಾ ಆಂದೋಲನವನ್ನೇ ಮಾಡಬೇಕಾಗಿದೆ. ಈಗ ಚರ್ಮವಾದ್ಯ ಹೋಗಿ ಪ್ಲಾಸ್ಟಿಕ್ ವಾದ್ಯಗಳು ಬಂದುಬಿಟ್ಟಿವೆ. ಅವುಗಳಲ್ಲಿ ಮಾಧುರ್ಯವೇ ಇಲ್ಲ. ಆಕರ್ಷಣೆಯೂ ಇಲ್ಲ. ವಿಭಿನ್ನವಾಗಿ, ನುಡಿಸಲು ಸಾಧ್ಯವಿಲ್ಲದ ಸ್ಥಿತಿಗೆ ಎಲ್ಲಾ ಹಳ್ಳಿಗಳಲ್ಲೂ ಜಾನಪದ ಬಂದು ಬಿಟ್ಟಿದೆ. ಎಲ್ಲಕ್ಕಿಂತ ಈ ಕಲೆಗಳನ್ನು ಯುವ ಪೀಳಿಗೆಗೆ ಕಲಿಸುವ ಜೊತೆಗೆ ಕಲೆಗಳ ಪ್ರದರ್ಶನದಿಂದ ಯುವಕರಿಗೆ ಉದ್ಯೋಗ ಅವಕಾಶವಾಗುವ ನಿಟ್ಟಿನಲ್ಲಿ ಜನಪದ ಕಲೆ ಬೆಳೆಸುವ ಕಾರ್ಯಚರಣೆಯಲ್ಲಿ ನಾವೆಲ್ಲ ದುಡಿಯಬೇಕಾಗಿದೆ. ಇದಕ್ಕೆಲ್ಲಾ ಸಂಸ್ಕೃತಿ ಇಲಾಖೆಯೇ ಹೊಣೆ. ಇವುಗಳ ಅಭಿವೃದ್ಧಿಗೂ ಸಂಸ್ಕೃತಿ ಇಲಾಖೆಯೇ ಹೊಣೆ. ಕಾರಣ ಸಂಸ್ಕೃತಿಯ ಉಳಿವಿಗೆ ಈ ಇಲಾಖೆಯೇ ಇರುವುದರಿಂದ ಅದೇ ಎಲ್ಲವನ್ನು ನಿರ್ಧರಿಸಬೇಕಾಗಿದೆ. ನೆನೆಸೀದಾರ‍್ಯಾಂಗ್ಧ ದೊರೆತಾವು, ಹಾಡಂದರ‍್ಯಾಂಗ್ಧ ಹಾಡ್ಯಾವು. ನಾವು ಹಾಡಬೇಕಾಗಿದೆ, ಕಲಿಸಬೇಕಾಗಿದೆ. ಈ ಕನ್ನಡ ನಾಡಿನ ಜಾನಪದ ಸಹಸ್ರಾರು ವರ್ಷ ಉಳಿಯುವ ರೀತಿ ಮಾಡಬೇಕಾಗಿದೆ.

****

(೬) "ಊರಿಗೊಂದು ಗುಡಿ ಮನೆಗೊಬ್ಬ ಜನಪದ ಕಲಾವಿದ"

ಅಲಂಕಾರ, ಛಂದಸ್ಸು ಗೊತ್ತಿಲ್ಲದೆ ಕೇವಲ ತಮ್ಮ ಕಂಠದಿಂದ ಜಾನಪದವನ್ನು ಝೇಂಕರಿಸಿದವರು ಜನಪದರು. ಮೂರು ಸಾಲಿನ ತ್ರಿಪದಿ, ನೂರು ಸಾಲಿನ ಅರ್ಥವನ್ನು ಹೇಳುವಷ್ಟು ವಿಚಾರಗಳನ್ನು ಹೊಂದಿದೆ. ಶಾಲೆಯ ಮೆಟ್ಟಿಲನ್ನೇ ಹತ್ತದ ನಮ್ಮ ಹಳ್ಳಿಗರು ಅಕ್ಷರ ನಮಗಿಲ್ಲ ಅಂತರಂಗದಿಂದ ಬಂದಿರುವ ಈ ಜಾನಪದ ಕಲೆ ಮಾತ್ರ ನಮ್ಮೊಂದಿಗಿದೆ ಎಂದು ಸಂತೋಷದಿಂದ ಹೇಳುವುದುಂಟು. ಗ್ರಾಮೀಣ ಬದುಕಿನ ಲೋಕವೆ ಜಾನಪದ ಲೋಕ. ಗ್ರಾಮ್ಯ ಜನರ ಲೋಕದೊಳಗೆ ಬದುಕಿನ ಎಲ್ಲಾ ರೀತಿ–ನೀತಿ ರಿವಾಜುಗಳನ್ನು ನಾವು ಕಾಣಬಹುದು. ಅಡಿಗೆಯಿಂದ ಪ್ರಾರಂಭವಾದರೆ ಔಷಧಿಯವರೆಗೂ ಹಲವಾರು ನಂಬಿಕೆ ಸಂಪ್ರದಾಯಗಳೇ ಸಂಪತ್ತೆಂದು ನೆಚ್ಚಿ "ಈ ಮಾನವ ಜನ್ಮ ಬಲು ದೊಡ್ಡದು" ಎಂದು ನಂಬಿ ತೋರಿಸಿದವರು ನಮ್ಮ ಗ್ರಾಮ್ಯರು. ಹೊತ್ತು ಮೂಡಿದಲ್ಲಿಂದ ಹೊತ್ತು ಕರಗಿ ಸೇರುವವರೆಗೆ ಒಂದಲ್ಲ ಒಂದು ಬೆಡಗುಗೊಳಿಸುವ ರೀತಿಯಲ್ಲಿ ಜಾನಪದದ ಸೃಷ್ಟಿ ನಡೆದಿದೆ. ತಮ್ಮ ಬದುಕು ಬವಣೆಯನ್ನೆಲ್ಲ ಅತ್ತೆ ಮಾವನಿಗೆ ಹಾಗೂ ತನ್ನ ಗಂಡನಿಗೂ ಹೇಳಲು ಸಾಧ್ಯವಿಲ್ಲದ ಸಂದರ್ಭದಲ್ಲಿ ತಮ್ಮ ಹಾಡು, ಒಗಟು, ಗಾದೆ, ಕಥೆಗಳ ಮುಖಾಂತರ ಹೊರ ಹಾಕಿ ಮನಶಾಂತಿ ಪಡೆದುಕೊಂಡಿದ್ದಾರೆ. ಬೀಸುವ ಪದದಿಂದ ಪ್ರಾರಂಭವಾಗಿ ರಂಗೋಲಿ ಹಾಕುವಾಗ, ಭತ್ತು ಕಟ್ಟುವಾಗ, ಅಡಿಕೆ ಬಿಡಿಸುವಾಗ, ಗೌರಿ ಪೂಜಿಸುವಾಗ, ಮಗು ಆಡಿಸುವಾಗ, ಹತ್ತಿ ಬಿಡಿಸುವಾಗ, ನಾಟಿ ಹಾಕುವಾಗ, ಜಾತ್ರೆ ಸಂದರ್ಭಗಳಲ್ಲಿ ಮಿತಿಯಿಲ್ಲದೆ ಹಾಡುಗಳನ್ನು ಹೆಣೆದಿದ್ದಾರೆ.

"ನಾಡಿನ ಜನಗಳು ಹಳ್ಳಿಮುಕ್ಕರು ಎಂದು
ಹಾಡಿ ನಗುವ ಜಾಣ ನೀಕೇಳೋ"

ಎಂದು ತಮ್ಮನ್ನು ತಾವು ಸಮರ್ಥಿಸಿಕೊಳ್ಳುತ್ತಾರೆ.

ಜಾನಪದ ಕಲಿಕೆಯ ವಿಧಿ ವಿಧಾನಗಳು ಹೇಗೆ?

- ಜಾನಪದದ ಕುಲ ಕಸಬುಗಳು
- ಯಂತ್ರ–ಮಂತ್ರ ಗಳ ಜಾನಪದ ಅಧ್ಯಯನ.
- ಕೃಷಿ ಜಾನಪದ ಮತ್ತು ಅರಣ್ಯ ಜಾನಪದ
- ಪಕ್ಷಿ ಪ್ರಾಣಿ ಜಾನಪದ.
- ಡೊಂಬರು–ಕೋಲೆ ಬಸವರು, ಬುಡುಬುಡುಕೆಯವರ ಜಾನಪದ.
- ಜಾನಪದ ಆಟಗಳ ಕುರಿತ ಅಧ್ಯಯನ.
- ಜಾನಪದ ಅಡಿಗೆ ಮತ್ತು ಔಷಧಿಗಳು.
- ಜಾನಪದ ಉಡುಗೆ–ತೊಡುಗೆಗಳು.

➢ ಜಾನಪದ ಶಾಸ್ತ್ರ ಪುರಾಣಗಳು.

ಈ ಮೇಲಿನ ಜಾನಪದೀಯ ಪ್ರಕಾರಗಳ ಅಧ್ಯಯನ ಪ್ರಮುಖವಾದುದು. ಹಾಗೂ ಮುಂದಿನ ಪೀಳಿಗೆಗೆ ತಿಳಿಸುವ, ಕಲಿಸುವ, ಬೆಳೆಸುವ ಮತ್ತು ಅವುಗಳನ್ನು ಉಳಿಸುವ ಮಾರ್ಗಗಳನ್ನು ಸುಲಭ ರೀತಿಯಲ್ಲಿ ಯೋಚಿಸಿ, ಪಠ್ಯಕ್ರಮಗಳಲ್ಲಿ ಬರುವ ಹಾಗೆ ಮಾಡುವ ಜವಾಬ್ದಾರಿ ವಿಶ್ವವಿದ್ಯಾಲಯ ಹಾಗೂ ಜಾನಪದ ಅಕಾಡೆಮಿಯ ಮೇಲಿದೆ.

ಕನ್ನಡ ಜಾನಪದ ಪಠ್ಯಕ್ರಮಕ್ಕೆ ಇರಬೇಕಾದ ಪಠ್ಯ ವಿಷಯಗಳು :

➢ ಜಾನಪದ ಹುಟ್ಟು ಅವುಗಳ ಹಿನ್ನೆಲೆ.
➢ ಜಾನಪದದ ಪ್ರಾದೇಶಿಕ ಭಿನ್ನತೆ. ಬೆಳವಣಿಗೆ.
➢ ಸಂಪ್ರದಾಯದ ಹಿನ್ನೆಲೆಯಲ್ಲಿ ಬಂದ ಕಲೆಗಳು.
➢ ಶ್ರಮದಿಂದ ಹುಟ್ಟಿಕೊಂಡ ಜಾನಪದ ಪ್ರಕಾರಗಳು.
➢ ಸಂತೋಷಕ್ಕೆ ಕಟ್ಟಿಕೊಂಡ ಕಲೆಗಳು.
➢ ಹಿಂದೆ ಇದ್ದ ಕಲೆಗಳು, ಈಗ ಉಳಿದಿರುವ ಕಲೆಗಳು, ಮರೆತು ಹೋಗುತ್ತಿರುವ ಕಲೆಗಳು.
➢ ಕರ್ನಾಟಕ ಅಲೆಮಾರಿ ಜನಾಂಗದ ಜಾನಪದ.
➢ ಜಾನಪದ ಉಪಸಂಸ್ಕೃತಿಯ ಸಂಪ್ರದಾಯ ಮತ್ತು ಕಲೆಗಳು.
➢ ಜಾನಪದ ಭಾಷೆ
➢ ಜೀವನವೇ ಜಾನಪದವಾದ ಬಗೆಗಳು.
➢ ಮದುವೆ ಸಂಪ್ರದಾಯದ ಜಾನಪದ.
➢ ಜಾತ್ರೆ–ಹಬ್ಬ ಹರಿದಿನಗಳಲ್ಲಿ ಕಟ್ಟಿಕೊಂಡ ಜಾನಪದ.
➢ ನೀತಿ ನಿಯಮಗಳಿಗೆಂದು ಬಂದ ಹೆಣ್ಣು ಮಕ್ಕಳ ಗೀತೆಗಳು.
➢ ಜಾನಪದದ ಸೃಷ್ಟಿಕರ್ತೆ ಹೆಣ್ಣು ಎನ್ನುವುದು ಹೇಗೆ?
➢ ಪ್ರಾಥಮಿಕ ಹಂತಗಳ ಜಾನಪದ ಪ್ರವೇಶ.

ಯಂತ್ರಯುಗದಲ್ಲಿ ಜಾನಪದವನ್ನು ಉಳಿಸಿ, ಬೆಳೆಸಿ ಎಂದು ಹೇಳುವುದು ಬಹಳವೇ ಸುಲಭ. ಆದರೆ ಅದನ್ನು ಕಾರ್ಯರೂಪಕ್ಕೆ ತರುವುದು ಸುಲಭವಲ್ಲ. ಜಾನಪದವನ್ನು ಬೆಳೆಸುವ ಬಗೆಯನ್ನು ಯುವಕರು ಗಮನಿಸಬೇಕಾದ ಅಗತ್ಯವಿದೆ. ಜಾನಪದದ ಈ ಹಲವು ನೆಲೆಗಳನ್ನು ನಾವು ಗಮನಿಸಬೇಕು.

೧. ಪ್ರೀತಿ–ನೀತಿಯ ಪದಗಳು
೨. ಸಮಯೋಚಿತ ಗಾದೆ ಒಗಟುಗಳು
೩. ಹೆಣ್ಣು ಮಕ್ಕಳ ಜಾನಪದ
೪. ಗಾಳಿವಾದ್ಯ, ಚರ್ಮವಾದ್ಯ ಹಾಗೂ ಉಡುಪುಗಳು
೫. ಪ್ರದರ್ಶನ ಕಲೆಗಳು

೬. ನಂಬಿಕೆ, ಸಂಪ್ರದಾಯಗಳು
೭. ರೈತ ಜಾನಪದ, ಪ್ರಾಣಿ–ಪಕ್ಷಿ ಜಾನಪದ
೮. ಜನಪದ ಬೈಗುಳಗಳು
೯. ಕರಕುಶಲ ಜಾನಪದ
೧೦. ಮನೆ ವಿನ್ಯಾಸ, ಮಡಿಕೆ, ಬಿದಿರು
೧೧. ಡೊಂಬರು, ಹಕ್ಕಿಪಿಕ್ಕಿಯವರು, ಕೋಲೆಬಸವರು
೧೨. ಜಾನಪದ ಶಾಸ್ತ್ರಪುರಾಣ, ಪೂಜೆ ಪುರಸ್ಕಾರಗಳು
೧೩. ಮಾಯಾ, ಮಾಟ, ಮಂತ್ರ
೧೪. ಹಚ್ಚೆ ಜಾನಪದ ಹಾಗೂ ಔಷಧಿ
೧೫. ಜನಪದ ಆಟಗಳು
೧೬. ಜನಪದ ವಿವಿಧ ಊಟಗಳು
೧೭. ಮನೆ ವಸ್ತುಗಳು, ಪಾತ್ರೆ ಪಗಡೆಗಳು

****

(೭) "ಜಾನಪದದಲ್ಲಿ ಭೂಮಿ, ರೈತ ಮತ್ತು ಮಳೆ"

ರೈತ ಸದಾ ಭೂಮಿತಾಯಿಗೆ ಶರಣಾಗಿಯೇ ಇರುತ್ತಾನೆ. ನಮ್ಮಲ್ಲಿ ಕೃಷಿಗೆ ಬೇಸಾಯ, ವ್ಯವಸಾಯ ಹೀಗೆ ಅನ್ವರ್ಥ ಪದಗಳಿವೆ. ಆದರೆ ಜನಪದರು ಸೂರ್ಯ, ವರುಣ, ಪೃಥ್ವಿ, ಆಕಾಶ, ಹಾಗೂ ವಾಯು ಈ ಪಂಚವರ್ಣಗಳನ್ನೆ ದೇವಾನುದೇವತೆಗಳೆಂದರು. ನಮ್ಮ ಗ್ರಾಮೀಣ ಜನರ ಶ್ರಮಜೀವಿಗಳ ಬೆನ್ನಲ್ಲಿ ಹರಿದು ಬಂದ ಬೆವರಿನ ಜೊತೆ ಜಾನಪದ ಝೇಂಕರಿಸಿದ್ದು, ಇದನ್ನು ಮನಗಂಡಂತ ನಾವು ಇವತ್ತಿನ ಪೀಳಿಗೆಗೂ ಅದನ್ನು ಮನಗಾಣಿಸಬೇಕಾಗಿದೆ.

ಹತ್ತು ಸಾವಿರ ಪದವ ಎತ್ತಿನ ಮೇಲೆ ಏರ್‌ಕೊಂಡು
ಮತ್ತೆ ಸಾವಿರ ಪದವ ಕೈಯಲ್ಲಿ–ಹಿಡಕೊಂಡು
ಬಂದೀವಿ ಬಾರೋ ಬಸವಣ್ಣ ಸಭೆಗೆ

ಈ ತ್ರಿಪದಿ ಹಲವಾರು ಜಾನಪದೀಯ ಅಂಶಗಳನ್ನು ಹೊತ್ತುಕೊಂಡಿದೆ. ಜಾನಪದ ಕಾಲದಿಂದ ಕಾಲಕ್ಕೆ ತನ್ನ ಸ್ವರೂಪವನ್ನು ಬದಲಾಯಿಸಿಕೊಳ್ಳುತ್ತಾ ಅಸ್ಪಷ್ಟವಾದುದ್ದನ್ನು ಸ್ಪಷ್ಟಗೊಳಿಸುತ್ತಾ ಅಪೂರ್ಣವಾದದ್ದನ್ನು ಪೂರ್ಣಗೊಳಿಸುತ್ತಾ ಬೆಳೆದು ಬಂದಿರುವುದನ್ನು ನಾವು ಕಾಣುತ್ತೇವೆ. ಇದು ಯಾವುದೇ ವ್ಯಕ್ತಿಯನ್ನು ಅವಲಂಬಿಸಿಲ್ಲ. ಬದಲಾಗಿ ಪರಿಸರ, ಸಂಪ್ರದಾಯಗಳ ಮೇಲೆ ಅವಲಂಬಿತವಾಗಿದೆ. ವ್ಯಕ್ತಿ ಹೇಳುತ್ತಾ ಮರೆಯಾಗುತ್ತಾನೆ. ಆದರೆ ಕಲೆ ಮಾತ್ರ ತನ್ನ ಬದಲಾಗುವಿಕೆಯ ಸ್ಥಿತಿಯಲ್ಲೂ ಬೆಳೆಯುತ್ತಾ ಹೋಗುತ್ತದೆ.

"ಮಳೆ ನೀರು ರೈತನಿಗೆ ಬರೆ ನೀರಲ್ಲ, ಅದು ಹೊನ್ನಿನ ಪನ್ನೀರು, ನೀರಿನ ಮುಂದೆ ನಿಜವಾದ ಹೊನ್ನು ಕೂಡ ಅಗಣಿತ, "ಮಳೆ ನೀರು

ಬಿದ್ದರೆ ಬಂಗಾರದ ಬೆಳೆ ಬಂದಂಗೆ". ವ್ಯವಸಾಯವನ್ನು ಅವಲಂಬಿಸಿ, ತಮ್ಮ ಕುಲ ಕಸುಬುಗಳನ್ನು ಕಾಯಕವಾಗಿ ಕಂಡುಂಡು, ತಮ್ಮ ಅಂತರಂಗದಲ್ಲಿ ನೋವು-ನಲಿವುಗಳ, ಭಕ್ತಿ ಭಾವಗಳ, ಪ್ರೀತಿ ಸಂಬಂಧಗಳನ್ನು, ನಾಲಿಗೆಯಿಂದ ನಾಲಿಗೆಗೆ ಹರಿಸಿದ ಜನಪದರ ಶ್ರೀಮಂತಿಕೆ ಬಹಳ ಅತ್ಯಮೂಲ್ಯವಾದದ್ದು. ಗ್ರಾಮೀಣ ಮಹಿಳೆಯರು ಒಡಲಲ್ಲಿ ಹಲವಾರು ಪದಗಳನ್ನು ತುಂಬಿಕೊಂಡಿರುವ ಜಾನಪದದ ಗಣಿಯಾಗಿದ್ದರು. ಒಂದೂರಿಂದ ಮತ್ತೊಂದೂರಿಗೆ ಹೊಲ ಬಿತ್ತನೆಗೆ ಹೋಗಿ, ಹೊಲ ಹರಗುವ ಶ್ರಮದ ಸಮಯದಲ್ಲಿ ಹಲವಾರು ಜನಪದ ಗೀತೆಗಳು ಹುಟ್ಟಕೊಂಡಿವೆ. ನಮ್ಮ ಶ್ರಮಿಕರು ಪ್ರಕೃತಿಯ ಸೊಬಗನ್ನು ಹಾಡಿ ಹರಸಿ, ಅದರಲ್ಲೆ ನೋವು ಮರೆತು ಜೀವನ ಸ್ಫೂರ್ತಿ ಕಂಡುಕೊಂಡವರು. ಮಳೆಗಾಲ, ಚಳಿಗಾಲ, ಬರಗಾಲಗಳಲ್ಲಿ ಅತ್ಯದ್ಭುತವಾದ ಜನಪದ ಸಂಪತ್ತನ್ನು ಕಟ್ಟಿಕೊಟ್ಟವರು. ಬಿತ್ತಿ ಬೆಳೆದ ಕಾಲಕ್ಕೆ ಅವರಿಗೆ ಆಗುವ ಸಂತೋಷ ಹೇಳತೀರದಷ್ಟು. ಸುಗ್ಗಿಯ ಕಾಲದಲ್ಲಿ ಸೊಬಗಿನ ಪದಗಳನ್ನು ಕಟ್ಟಿ ಹಾಡಿಕುಣಿದವರು ಅವರು.

> ಸುಗ್ಗಿಯ ಕಣ ಕೇಳೋ ಸಗ್ಗವದು ರೈತರಿಗೆ
> ಹಿಗ್ಗಿ ಹಾಡುವಿಕೆ ಬೆಳವಲವು-ಬಸವಣ್ಣ
> ಬುಗ್ಗೆ ಕಾಣುದಕೆ ಶಿವರೂಪ

ತಲೆತಲಾಂತರದಿಂದ ಬಂದ ನಂಬಿಕೆಗಳು ಈಗಲೂ ಜೀವಂತವಾಗಿವೆ. ನಂಬಿಕೆ ಆಯಾ ಕಾಲದ ಸಂಸ್ಕೃತಿಯ ಮುಖಾಂತರ ಬೆಳೆಯುತ್ತಾ ಬಂದಿವೆ. "ಆದಷ್ಟೆ ಆರಂಭ ಹೊದಷ್ಟೆ ಮಳೆರಾಯ" ಎಂದು ಈಗಲೂ ನಂಬಿಕೆಯ ಮಾತನಾಡುವುದುಂಟು. ಬೆಳಿಗ್ಗೆ ಎದ್ದು ಹೆಣ್ಣು ಮಗಳು ರಂಗೋಲಿ ಬಿಡುವ ಮುಖಾಂತರ ದಿನದ ಕೆಲಸ ಸುಲಭವಾಗಲಿ ಮತ್ತು ಶುಭವಾಗಲಿ ಎಂದು ಆಶಿಸುತ್ತಾಳೆ. ಇಂಥ ನಂಬಿಕೆ ನಮ್ಮ ರಂಗೋಲೆಯಲ್ಲಿದೆ ಎಂದು ಎಷ್ಟು ಜನಕ್ಕೆ ಗೊತ್ತಿದೆ? ಮುಂಗಾರು ಬಿದ್ದ ನಂತರ ಹೊನ್ನೇರು ಕಟ್ಟುವುದು ನಂಬಿಕೆ. ಮಳೆ ಬಂದು ಬೆಳೆ ಕೊಡು ಎನ್ನುವುದು ಬಿತ್ತುವ ಕಾಲದ ಒಂದು ನಂಬಿಕೆ. ತಮ್ಮ ತಮ್ಮ ಕಸುಬು ಕಾಯಕವೇ ನಂಬಿಕೆಯ ಮೇಲೆ ನಿಂತಿದೆ. ನಂಬಿಕೆ ಆಚರಣೆಗಳೇ ರೈತರ ಮತ್ತು ಕೆಳವರ್ಗಗಳ ಆತ್ಮಸ್ಥೈರ್ಯವನ್ನು ಬಲಪಡಿಸಿಕೊಂಡು ಬಂದವು. ತನ್ನೂರಿನ ಗ್ರಾಮದೇವತೆ, ಮನದೇವರನ್ನು ಆತ್ಮಪೂರಕವಾಗಿ ನಂಬಿ, ನೆಚ್ಚಿನ ತಮ್ಮ ಕೆಲಸ ಕಾರ್ಯಗಳಿಗೆ ಹೋಗುತ್ತಿದ್ದರು. ನಂಬಿಕೆ ಎಂಬುವ ಪದದ ಹಿನ್ನೆಲೆಯಲ್ಲಿ ಆಚರಣೆ, ಅಪಾರವಾದ ಭಕ್ತಿ ಭಾವಗಳನ್ನು ಕಟ್ಟಿಕೊಂಡು, ಬದುಕಿ ಬಾಳಿದವರು ನಮ್ಮ ಜನಪದರು. ಯಾವುದೇ ಯಂತ್ರ ತಂತ್ರಗಳ ಶಿಕ್ಷಣವಿಲ್ಲದ ಮುಗ್ಧರು. ಈ ಭೂಮಿಗೆ, ಮಳೆಗೆ, ವಾಯುಗುಣಕ್ಕೆ, ತಕ್ಕಂತೆ ವ್ಯವಸಾಯ, ಉಪಕರಣ, ಮಡಿಕೆ-ಕುಡಿಕೆ, ಬಿದಿರು ಬೊಂಬೆಗಳನ್ನು ನಿರ್ಮಿಸಿಕೊಂಡರು. ಪ್ರಕೃತಿ ದೇವತೆ ಎಲ್ಲದರ ಸೃಷ್ಟಿಕರ್ತೆ. ನೆಲ-ಜಲ ನಮ್ಮ ದೇವರು, ಸೂರ್ಯಚಂದ್ರರು

ನಮಗೆ ಹಗಲು ಕತ್ತಲಿನ ಬೆಳಕಿನಾಟವಾಡಿಸುವ ಮಾಯಕಾರರು ಎಂದು ನಂಬಿದ್ದವರು ನಮ್ಮ ರೈತರು.

ಅಕ್ಷರದ ಅರಿವೇ ಇಲ್ಲದ, ಪ್ರಕೃತಿಯಿಂದಲೇ ಶಿಕ್ಷಣ ಕಲಿತ ಅನುಭವವನ್ನೇ ಅನುಭಾವವಾಗಿಸಿಕೊಂಡ ಸಾಧು-ಸಂತರೇ ನಮ್ಮ ಸಮಾಜ ಸುಧಾಕರು ಎಂದು ಅನನ್ಯ ನಂಬಿಕೆ ಉಳಿಸಿಕೊಂಡು ಬದುಕನ್ನು ಸ್ವೀಕರಿಸಿದವರು ಜನಪದರು. ಮಳೆ ನೀರು ರೈತರಿಗೆ ಸಾಮಾನ್ಯ ನೀರಲ್ಲ. ಅದು ಹೊನ್ನಿನ ಪನ್ನೀರೆಂದು ನಂಬಿದ್ದರು. ಭೂಮಿಯನ್ನು ನಂಬಿದವರು. ಭೂಮಿ-ಮಳೆಗೆ ಒಂದು ಭಾವನಾತ್ಮಕ ಸಂಬಂಧ ಬೆಳೆಸಿಕೊಂಡಿದ್ದವರು. ಪ್ರಕೃತಿಯ ಬದಲಾವಣೆಯನ್ನು ಅರಿತು ಅರ್ಥಮಾಡಿಕೊಂಡು ಆ ಕಾಲಕ್ಕೆ ಬೀಳುವ ಮಳೆಗೆ ಒಂದೊಂದು ಹೆಸರುಕೊಟ್ಟು ಮುಂಗಾರು-ಹಿಂಗಾರು, ಮಘ, ಪುಬ್ಬ, ಉತ್ತರೆ, ಹಸ್ತ, ಚಿತ್ತೆ, ಸ್ವಾತಿ, ವಿಶಾಖ ಮತ್ತು ಅನುರಾಧ ಹೀಗೆ ಮಳೆಗಳಿಗೆ ವಿಶಿಷ್ಟ ಹೆಸರು ಕೊಟ್ಟವರು ನಮ್ಮ ಜನಪದರು. ಕರೆ ಕಟ್ಟೆಯ ಕಲ್ಪನೆ ಕೊಟ್ಟರು. ಏರಿ ಕಟ್ಟಿ ನೀರು ನಿಲ್ಲಿಸಿಕೊಂಡು ಬೇಸಾಯ ಮಾಡುವ ಪ್ರತಿಮೆ ನಮ್ಮ ಜನಪದರ ಅನನ್ಯ ಕಲ್ಪನೆಯಾಗಿತ್ತು. ಇಂಥ ಬೆಳೆ ಈ ಭೂಮಿಗೆ ಸೂಕ್ತ, ಇಂತಹ ಕಾಳುಗಳು, ಈ ಭೂಮಿಗೆ ಸೂಕ್ತವೆಂದು ಮಣ್ಣಿಗೆ ತಕ್ಕ ಧಾನ್ಯಗಳನ್ನು ಬೆಳೆಯುವ ಸಂಪ್ರದಾಯ ಕೊಟ್ಟಂತವರು ನಮ್ಮ ಜನಪದರು. ಬೆಳೆದ ಬೆಳೆಸನ್ನು ನಮ್ಮೂರು ದೇವತೆಗೆ ಎಂದು ಎತ್ತಿಟ್ಟು ಆ ನಂತರ ತಾವು ಉಣ್ಣುವ ಸಂಪ್ರದಾಯ ರೂಢಿಸಿಕೊಂಡವರು. ಹೀಗೆ ನಂಬಿಕೆ ಇಲ್ಲದೆ ಬದುಕಿಲ್ಲ, ಬದುಕಿಲ್ಲದೆ ನಂಬಿಕೆಯಿಲ್ಲವೆಂದು ಕಂಡುಕೊಂಡವರು. "ನಮ್ಮ ಹೊಲಕ್ಕೆ ಹತ್ತೇರು ಬಂದು ಉತ್ತರೆ ನಿಮ್ಮ ಹೊಲಕ್ಕೆ ನಾವು ಬಂದು ಉತ್ತು ಬಿತ್ತುತ್ತೇವೆ" ಎಂಬ ಸಹಕಾರದ ಮನೋಭಾವ ಬೆಳೆಸಿಕೊಂಡವರು. ಮಾತಿನಂತೆ ಸಮೂಹ ಬದುಕು ನಡೆಸಿಕೊಂಡು ಬಂದವರು ನಮ್ಮ ಹಿರಿಯರು. ಈಗಿನ ಯುವಜನ ನೇಗಿಲ ಹಿಡಿದರೆ ರೋಗಿಯಾಗುವ ಕಾಲ ಬಂದು ಬಿಟ್ಟಿದೆ. ಶ್ರಮ ಯಾರಿಗೂ ಬೇಕಾಗಿಲ್ಲ. ಜಾಣತನದ, ನಿಪುಣತೆಯ ಜೀವನಕ್ಕೆ ಬಂದಿಳಿದಿದ್ದಾರೆ. ಯಾವ ಸಂಬಂಧ ಯಾರಿಗೂ ಬೇಕಾಗಿಲ್ಲ. ಒಗ್ಗೂಡಿ ಬದುಕುವ ಬೇವಿನ ಎಲೆಗಿಂತ ಕಹಿಯಾಗಿ, ತಮ್ಮ ನೆಮ್ಮದಿಯ ಬದುಕನ್ನು ಕಹಿಯಾಗಿಸಿಕೊಳ್ಳುತ್ತಾ ಬದುಕುತ್ತಿದ್ದಾರೆ. ರೈತ ಈ ದೇಶದ ಬೆನ್ನೆಲುಬು ಎನಿಸಿಕೊಂಡ ದೇಶದ ಕಥೆ ಮುಂದೇನು?

****

(೮) ಜನಪದ ಗೀತೆಗಳ ಸೊಲುಗಳಲ್ಲಿ, ಸಂತೋಷ, ಸೌಂದರ್ಯ

ನಮ್ಮ ನಾಲಿಗೆ ಮೇಲಿನ ಹಾಡು ಹರಿದು ಬಂದಿದ್ದೇ ಜನಪದರಿಂದ. ಅವರ ನಾಲಿಗೆಯೆ ಅಂದು ತಾಳೆಗರಿಯಾಗಿತ್ತು. ಕಿವಿಯಿಂದ ಕೇಳಿ ನಾಲಿಗೆಯಲ್ಲಿ

ಅನೇಕ ಪದಗಳನ್ನು ನಲಿದಾಡಿಸಿದ್ದಾರೆ. ಅನೇಕ ಹಾಡುಗಳನ್ನು ಗಾದೆ, ಒಗಟುಗಳನ್ನು ಮನಸು ಮತ್ತು ನಾಲಿಗೆಯಲ್ಲಿ ತುಂಬಿಕೊಂಡು ಹಾಡಿದರು ಎಂದ ಮೇಲೆ ಅನಕ್ಷರಸ್ಥರೇ ಶ್ರೇಷ್ಠರು. ಅವರ ನಾಲಿಗೆಯಲ್ಲಿ ನಲಿದಾಡಿದ ಹಾಡುಗಳೇ ಶ್ರೇಷ್ಠ ಎಂದು ಸಂತೋಷ ಪಡುವುದು ನಮ್ಮೆಲ್ಲರ ಮನಗುಣವಾಗಬೇಕಲ್ಲವೆ! ಕವಿರಾಜ ಮಾರ್ಗದ ಈ ಪದ್ಯ ಜನಪದ ಕಟ್ಟಿದ ಕವಿಗಳೇ ಶ್ರೇಷ್ಠರೆಂದು ಬಣ್ಣಿಸುತ್ತದೆ.

"ಪದನರಿದು ನಡಿಯಲುಂ ನುಡಿ
ದುದನರಿದಾರಯಲು ಮಾರ್ಪರ್ಣ ನಾಡವರ್ಗಳ್
ಚದುರರ್ ನಿಜದಿಂ ಕುರಿತೋ
ದದೆಯಂ ಕಾವ್ಯ ಪ್ರಯೋಗ ಪರಿಣತ ಮತಿಗಳ್" ಎನ್ನುತ್ತಾರೆ

ಅಂತೆಯೆ ಜನಪದರು ಯಾರ ಆಶ್ರಯದಲ್ಲೂ ಬೆಳೆದವರಲ್ಲ, ಯಾರ ಹಂಗೂ ಇಲ್ಲದೆ ಬೆಳೆದು ಬದುಕಿದವರು. ಶಿಷ್ಟ ಸಂಗೀತ ಒಂದು ಕಡೆ ಬುದ್ಧಿವಂತರ ಸಂಗೀತ ಎನಿಸಿಕೊಂಡರೆ, ಜನಪದ ಸಂಗೀತ ಸಾಮಾನ್ಯರದ್ದು ಎನಿಸಿಕೊಳ್ಳತ್ತದೆ. ಜಿಲ್ಲಾಧಿಕಾರಿಯಾಗಿದ್ದರೂ ಜಾನಪದದ ಮೇಲಿನ ಅಪಾರ ಕಾಳಜಿ ಆಸಕ್ತಿ ಹೊಂದಿದ್ದ ನಾಡೋಜ ಹೆಚ್.ಎಲ್. ನಾಗೇಗೌಡರು ಜನಪದ ಸಂಗೀತದಲ್ಲಿ ನಾನು ಕಂಡಂತೆ ಆಡು ನುಡಿಯೇ ಪ್ರಧಾನ, ಇವುಗಳ ದನಿ-ದಾಟಿ ಒಬ್ಬರಿಂದೊಬ್ಬರಿಗೆ ಕೇಳುವಿಕೆಯಿಂದ ಬಂದದ್ದು. ಇವು ಯಾವ ರಾಗ ತಿಳಿಯವು. ಲಯ, ತ್ರಿಪದಿಗಳೇ ಹೆಚ್ಚು. ವಾದ್ಯವಿಲ್ಲದೇ ಹಿಮ್ಮೇಳ-ಮುಮ್ಮೇಳದಲ್ಲಿ ಹೆಣ್ಣುಮಕ್ಕಳು ಹಾಡುತ್ತಾರೆ. ಅವರ ಕಂಠ, ಮಾಧುರ್ಯ ಬಣ್ಣಿಸಲಾಗದು. ಸಂದರ್ಭವನ್ನು ನೋಡಿ ಕಟ್ಟಿ ಹಾಡೇಬಿಡುವರು ನಮ್ಮ ಜನಪದರು. ಖ್ಯಾತ ಜಾನಪದ ವಿದ್ವಾಂಸರೂ, ಸಂಗ್ರಹಕಾರರೂ ಆದ ಡಾ. ಜಿ. ಶಂ. ಪರಮಶಿವಯ್ಯನವರು ಕರ್ನಾಟಕದ ಉದ್ದ-ಅಗಲಕ್ಕೂ ತಿರುಗಾಡಿ ಜನಪದ ಕಲಾವಿದರ ಬಗ್ಗೆ ಅನನ್ಯ ಗೌರವವಿಟ್ಟು ಹೀಗೆ ಹೇಳುತ್ತಾರೆ, ನಮ್ಮ ಜನಪದ ಕಲಾವಿದರ ಒಡಲಲ್ಲಿ ಅವೆಷ್ಟೋ ಹಾಡುಗಳು ಅಡಗಿವೆ. ಸಮುದ್ರದಲ್ಲಿ ಮೀನು ಹಿಡಿದು ನೀವೆಷ್ಟೇ ತಂದರು ಸಮುದ್ರದಲ್ಲಿ ಮೀನು ಖಾಲಿಯಾಗದು. ಹಾಗೇ ನಮ್ಮ ಜನಪದರನ್ನು ಎಷ್ಟೇ ಹಾಡಿಸಿದರು ಅವರ ಒಡಲಲ್ಲಿ ಅದೆಷ್ಟೋ ಹಾಡುಗಳು ತುಂಬಿವೆ. ಯಾವುದೇ ವಾಗ್ವಾದ ಸಂವಾದಗಳಿಲ್ಲದೆ ಹಾಡುಗಳನ್ನು ಕಟ್ಟಿಕೊಂಡಿದ್ದಾರೆ. ಇಂತಹ ಜನಪದರು ಮೂಲ ಸಂಸ್ಕೃತಿಯ ನೇತಾರರು ಎನ್ನುತ್ತಾರೆ.

ಕವಿರಾಜಮಾರ್ಗಕಾರ ತಮ್ಮ ಪದ್ಯದಲ್ಲಿ ಅಂದೇ 'ದೇಶಿ' ಎಂಬ ಅರ್ಥದಲ್ಲಿ ಜಾನಪದವನ್ನು ವರ್ಣಿಸಿದ್ದಾರೆ. ಜಾನಪದದ ಮತ್ತೊಂದು ಅರ್ಥ ದೇಶಿ ಎಂದು ಈಗ ಅದನ್ನು ನೆಲಮೂಲ ಸಂಸ್ಕೃತಿ ಎಂತಲೂ ಕರೆಯುತ್ತಾ ಬರುತ್ತಿದ್ದಾರೆ. ನಮ್ಮ ಪರಂಪರೆಯ ಅರಿವು ಇವತ್ತಿನ ಯುವಕರಿಗೆ

ಗೊತ್ತಾಗಬೇಕು, ಗೊತ್ತಾಗುವ ಹಾಗೆ ನಾವು ತಿಳಿಸಬೇಕು ಸರ್ಕಾರ ಮನಸ್ಸು ಮಾಡಬೇಕು. ಹಾಡುಗಳಲ್ಲಿ ನಾವು ಅನೇಕ ನಮ್ಮ ಬದುಕಿನ ನೆಲೆಯ ಮಾರ್ಗಗಳನ್ನು ಕಾಣಬಹುದು, ಅರಿಯಬಹುದು. ಜನಪದ ಗೀತೆಗಳಲ್ಲಿ ಬಗೆ ಬಗೆಯ ಸಂಪ್ರದಾಯ ಹಾಡುಗಳು ಸೊಲ್ಲು, ಸವಿಸೊಲ್ಲು, ಸಂತೋಷ ಮತ್ತು ಸೌಂದರ್ಯ ಕಾಣಬಹುದು. ಆ ಎಲ್ಲಾ ಜನಪದ ತುಣುಕುಗಳನ್ನು ನೋಡುವುದೇ ಆದರೆ, ಅವರು ಮಾಡುವ ಅನೇಕ ರೀತಿಯ ಶ್ರಮದ ಕೆಲಸಗಳನ್ನು ಗಮನಿಸಬೇಕು. ಅನೇಕ ತ್ರಿಪದಿಗಳನ್ನು ಹಾಡುವಾಗ, ಅವರ ಉಸಿರಿನ ಗತಿಯನ್ನೇ ತ್ರಿಪದಿಯ ಗತಿಯು ಅನುಸರಿಸುತ್ತದೆ. ಆ ಸಂದರ್ಭದಲ್ಲಿ ಅಕ್ಷರಗಳ ಸಂಖ್ಯೆ ವ್ಯತ್ಯಾಸವಾಗುತ್ತದೆ. ತ್ರಿಪದಿ ಹಾಡುವಾಗ ಧಾಟಿಯ ಓಟವನ್ನು ತಡೆದು ನಿಲ್ಲಿಸುವ ಸ್ಥಾನಕ್ಕೆ 'ಸೊಲ್ಲು' ಎನ್ನುತ್ತೇವೆ. ಇದನ್ನೇ 'ಯತಿ' (ಉಸಿರು ನಿಲ್ಲಿಸುವ ತಾಣ)ಎನ್ನುತ್ತಾರೆ. ಸೊಲ್ಲು ಅರೆಸೊಲ್ಲುಗಳ ನಡುವೆ ತ್ರಿಪದಿಯ ಧಾಟಿ ಅದರ ಬೆಳವಣಿಗೆ ಅನೇಕ ಸಂದರ್ಭ ಸಂಬಂಧಗಳನ್ನು ಕಲ್ಪಿಸುವ ಬಂಗಾರದ ಕೊಂಡಿಯಂತಿವೆ.

ಕಲ್ಲೊಡಿ ನೆನೆದೇವು ಕಲ್ಯಾಣದಯ್ಯನಾ
ಬಿಲ್ಲು ಕಾಣದ ಬಿದಿರೇ-ರಂಗಯ್ಯನಾ
ಸೊಲ್ಲು ಸೊಲ್ಲೀಗೆ, ನೆನೆದೇವು

ಅರೆಸೊಲ್ಲು: ರಾಗಿ ಬೀಸೋ ಕಲ್ಲೆ ರಾಜಾನಾ ಒಡಿಗಲ್ಲೆ
ರಾಯ ಅಣ್ಣಯ್ಯ ಅರಮಾನೇ-ರಾಗಿಕಲ್ಲೆ
ರಾಜ ಬೀದಿಗೆ ದನಿದೋರೆ !

ಸವಿಸೊಲ್ಲು: ಬೇಸಿಗೆ ಬಿಸಲಾಗೆ ಬೇವಿನ ಮರ ತಂಪು
ಭೀಮರಥಿಯೆಂಬ ಹೊಳೆತಂಪು- ಹಡೆದವ್ವ
ನೀ ತಂಪು ನನ್ನ ತವರೀಗೆ

ಹೀಗೆ ಅನೇಕ ತ್ರಿಪದಿಗಳನ್ನು ಹಾಡುವಾಗ ವಿವಿಧ ರೀತಿಯ ಪಲ್ಲವಿ ಸೇರಿಸಿ ದನಿಯ ಧಾಟಿಯಲ್ಲಿ ವೈವಿಧ್ಯತೆಯನ್ನು ಸಾಧಿಸಲಾಗದೆ ಸುವ್ವಿ ಹಾಡಿನಲ್ಲಿ ಪುನರಾವರ್ತನೆಯಾಗುತ್ತಾ ಹೋಗುತ್ತದೆ. ಒಟ್ಟಾರೆ ಜಾನಪದ ಎನ್ನುವುದೇ ಕರ್ಮಗೀತೆಗಳು ಎಂದರೆ ತಪ್ಪೇನಿಲ್ಲ. ಜಾನಪದ ರಾಷ್ಟ್ರದ ಸಂಪತ್ತು. ಇದಕ್ಕೆ ಜಾತಿ ಮತ ಭೇದವಿಲ್ಲ. ಸಮೂಹ ಕತೆ, ಸಮೂಹ ಹಾಡು, ಸಮೂಹನೃತ್ಯ, ಸಮೂಹ ಬದುಕು, ಇದು ಸೃಷ್ಟಿಯ ಫಲ. ಇಲ್ಲಿ ಸ್ವಭಾವೋಕ್ತಿಗೆ ಅನುಗುಣವಾಗಿ ಅಲಂಕಾರಗಳಿವೆ. ಇವುಗಳಲ್ಲಿ ಸರಳತೆ-ಮುಗ್ಧತೆಯ ಪ್ರತಿಭೆ ತುಂಬಿದೆ. ಇಲ್ಲಿ ಶಬ್ಧ ಅರ್ಥಾಂಲಕಾರಗಳ ಆಡಂಬರವಿಲ್ಲ. ಜಾನಪದ ಚಿಂತಕ **'ಬಾಗ್ಸ್'** ಹೇಳುವ ರೀತಿ ದೈನಿಕ ಜೀವನ ಚಕ್ರದ ಬದುಕಿನ ಚಿತ್ರಣವನ್ನು ಜಾನಪದ ಅನಾವರಣಗೊಳಿಸುತ್ತದೆ. ಇದಕ್ಕೆ 'ದೇಸಿ' ಕಾವ್ಯ ಎಂದು ಪ್ರೊ. ಜಿ.ಎಸ್. ಸಿದ್ದಲಿಂಗಯ್ಯ ಅಭಿವ್ಯಕ್ತಿಸಿದ್ದಾರೆ.

ಬಂಜೆಯ ಮನೆಮುಂದೆ ಅಂಜೂರದ ಗಿಡ ಹುಟ್ಟಿ
ಟೊಂಗೆ ಟೊಂಗೆ ಗಿಣಿ ಕೂತು–ಹೇಳ್ಯಾವೆ
ಬಂಜೆ ನಿನ ಬದುಕು ಹೆರವರಿಗೆ.

ಮಹಾಕವಿಗಳನ್ನು ಮೂಕನನ್ನಾಗಿ ಮಾಡಿಸುವ ಶಕ್ತಿ ಈ 'ಮಣ್ಣಿನ ವಾಸನೆ' ಹೊಂದಿರುವ ಮಾತಿನ ಸೊಗಡಿನಲ್ಲಿದೆ. ಆದ್ದರಿಂದ 'ದೇಸಿ' ಸಂಗೀತವೇ ಮಾರ್ಗ ಸಂಗೀತಕ್ಕೆ ತಳಹದಿ. ಮೊದಲು 'ಲಾವಣಿ'ಯಂಥ ಪ್ರಕಾರಗಳು ಆರಂಭವಾದುವು. ಹೆಣ್ಣು ತನ್ನ ಅಂತರಂಗದ ಅನೇಕ ಆತಂಕಗಳನ್ನು ಹಾಡಾಗಿಸಿಕೊಂಡು ಹಾಡಿದ್ದಾಳೆ. ಅವಳು ತನ್ನ ಹಾಡಿನ ಮುಖಾಂತರ ನಾಡಿಗೆ ಭಾವಭಿವ್ಯಕ್ತಿಯನ್ನು ಅಭಿವ್ಯಕ್ತಿಸಿದ್ದಾಳೆ. ರಾಗಿಕಲ್ಲಿನ ಮುಂದೆ ಕುಂತು ರಾಗಿಯನ್ನು ಬೀಸಿ ಬೆನ್ನು ಬಾಗಿಸಿಕೊಂಡಿದ್ದಾಳೆ. ಹಾಗಾದಾಗ ನೋವುಗಳನ್ನು ಮರೆತು ಚೈತನ್ಯವನ್ನು ಪಡೆಯಲು ಹಾಡುಗಳನ್ನು ಹಾಡಿದ್ದಾಳೆ. ಜನಪದ ಗೀತೆ ಚಿರಂಜೀವಿಯಾಗಿರುತ್ತದೆ ಎಂಬುವುದಕ್ಕೆ ಈ ರೀತಿಯ ಅನೇಕ ಉದಾಹರಣೆಗಳು ನಮ್ಮ ಮುಂದಿವೆ. ಗ್ರಾಮ ಜೀವನದಲ್ಲಿ ಸ್ವಾತಂತ್ರ್ಯ ಕಾಣದ ಜೀವಗಳು ಅದೆಷ್ಟೋ ಇವೆ. ಜಾನಪದದಲ್ಲಿ ಬರುವ ಸೋಜಿಗ, ದುಃಖ, ದುಮ್ಮಾನಗಳನ್ನು ಹಾಡಾಗಿಸಿದ್ದಾರೆ. ಆ ಮೂಲಕ ಅನೇಕ ದೃಶ್ಯಗಳನ್ನು ಕಣ್ಣಿಗೆ ಕಟ್ಟುತ್ತಾರೆ, ಮನವನ್ನು ತಟ್ಟುತ್ತಾರೆ.

ಬಾಲಾಕರಿಲ್ಲದ ಬಾಳೀದ್ಯಾತರ ಜನ್ಮ
ಬಾಡಿಗೆ ಎತ್ತು ದುಡಿದ್ಹಾಂಗ–ಬಾಳೆಲೆಯ
ಹಾಸುಂಡು ಬೀಸಿ ಒಗೆದ್ಹಾಂಗ.

ಈ ತ್ರಿಪದಿಯ ಅರ್ಥ ಮಹತ್ವದ್ದು. ಮಕ್ಕಳೇ ಇಲ್ಲದ ಈ ಜೀವ ಬಾಡಿಗೆ ಎತ್ತಿಗೆ ಸಮ. ಉಂಡು ಬೀಸಾಡುವ ಬಾಳೆಲೆಗೆ ಸಮ ಎನ್ನುತ್ತಾರೆ. ಮಕ್ಕಳಿಲ್ಲದ ದಂಪತಿಗಳ ದುಃಖದ ಪರಮಾವಧಿಯನ್ನು ಇಲ್ಲಿ ಕಾಣಬಹುದು. ದೇವ ಒಬ್ಬನೇ ಹೆಸರು ಹಲವಾರು. ಹಾಗೆಯೇ ಜನಪದ ಕುಟುಂಬ ಸರ್ವಧರ್ಮ ಸಮನ್ವಯತೆಯನ್ನು ಸೂಚಿಸುತ್ತದೆ. ಇವುಗಳಲ್ಲಿ ಅನೇಕ ಮೌಲ್ಯಗಳಿವೆ. 'Folk is a Local Art' ಎನ್ನುತ್ತಾರೆ. ಸಾಮಾನ್ಯನ ಜೀವನದಲ್ಲಿ ಬರುವ ಅಸಾಮಾನ್ಯವಾದ ದುಃಖ, ಭಕ್ತಿ–ಭಾವ, ಸಂಪ್ರದಾಯಗಳು, ಹಾಡಾಗಿವೆ. ತೊಟ್ಟಿಲು ತೂಗುವ, ಕುಟ್ಟು ಬೀಸುವ, ಮೊಸರು ಕಡೆಯುವ, ದೋಣಿ ನಡೆಸುವ, ಹಬ್ಬ–ಹರಿದಿನಗಳನ್ನು ಸಂತೋಷದಿಂದ ಆಚರಿಸುವ ಸಂದರ್ಭದಲ್ಲಿ ಅನೇಕ ಹಾಡುಗಳನ್ನು ನಮ್ಮ ಜನರು ಕಟ್ಟಿದ್ದಾರೆ. ಕಾಳಿ, ದುರ್ಗಿ, ಮಷಣಿ, ಕೆಂಚಮ್ಮ, ಮಾಸ್ತಮ್ಮ, ಮಾರಮ್ಮ, ಪಟಾಲಮ್ಮರ ಪದಗಳನ್ನು ಗಾಳಿ ಮಳೆಯಂತೆ ಹಾಡಿದ್ದಾರೆ. ಸ್ವಾತಂತ್ರ್ಯಕ್ಕೆ ಮುನ್ನ, ಬಿ.ಎನ್. ರಂಗಸ್ವಾಮಿ, ಹಲಸಂಗಿ ಸಹೋದರರು, ಬಿ.ಎನ್. ಗದ್ದಿಗೀಮಠ, ಕಾ.ರಾ.ಕೃ. ಪ್ರಮುಖರಾದ ಜಾನಪದ ಅಧ್ಯಯನಕಾರರು. ಹಡ್ಸನ್ ಹೀಗೆ ಹೇಳುತ್ತಾರೆ, "ಜೀವದಿಂದ

ಮೂಡಿದ್ದು, ಜೀವನಕ್ಕೆ ಸೇರಿದ್ದು ಜನಕ್ಕಾಗಿಯೇ ಇರತಕ್ಕದ್ದು ಈ ಜಾನಪದ". ಇದು ಜನಸಾಮಾನ್ಯರ "ಆತ್ಮ ಚರಿತ್ರೆ" ಇದ್ದ ಹಾಗೆ. ಇದು ಜೀವನ ಸಮಷ್ಟಿಯ ದರ್ಶನದ ಲೋಕ. ಜನಪದ ಗೀತೆಗಳು ಜನತೆಯ ಮನಸ್ಸು, ಹೃದಯಗಳನ್ನು ತಿಳಿಯಲು ಸಹಕಾರಿಯಾಗಿವೆ.

ಬಾರಯ್ಯ ಬೆಳದಿಂಗಳೆ
ನಮ್ಮೂರ ಹಾಲಿನಂತ ಬೆಳದಿಂಗಳೆ,

ಎಂದು ನಮ್ಮ ಜನ ಹಾಡಿ ನಲಿದಿದ್ದಾರೆ. 'ನಂಜನಗೂಡಲ್ಲಿ ನಮಗ್ಯಾರು ನಂಟರು. ನಂಜುಂಡ ನಮ್ಮ ಮನೆ ಸ್ವಾಮಿ' ಎಂದು ಭಕ್ತಿಯಿಂದ ಹಾಡಿ ಸಂತೋಷ, ಅನುಭವಿಸಿದ್ದಾರೆ. "ತೊಟ್ಟಿಲದೊಳಗೊಂದು ತೊಳೆದ ಮುತ್ತನು ಕಂಡೆ, ದೃಷ್ಟಿ ಮುರಿಲಾಕೆ ಅರಿಯಾಳು". "ತೌರೂರದಾರಿಲಿ ಕಲ್ಲಿಲ್ಲ ಮುಳ್ಳಿಲ್ಲ ಸಾಸಿವೆಯಷ್ಟು ಮರಳಿಲ್ಲ" "ಎಷ್ಟು ಸುಂದರ ನನ್ನೂರು" ಎಂದೆಲ್ಲ ನಲಿದಾಡಿದ್ದಾಳೆ. "ಮಾಯದಂತ ಮಳೆ ಬಂತಣ್ಣ ಮದುಗಾದ ಕೆರೆಗೆ" ಎಂದು ಮಳೆ ಬಂದಾಗ, ಕೆರೆ ತುಂಬಿದಾಗ ಆನಂದಿಸುವ ಬಗೆಯೇ ಬೇರೆ. "ನಿಂಬೆಯ ಹಣ್ಣಂಗೆ ತುಂಬಿದ ಮೈನೋಳೆ ಜ್ಞಾನಬಿತ್ತಲ್ಲೆ ನಿನಮೇಲೆ" ಎಂಬಲ್ಲಿ ಹೆಣ್ಣಿನ ಕುರಿತಾದ ಗಂಡಿನ ಮನೋಭಾವವನ್ನು ಕಾಣಬಹುದಾಗಿದೆ.

ತಾವರೆಯ ಗಿಡ ಹುಟ್ಟಿ ದೇವರಿಗೆ ನೆರಳಾದೆ
ನಾಹುಟ್ಟಿ ಮನೆಗೆ ಎರವಾದೆ– ಹಡೆದವ್ವ
ನೀ ಕೊಟ್ಟ ಮನೆಗೆ ಹೆಸರಾದೆ.

ಈ ತ್ರಿಪದಿಯಲ್ಲಿ ತಾಯಿಯ ಅಂತಃಕರಣ ಮತ್ತು ಮಗಳ ಅನಂತ ಆಶಯವನ್ನು ಕಾಣಬಹುದಾಗಿದೆ. ಕೊಟ್ಟ ಮನೆಗೆ ಹೆಸರು ತರುವೆ ಎಂದು ಭಾಷೆ ಕೊಡುವ ಸಂದೇಶ ಬಹಳ ದೊಡ್ಡದು. 'ಈಸಬೇಕು ಇದ್ದು ಜೈಸಬೇಕು' ಎಂಬುದು ಜೀವಂತ ಆತ್ಮ ಸ್ಥೈರ್ಯದ ಸಂಕೇತವಾಗಿದೆ. ಭೂಮಿ ತಾಯಿ ಬರಿಯ ಭೂದೇವಿ ಮಾತ್ರವಲ್ಲ, ನಿಜವಾದ ತಾಯಿಯೆ. ಜನರು ಕೊಡುವುದಲ್ಲ ಭೂಮಿತಾಯಿ ನಮಗೆ ವರಕೊಟ್ಟರೆ ಅದು ನಮಗೆ ಶಿವ ವರ ಕೊಟ್ಟಂತೆಯೆ ಎಂಬ ಮಾತು, ನಮ್ಮ ಜನಪದರಲ್ಲಿದೆ. "ಅಂಗೈ ಅಗಲದ ಗದ್ದೆ, ಗದ್ದೆಗೆ ನೀರು, ನೀರಿಗೆ ಬೇರು ಬೇರಿಗೆ ಬೆಂಕಿ" ಈ ಒಗಟನ್ನು ಒಡೆದರೆ ಕಾಲಿಗೆ ಕಡಗ ಕೊಡುವೆ ಎಂದು ಪ್ರಶ್ನೆಯೊಡ್ಡುವ ಪ್ರಕ್ರಿಯೆ ಜನಪದರಲ್ಲಿದೆ. ಈ ಒಗಟಿನ ಉತ್ತರ 'ದೀಪ' ಎನ್ನುವುದು ಎಷ್ಟು ಜನಕ್ಕೆ ಗೊತ್ತು? ಅಂಗೈ ಅಗಲದ ಗದ್ದೆ ಎಂದರೆ ದೀಪ. ನೀರು ಎಂದರೆ ಎಣ್ಣೆ, ಬೇರು ಎಂದರೆ ಬತ್ತಿ. ಬೇರಿಗೆ ಬೆಂಕಿ ಈ ಒಳ ಅರ್ಥಗಳು ನಮ್ಮ ಬದುಕಿಗೊಂದು ಸಂದೇಶ. ದೀಪ ಉರಿಯುವವರೆಗೆ ಬೆಳಕು. ಆ ಮನೆಯ ಯಜಮಾನನೇ ಆ ಮನೆಗೆ ಬೆಳಕು. ಎಂಬುದು ನನ್ನ ತಿಳುವಳಿಕೆ. 'ಹಸಿರು ಗಿಡದ ಮೇಲೆ ಮೊಸರು ಚೆಲ್ಲಿದೆ' ಈ ಒಗಟಿನ ಉತ್ತರ ಮಲ್ಲಿಗೆ ಹೂವು. ಈ ಮಲ್ಲಿಗೆ ಹೂವಿನಂತೆ

ನಮ್ಮ ಬದುಕು ಬಾಡದ ಹಾಗೆ ನಡೆಸುವುದೇ ಮುಖ್ಯ. ನಮ್ಮ ಬದುಕು ಹಸಿರು ಗಿಡದಂತೆಯೇ ಇರಬೇಕೆಂಬುದು ಇಲ್ಲಿಯ ಆಶಯ.

'ಎನ್‌ಸೈಕ್ಲೋಪೀಡಿಯ ಆಫ್ ರೀಜನಲ್ ಆ್ಯಂಡ್ ಎಥಿಕ್ಸ್' ಎಂಬ ಕೃತಿಯಲ್ಲಿ 'ಜೇಮ್ಸ್ ಎ. ಕಿಲ್ಲೊ' ಅನೇಕ ಒಗಟುಗಳ ಅರ್ಥ, ಭಾವವನ್ನು ಬಣ್ಣಿಸುತ್ತಾರೆ. ಲ್ಯಾಟಿನ್, ಫ್ರೆಂಚ್, ಜರ್ಮನಿ ಭಾಷೆಗಳಲ್ಲಿ ವಿವಿಧ ರೂಪಕದ ಗೂಢಾರ್ಥವನ್ನು ಇಲ್ಲಿ ವಿವರಿಸಲಾಗಿದೆ. ಅನೇಕ ಕನಸುಗಳು ಮನುಷ್ಯನಿಗೆ ಬೀಳುತ್ತವೆ. ಆ ಕನಸುಗಳು ಒಂದರ್ಥದಲ್ಲಿ ಒಗಟುಗಳಾಗಿರುತ್ತವೆ. ಅನೇಕ ಕಥೆಗಳು ಒಗಟಿನ ರೂಪದಲ್ಲಿರುತ್ತವೆ. "ಬದುಕೇ ಒಂದು ಒಗಟು" ಅದನ್ನು ಬಿಡಿಸಿ, ನಡೆಸಿ ಸಾಗಿಸುವ ಜೀವನ ಪ್ರಕ್ರಿಯೆಯೇ ಅನಂತವಾದದ್ದು. ಬದುಕನ್ನು ಸರಳವಾಗಿ ಕಳೆಯುವುದಕ್ಕೆ ಬೇಕಾದ ಆತ್ಮ ಸ್ಥೈರ್ಯವನ್ನು ಜನಪದ ಸಾಹಿತ್ಯ ತುಂಬುತ್ತವೆ. ಜನಪದರು ಶಿವನ ಕಥೆ, ನಂಜುಂಡ ಜೋಗಿ, ಗಿರಿಜಾಕಲ್ಯಾಣ, ಕರಿಬಂಟನ ಕಾಳಗ, ರಾಮಾಯಣ, ಮಹಾಭಾರತ, ಮಹದೇಶ್ವರ ಕಾವ್ಯ, ಗಂಗೆ–ಗೌರಿ, ಯಲ್ಲವ್ವ, ಹೀಗೆ ಅನೇಕ ಜನಪದ ಕಥನ ಕಾವ್ಯದೊಳಗೆ ಜೀವಕುಲ, ಮಾನವಕುಲದ ಸಂಬಂಧಗಳನ್ನು ವರ್ಣಿಸುತ್ತಾ ಬದುಕಿನ ಸಂದೇಶವನ್ನು ಸಾರಿದ್ದಾರೆ. ಮಾತ್ರವಲ್ಲ ಅವುಗಳನ್ನು ಅಳವಡಿಸಿಕೊಂಡು ಬಾಳಿದ್ದಾರೆ. ನಮ್ಮನ್ನು ತಾಳ್ಮೆಯಿಂದ ಬಾಳಿ ಎಂದು ತಮ್ಮ ಹಾಡಿನಲ್ಲೆ ಸಾರಿದ್ದಾರೆ. ಮೊದಲೇ ಹೇಳಿದ ಹಾಗೆ ಅನಕ್ಷರಸ್ತ ಸಮಾಜ, ನಾಗರಿಕತೆ ಇಲ್ಲದ ಜನ, ನಾಗರಿಕತೆಗೆ ಮೂಲವಾದ ಜನ ನಮ್ಮ ಜನಪದರು ಎನ್ನುವುದರಲ್ಲಿ ಯಾವ ಅನುಮಾನವಿಲ್ಲ, ಎಲ್ಲಾ ಸಂಸ್ಕೃತಿಗೆ ದಾರಿಯಾದದ್ದೂ, ಆಧಾರವಾದದ್ದೂ, ದಾರಿ ದೀಪವಾದದ್ದೂ, ಜಾನಪದವೇ ಎಂಬುವುದಂತೂ ನಿಜ. ಇಂತಹ ತಾಯಿ ಬೇರಾದ ಜಾನಪದವನ್ನು ಆದಷ್ಟು ಅಳವಡಿಸಿಕೊಳ್ಳುತ್ತಾ, ಅತ್ಯಾಧುನಿಕವಾದ ಈ ಜಾಗತೀಕರಣದ ಸಂದರ್ಭದಲ್ಲಿ ಬೆಳೆಸಬೇಕಾಗಿದೆ. ನಮ್ಮ ಊರಿನ ಜನಪದಗೀತೆ, ಒಗಟು, ಗಾದೆ, ಕುಣಿತ, ಹಬ್ಬ, ಜಾತ್ರೆಗಳು ನಮಗೆ ಆತ್ಮ ಸ್ಥೈರ್ಯ ಕೊಡುತ್ತಿರುತ್ತವೆ. ನಂಬಿಕೆಯನ್ನು ಬೆಳೆಸುತ್ತಿರುತ್ತವೆ. ಇವತ್ತಿನ ಬಾಯಿ ರುಚಿಯ ಊಟ, ಸಂಸ್ಕೃತಿ ನಮ್ಮ ದೇಹಕ್ಕೆ, ಮನಸ್ಸಿಗೆ, ಜೀವನದ ನೆಮ್ಮದಿಗೆ ಅಪಾಯ ತಂದಿಟ್ಟಿದೆ. ಆದುದರಿಂದ ಜನಪದವೇ ನಮ್ಮ ಬದುಕಿನ ನಿತ್ಯ ಸತ್ಯ.

****

೧೧. ಅಪ್ಪಗೆರೆ ನಡಿಗೆ

೧೯೫೫ – ಜನನ (ರಾಮನಗರ ಜಿಲ್ಲೆಯ ಚನ್ನಪಟ್ಟಣ ತಾಲೂಕಿನ ಅಪ್ಪಗೆರೆ)

೧೯೭೦ – ಜನಪದ ಗೀತೆ ಹಾಡಲು ಪ್ರಾರಂಭ

೧೯೭೨ – ಮೊದಲ ಬಹುಮಾನ ದೊರೆತದ್ದು.

೧೯೭೬ – ಆಕಾಶವಾಣಿಯಲ್ಲಿ ಹಾಡಲು ಪ್ರಾರಂಭ

೧೯೮೧ – ರಾಜ್ಯಮಟ್ಟದ ಯುವಜನ ಮೇಳದ ಜನಪದ ಗೀತೆಗೆ ಪ್ರಥಮ ಸ್ಥಾನ, ಧಾರವಾಡ

೧೯೮೩ – ದೂರದರ್ಶನದಲ್ಲಿ ಹಾಡಲು ಪ್ರಾರಂಭ

೧೯೮೩ – ದೆಹಲಿ ಗಣರಾಜ್ಯೋತ್ಸವದಲ್ಲಿ ಜನಪದ ಗಾಯಕರಾಗಿ ಭಾಗವಹಿಸಿದ್ದು

೧೯೮೪ – ಬೆಂಗಳೂರು ವಿಶ್ವವಿದ್ಯಾಲಯದ ಕಲ್ಚರಲ್ ಚಾಂಪಿಯನ್

೧೯೯೧ – ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಸದಸ್ಯನಾಗಿ ನೇಮಕ

೧೯೯೭ – ೪ನೇ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ನಿರ್ವಹಣೆ

೨೦೦೪–೨೦೦೮ರವರೆಗೆ – ವಿಶ್ವ ಪ್ರಸಿದ್ಧ ಮೈಸೂರು ದಸರಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು

ಆ) ಜನಪದ ಕಲಾ ತರಬೇತಿಗಳ ನಿರ್ದೇಶಕರಾಗಿ

೧೯೯೩ – ರಾಜ್ಯ ಜನಪದ ಕರಕುಶಲ ಕಾರ್ಯಾಗಾರ, ವಿದ್ಯಾನಗರ, ಬೆಂಗಳೂರು

೧೯೯೪ – ರಾಜ್ಯಮಟ್ಟದ ಜನಪದ ವೇಷಭೂಷಣ ಕಾರ್ಯಾಗಾರ, ವಿದ್ಯಾನಗರ, ಬೆಂಗಳೂರು

೧೯೯೬ – ರಾಜ್ಯಮಟ್ಟದ ಜನಪದ ಗೀತಗಾಯನ ತರಬೇತಿ, ಬೆಂಗಳೂರು

೧೯೯೬ – ರಾಜ್ಯಮಟ್ಟದ ಜನಪದ ಗೀತತರಬೇತಿ ಶಿಬಿರ, ತಿತಿಮತಿ, ಮಡಿಕೇರಿ

೨೦೧೦ – ರಾಜ್ಯಮಟ್ಟದ ಜನಪದ ಗೀತತರಬೇತಿ, ಯವನಿಕಾ, ಬೆಂಗಳೂರು

ಇ) ಧ್ವನಿಸುರುಳಿಗಳು

- ತಿಂಗಾಳು ಮುಳುಗಿದವೊ
- ಉದುರು ಉದುರು ಮಲ್ಲಿಗೆ
- ನಾವು ಮನುಜರು
- ಜಲದಗೆರೆಯಮ್ಮ
- ಸುವರ್ಣ ಸ್ವಾತಂತ್ರ್ಯ ಗೀತೆಗಳು
- ಕೃಷಿ ಗೀತೆಗಳು
- ಗಾಡಿಯ ದಾರಿ ಸಾಗಲಿ
- ಜನಪದ ಜೋಗಿ
- ಜನಪದ ಮಲ್ಲಿಗೆ
- ಗಾಂಧೀ ಗೀತೆಗಳು
- ಕನಕದಾಸರ ಗೀತೆಗಳು
- ಸಾಕ್ಷರ ಗೀತೆಗಳು

ಈ) ಕೃತಿಗಳು

- ಚೆಲ್ಲಿದರು ಮಲ್ಲಿಗೆಯ
- ಗ್ರಾಮ ಗಂಧರ್ವರು
- ಜನಪದ ರಸಬಳ್ಳಿ
- ಶಿಕ್ಷಣ ಸೌಂದರ್ಯ

೧೨. ಸಾಧನೆಗಾಗಿ ಸಂದ ಗೌರವಗಳು

ಬಾಲ್ಯದಿಂದಲೇ ಹಾಡುವುದನ್ನು ಒಡಮೂಡಿಸಿಕೊಂಡು ಬೆಳೆದ ಅಪ್ಪಗೆರೆಯವರಿಗೆ ವೇದಿಕೆ ಗಳಿಸಿಕೊಳ್ಳುವುದು ಪ್ರಯಾಸದ ಕೆಲಸವಾದಂತೆ ತೋರುವುದಿಲ್ಲ. ತನ್ನ ಅನನ್ಯ ಕಲಾ ಪ್ರತಿಭೆಯಿಂದ ಹಲವಾರು ಗೌರವ ಸನ್ಮಾನಗಳಿಗೆ ಇವರು ಭಾಜನರಾಗಿರುವುದು ಇವರ ಸಾಧನೆಯ ಹಾದಿಯಿಂದ ತಿಳಿದು ಬರುತ್ತದೆ.

೧೯೮೭ – ರಾಷ್ಟ್ರಮಟ್ಟದ ಅಂತರಕಾಲೇಜು ನಾಟಕ ಸ್ಪರ್ಧೆ ಪ್ರಶಸ್ತಿ

೧೯೯೫ – ಜಿಲ್ಲಾಮಟ್ಟದ ಪ್ರಶಸ್ತಿ

೧೯೯೫ – ಭೀಮಶ್ರೀ ಪ್ರಶಸ್ತಿ

೧೯೯೫ – ರಂಗಚೇತನ ಪ್ರಶಸ್ತಿ

೧೯೯೮ – ರಾಜ್ಯಮಟ್ಟದ ಶಿಕ್ಷಕರ ಪ್ರಶಸ್ತಿ

೧೯೯೮ – ಕರ್ನಾಟಕ ಚೇತನ ಪ್ರಶಸ್ತಿ

೧೯೯೮ – ಅಮೇರಿಕಾದ ಅರಿಜೋನ ಕನ್ನಡ ಸಂಘ, ಅಮೇರಿಕಾದ ಹಾಡುಗಾರ ನ್ಯಾಟ್‌ಕಿಂಗ್ ಕೋಲ್ ಪುರಸ್ಕಾರ

೨೦೦೧ – ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ

೨೦೦೩ – ೭೧ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಕರ್ನಾಟಕ ಶ್ರೀ ಪ್ರಶಸ್ತಿ

೨೦೦೪ – ಚುಂಚಶ್ರೀ ಪ್ರಶಸ್ತಿ

೨೦೦೫ – ಅಖಿಲ ಭಾರತ ಸಾಹಿತ್ಯ ಪರಿಷತ್ತು ಪ್ರಶಸ್ತಿ

೨೦೦೬ – ಕೆಂಪೇಗೌಡ ಪ್ರಶಸ್ತಿ

೨೦೦೬– ಅಖಿಲ ಭಾರತ ಕಲಾವಿದರ ಸಂಸ್ಥೆಯಿಂದ ಕಲ್ಚರಲ್ ಚಾಂಪಿಯನ್ ಪ್ರಶಸ್ತಿ

೨೦೦೬ – ಲಹರಿ ರೆಕಾರ್ಡಿಂಗ್–ಹೊಂಬಾಳೆ ಸಂಸ್ಥೆಯಿಂದ ಜನಪದ ಜೋಗಿ ಪ್ರಶಸ್ತಿ

೨೦೦೬ – ಕರ್ನಾಟಕ ಎಕ್ಸಲೆನ್ಸಿ ಪ್ರಶಸ್ತಿ

೨೦೦೭ – ಕರ್ನಾಟಕ ಕುವೆಂಪು ಆದರ್ಶ ಗೆಳೆಯರ ಪ್ರಶಸ್ತಿ

೨೦೦೭ – ಆರ್ಯಭಟ ಪ್ರಶಸ್ತಿ

೨೦೦೭ – ಕೊಪ್ಪಳ ಜಿಲ್ಲೆಯ ಬಸವಶ್ರೀ ಪ್ರಶಸ್ತಿ

೨೦೦೮– ಜನಪದ ಗಾನಕೋಗಿಲೆ ಪ್ರಶಸ್ತಿ, ಬೆಂ.ಗ್ರಾಂ.ರಾ.ರ.ಸಾರಿಗೆ ವೃತ್ತ

೨೦೦೮– ಆದರ್ಶ ಜಾನಪದ ರತ್ನ, ಪ್ರಶಸ್ತಿ

೨೦೦೯– ಜಾನಪದ ಗಾನಗಂಧರ್ವ ಪ್ರಶಸ್ತಿ

೨೦೧೦– ಅರ್ಜುನ ಪ್ರಶಸ್ತಿ

೨೦೧೦– ಬೆಂಗಳೂರು ನಗರ ಜಿಲ್ಲೆ ಕಲಾಶ್ರೀ ಪ್ರಶಸ್ತಿ

೧೯೯೧ ರಲ್ಲಿ ಹಾಗೂ ೧೯೯೮ರಲ್ಲಿ ಎರಡು ಬಾರಿ ಕರ್ನಾಟಕ ಸರ್ಕಾರವು ಅಪ್ಪಗೆರೆಯವರನ್ನು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಗೆ ಸದಸ್ಯರನ್ನಾಗಿ ನೇಮಕ ಮಾಡಿತು. ೨೦೦೩ರಲ್ಲಿ ಕನ್ನಡ ವಿಶ್ವವಿದ್ಯಾಲಯ ಹಂಪಿಯ ಸಿಂಡಿಕೇಟ್ ಸದಸ್ಯರಾಗಿ ಆಯ್ಕೆಯಾದುದು ಇವರ ಪ್ರತಿಭೆಗೆ ಹಿಡಿದ ಕನ್ನಡಿ.

೨೦೧೨ ರಲ್ಲಿ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾಗಿಯೂ ಆಯ್ಕೆಯಾದುದು ಅಪ್ಪಗೆರೆಯವರ ಸಾಧನೆಯ ಮತ್ತೊಂದು ಮೈಲಿಗಲ್ಲು. ದಲಿತ ಕುಟುಂಬವೊಂದರಲ್ಲಿ ಹುಟ್ಟಿ, ಬದುಕಿನ ಹಲವಾರು ಸವಾಲುಗಳನ್ನು ಎದುರಿಸಿ, ತನ್ನ ಸಾಧನೆಯ ಹಾದಿಯಲ್ಲಿ ಬಹುದೂರ ಸಾಗಿಬಂದ ಅಪ್ಪಗೆರೆಯವರು ಕನ್ನಡ ನಾಡಿನ ಹೆಮ್ಮೆಯ ಜನಪದ ಗಾಯಕರೆನಿಸಿಕೊಂಡಿದ್ದಾರೆ.

೧೩. ಸಮಾರೋಪ

ಅಪ್ಪಗೆರೆಯವರು ಜಾನಪದ ಕ್ಷೇತ್ರದ ಕುರಿತಂತೆ ಅಪಾರವಾದ ಕಾಳಜಿಯನ್ನು ಹೊಂದಿರುವ ಹಿರಿಯ ಗಾಯಕರು. ಜನಪದ ಗೀತೆಗಳನ್ನು ಹಾಡಿ ಪ್ರಭಾವೀ ಮಾಧ್ಯಮಗಳ ಮೂಲಕ ಅವುಗಳನ್ನು ಕನ್ನಡ ಹಾಗೂ ಕನ್ನಡೇತರ ಜನರಿಗೆ ತಲುಪಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. "ಅಪ್ಪಗೆರೆ ಎಂದರೆ ಇವನೊಬ್ಬ ಜಾನಪದ ಹಾಡಿನ ಮೋಡಿಕಾರ. ಹಾಡಲು ನಿಂತನೆಂದರೆ ಇಡೀ ಸಭೆಯೇ ತಲೆದೂಗುತ್ತದೆ. ಇವನೊಂದಿಗೆ ಹೆಜ್ಜೆ ಹಾಕುತ್ತದೆ, ದನಿಗೆ ದನಿ ಕೂಡಿಸುತ್ತದೆ. ಅಪ್ಪಗೆರೆ ಹಾಡಲು ಆಯ್ಕೆ ಮಾಡಿಕೊಳ್ಳುವ ಹಾಡುಗಳದ್ದೇ ಒಂದು ಸೊಗಸು. ಮುತ್ತು ಮಾಣಿಕ್ಯಗಳನ್ನು ಪೋಣಿಸಿದಂತೆ ಒಂದಕ್ಕಿಂತ ಒಂದು ಮೆರುಗು. ಒಂದಕ್ಕಿಂತ ಒಂದು ಝುಗಮಗ. ಅದೊಂದು ರೀತಿ ಗಾನ ಗಂಧರ್ವ ಲೋಕವೇ ಕಣ್ಣೆದುರು ತೆರೆದಂತಿರುತ್ತದೆ. ಜನಪದ ಭಾವಲೋಕದ ಮಲ್ಲಿಗೆಯ ಹೂ ಗೊಂಚಲು ಗೊಂಚಲಾಗಿ ಅರಳಿದಂತಿರುತ್ತದೆ" ಎಂಬ ಪುಂಡಲೀಕ ಕಲ್ಲಿಗನೂರರ ಮಾತು ಅಕ್ಷರಶಃ ಸತ್ಯ. ಈ ಕಲಾವಿದನ ಮನೆಯನ್ನು ಹೊಕ್ಕರೆ ಒಂದೆಡೆ ಪ್ರಶಸ್ತಿ ಫಲಕಗಳ ರಾಶಿ, ಇನ್ನೊಂದೆಡೆ ಪುಸ್ತಕಗಳ ರಾಶಿ. ಮಗಳು ಗಾನ ವೀಣಾಪಾಣಿಯಾಗಿ ನಮ್ಮೆದುರು ಕಾಣಿಸಿಕೊಳ್ಳುತ್ತಿದ್ದಂತೆ, ಮಗ ಗಂಧರ್ವ ಹಾರ್ಮೋನಿಯಂ ಹಿಡಿದು ಹಿಂದೂಸ್ಥಾನಿ ಸಂಗೀತದ ಸ್ವರಗಳನ್ನು ನುಡಿಸಲು ಆರಂಭಿಸಿದ. ಮಕ್ಕಳಿಬ್ಬರ ಸಂಗೀತಕ್ಕೆ ತಾಯಿ ಮೈತ್ರಿಯೂ ಶ್ರೋತೃವಾಗಿದ್ದಾರೆ. ಒಟ್ಟಿನಲ್ಲಿ ಅಪ್ಪಗೆರೆಯವರ ಮನೆ-ಮನವೆಲ್ಲವೂ ಸಂಗೀತಮಯ. ಅಪ್ಪಗೆರೆಯವರ ಸಂಗೀತದ ಪಯಣ ಗಾನ-ಗಂಧರ್ವರ ಮೂಲಕವಾಗಿಯೂ ಮುಂದುವರೆಯುತ್ತಿರುವುದು ಹೆಮ್ಮೆಯ ಸಂಗತಿ.

ಅನುಬಂಧ

ಹಿರಿಯರ ನುಡಿ

"ಕನ್ನಡಿಗರ ಹೆಮ್ಮೆಯ ಗಾಯಕ ಅಪ್ಪಗೆರೆ ತಿಮ್ಮರಾಜು ಹಲವಾರು ದಶಕಗಳಿಂದ ನಾಡಿನಾದ್ಯಂತ ಜನಪದ ಗೀತೆಗಳನ್ನು ಹಾಡುತ್ತಾ, ಜನಮನದಲ್ಲಿ ಹುಚ್ಚೆಬ್ಬಿಸಿದವರು. ಕರ್ನಾಟಕದಲ್ಲಿ ಅಪ್ಪಗೆರೆ ಅವರ ಹೆಸರನ್ನು ಕೇಳದ ಅವರನ್ನು ನೋಡದ ಕನ್ನಡಿಗನಿಲ್ಲ ಎಂದರೆ ಅತಿಶಯೋಕ್ತಿಯಲ್ಲ. ಅಪ್ಪಗೆರೆ ಹಾಡುವುದನ್ನು ನಮ್ಮ ಕಿವಿಗಳು ಕೇಳಬೇಕು, ಅವರ ಭಾವಾಭಿನಯವನ್ನು ನಮ್ಮ ಕಣ್ಣುಗಳು ನೋಡಬೇಕು. ಆಗ ಒಂದು ಸಾರ್ಥಕ ಭಾವ ನಮ್ಮನ್ನು ಆವರಿಸುತ್ತದೆ. ಈ ಜಾನಪದ ಜಾದೂಗಾರ ಅಮೇರಿಕಾಕ್ಕೆ ಭೇಟಿ ನೀಡಿದಾಗ ಇವರ ಹಾಡು ಕೇಳಿದ ಅಮೆರಿಕನ್ ಕನ್ನಡಿಗರು "ಯಾರೀ ಕನ್ನಡದ ಜಾಕ್ಸನ್?" ಎಂದು ಹುಬ್ಬೇರಿಸಿದ್ದುಂಟು. ಅಪ್ಪಗೆರೆ ಜಾನಪದ ವಿದ್ವಾಂಸರು ಹಾಗೂ ಚಿಂತಕರೂ ಹೌದು".

–ಡಾ. ಸಿದ್ಧಲಿಂಗಯ್ಯ (ಕನ್ನಡದ ಕವಿ)

(ಋಣ: ಚೆಲ್ಲಿದರು ಮಲ್ಲಿಗೆಯ ಸಂ:ಅಪ್ಪಗೆರೆ ತಿಮ್ಮರಾಜು, ಕನ್ನಡ ಪ್ರಕಾಶನ, ಬೆಂಗಳೂರು.)

ಅಡಿ ಟಿಪ್ಪಣಿಗಳು

೧. ನಾಗರಾಜ್ ಡಿ.ಆರ್, ಮುನ್ನುಡಿ *ಮೆರವಣಿಗೆ (ಸಿದ್ಧಲಿಂಗಯ್ಯ)*, ಅಂಕಿತ ಪ್ರಕಾಶನ, ಬೆಂಗಳೂರು, ೨೦೦೦.

೨. ಸಿದ್ಧಲಿಂಗಯ್ಯ, *ನಲವತ್ತೇಳರ ಸ್ವಾತಂತ್ರ್ಯ, ಮೆರವಣಿಗೆ*, ಅಂಕಿತ ಪುಸ್ತಕ, ಬೆಂಗಳೂರು, ೨೦೦೦.

೩. ಅಪ್ಪಗೆರೆ ತಿಮ್ಮರಾಜು, *ಅವ್ವನ ಹಾಡುಗಳು*, ಜ್ಞಾನ ಸಂಬುದ್ಧ ಪ್ರಕಾಶನ, ಬೆಂಗಳೂರು, ೨೦೧೨.

ಪರಾಮರ್ಶನ ಗ್ರಂಥಗಳು

೧. ಅಪ್ಪಗೆರೆ ತಿಮ್ಮರಾಜು, *ಅವ್ವನ ಹಾಡುಗಳು*, ಜ್ಞಾನ ಸಂಬುದ್ಧ ಪ್ರಕಾಶನ, ಬೆಂಗಳೂರು, ೨೦೧೨.

೨. ಅಪ್ಪಗೆರೆ ತಿಮ್ಮರಾಜು, *ಚೆಲ್ಲಿದರು ಮಲ್ಲಿಗೆಯ*, ಕನ್ನಡ ಪ್ರಕಾಶನ ಬೆಂಗಳೂರು, ೨೦೦೯.

೩. ಗುಂಡಿಗೆರೆ ವಿಶ್ವನಾಥ, ಎಸ್. ರಾಮಲಿಂಗೇಶ್ವರ(ಸಂ)*ಜಾನಪದ ಐಸಿರಿ*, ಬುದ್ಧ, ಬಸವ, ಗಾಂಧಿ ಸಾಂಸ್ಕೃತಿಕ ಟ್ರಸ್ಟ್, ಬೆಂಗಳೂರು. ೨೦೧೨

೪. ಸಿದ್ಧಲಿಂಗಯ್ಯ, *ನಲವತ್ತೇಳರ ಸ್ವಾತಂತ್ರ್ಯ ಮೆರವಣಿಗೆ*, ಅಂಕಿತ ಪುಸ್ತಕ, ಬೆಂಗಳೂರು, ೨೦೦೦.


ಚಿತ್ರಾವಳಿ



ಅಪ್ಪಗೆರೆ ತಿಮ್ಮರಾಜು ಅವರ 'ಪುಸ್ತಕ ಲೋಕ'



ಅಪ್ಪಗೆರೆಯವರೊಂದಿಗೆ ಸಂದರ್ಶನ



ಅಪ್ಪಗೆರೆ ತಿಮ್ಮರಾಜು ಅವರಿಗೆ ಸಂದ ಗೌರವ ಪ್ರಶಸ್ತಿಗಳು




ಕುಟುಂಬದೊಂದಿಗೆ ಅಪ್ಪಗೆರೆ



ಮಗಳು ಗಾನಾಳ ಜೊತೆ ತಿಮ್ಮರಾಜು ದಂಪತಿಗಳು



ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ 'ಪಟ್ಟಾಂಗ' ಕಾರ್ಯಕ್ರಮದಲ್ಲಿ
ಗೌರವ ಸನ್ಮಾನ



ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ 'ಪಟ್ಟಾಂಗ' ಕಾರ್ಯಕ್ರಮದಲ್ಲಿ ತಿಮ್ಮರಾಜು



ಕಲಾವಿದರೊಂದಿಗೆ 'ಸಂವಾದ'ದಲ್ಲಿ ನಿರತ ತಿಮ್ಮರಾಜು



‘ಕೆಂಪೇಗೌಡ’ ಪ್ರಶಸ್ತಿ ಸ್ವೀಕಾರ ಸಂದರ್ಭ



ಗೌರವ ಸ್ವೀಕರಿಸುತ್ತಿರುವ ಅಪ್ಪಗೆರೆ ತಿಮ್ಮರಾಜು




ಜಾನಪದ ಕಾರ್ಯಕ್ರಮವೊಂದರಲ್ಲಿ ಅಪ್ಪಗೆರೆ ತಿಮ್ಮರಾಜು



ಜ್ಞಾನಪೀಠ ಪುರಸ್ಕೃತ ಡಾ. ಚಂದ್ರಶೇಖರ ಕಂಬಾರರೊಂದಿಗೆ ತಿಮ್ಮರಾಜು



ಕನ್ನಡ ಚಿತ್ರರಂಗದ ಯುವನಟ ಪುನೀತ್‌ನೊಂದಿಗೆ ಅಪ್ಪಗೆರೆ ತಿಮ್ಮರಾಜು



ಅಭಿನಂದನಾ ಸಮಾರಂಭದಲ್ಲಿ ಹಾಡುತ್ತಿರುವುದು

ನಮ್ಮ ಪ್ರಕಟಣೆಗಳು

ಕ್ರ.ಸಂ.	ಕೃತಿಯ ಹೆಸರು	ಲೇಖಕ/ ಸಂಪಾದಕರ ಹೆಸರು	ಬೆಲೆ
೧.	ಇಂದಿನ ಕನಸು ನಾಳಿನ ನನಸು	ಸಂ : ಪ್ರೊ. ಅಂಬಳಿಕೆ ಹಿರಿಯಣ್ಣ	೧೦೦.೦೦
೨.	ಜಾನಪದ ವರ್ಷ–೨೦೧೧	ಸಂ : ಡಾ. ಎಸ್.ಪಿ. ಪದ್ಮಪ್ರಸಾದ್	೧೦೦.೦೦
೩.	ಜಾನಪದ ವಸ್ತುಕೋಶ	ಸಂ : ಪ್ರೊ. ಸ.ಚಿ. ರಮೇಶ	೧೪೦.೦೦
೪.	ಕೇರಳದ ಜನಪದವೀರ ತಚ್ಚೋಳಿ ಒದೇನನ್	ಸಂ : ಡಾ. ಕೆ. ಕಮಲಾಕ್ಷ	೧೪೦.೦೦
೫.	ಕಾಡುಗೊಲ್ಲರ ಕೋಲಾಟದ ಪದಗಳು	ಸಂ : ಮೋಹನಕುಮಾರ ಎನ್.	೮೦.೦೦
೬.	ತುಳುನಾಡಿನ ಜನಪದ ಕತೆಗಳು	ಸಂ : ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್	೧೦೦.೦೦
೭.	ಕರ್ನಾಟಕ ಸಂಶೋಧನ ಜಾನಪದ	ಸಂ : ಪ್ರೊ.ಎ.ವಿ. ನಾವಡ	೬೫೦.೦೦
೮.	ಮಲೆನಾಡ ನುಡಿಕೋಶ	ಸಂ : ವೇಣಾಕ್ಷಿ ಎಸ್.ಡಿ.	೧೫೦.೦೦
೯.	ಬುರ್ರಕಥಾ ಜಯಮ್ಮ	ಸಂ : ಡಾ. ಕೆ. ಪ್ರೇಮಕುಮಾರ	೪೦.೦೦
೧೦.	ಗೊಂಬೇಗೌಡರ ರಾಮನಗೌಡರು	ಸಂ : ಡಾ. ಚಂದ್ರಪ್ಪ ಸೊಬಟಿ	೮೦.೦೦
೧೧.	ನಮ್ಮ ಪರಿಸರದ ಲಂಬಾಣಿಗರು	ಸಂ : ಡಾ. ಮಲ್ಲಿಕಾರ್ಜುನ ಕುಂಬಾರ	೬೦.೦೦
೧೨.	ಕಾಡುಗೊಲ್ಲರ ಬೆಡಗಿನ ಪದಗಳು	ಸಂ : ಎಂ.ಬಿ. ಶ್ವೇತಾ, ಎನ್. ಮೋಹನ್‌ಕುಮಾರ್	೮೦.೦೦
೧೩.	ಹುಮಾಯೂನ್ ಹರಲಾಪುರ	ಸಂ : ಡಾ. ವೃಷಭಕುಮಾರ	೮೦.೦೦
೧೪.	ಅಪ್ಪಗೆರೆ ತಿಮ್ಮರಾಜು	ಸಂ : ಶ್ವೇತಾ ಎಂ.ಬಿ.	೮೦.೦೦
೧೫.	ಡಾ. ಪಿ.ಕೆ. ರಾಜಶೇಖರ	ಸಂ : ಸಂಗಮೇಶ ಎಸ್. ಗಣಿ	೧೨೦.೦೦
೧೬.	ನಮ್ಮ ಗಿಡಮರ ಬಳ್ಳಿಗಳು	ಸಂ : ಶಾಂತಿ ನಾಯಕ	೭೦.೦೦
೧೭.	ದೇಶೀಯ ಕೃಷಿ ಹತೋಟಿ ಮತ್ತು ಸಂರಕ್ಷಣಾ ಕ್ರಮಗಳು	ಸಂ : ಪ್ರೊ. ಪ್ರಕಾಶ ಕಮ್ಮರಡಿ	೧೦೦.೦೦
೧೮.	ಜಾನಪದ ವರ್ಷ–೨೦೧೨	ಸಂ : ಡಾ. ಕೆ.ವಿ. ಮುದ್ದವೀರಪ್ಪ	೧೨೦.೦೦
೧೯.	ದಕ್ಷಿಣ ಭಾರತೀಯ ದೇಸೀ ಕೃಷಿವಿಜ್ಞಾನ ಕೋಶ (ಎರಡು ಸಂಪುಟಗಳು)	ಪ್ರ.ಸಂ : ಪ್ರೊ. ಅಂಬಳಿಕೆ ಹಿರಿಯಣ್ಣ ಕಾ.ನಿ.ಸಂ : ಪ್ರೊ. ಆರ್ಶ್ವಿಯಸ್ ಸುಂದರಂ ಸಂ : ಪ್ರೊ. ಸ.ಚಿ. ರಮೇಶ	(ಎರಡು ಸಂಪುಟ ಸೇರಿ) ೧೦೦೦.೦೦
೨೦.	ಜಾನಪದ ಜಗಲಿ (ಸಂಶೋಧನಾ ಅರ್ಧವಾರ್ಷಿಕ ಪತ್ರಿಕೆ) ಸಂಚಿಕೆ–೧, ೨, ೩ & ೪		ಬಿಡಿ ಪ್ರತಿಗೆ ೫೦.೦೦

ಜನಪದರ ನರನಾಡಿಗಳಲ್ಲಿ ಹಾಡಿನ ಜೀವದ್ರವ್ಯವೇ ಹರಿದಾಡುತ್ತದೆ. ಅವರ ಜೀವನಾಡಿಯೇ ಹಾಡು. ಅವರ ಪಾಲಿನ ಉಸಿರು ಕೂಡ ಹಾಡೇ ಆಗಿರುತ್ತದೆ. ಕೆಲವು ಕಲಾವಿದರ ಪಾಲಿಗೆ ಜನಪದ ಗೀತೆಗಳು ಜೀವನದ ಪಾಡನ್ನು ಮರೆಯುವ ಉಪಾಯವಾಗಿಯೂ ತೋರುತ್ತವೆ. ಬದುಕಿನ ಹಲವು ಏಳು-ಬೀಳುಗಳ ನಡುವೆಯೂ ಜಾನಪದದ ಹುಚ್ಚು ಹಿಡಿಸಿಕೊಂಡು ಅದರ ಪೋಷಣೆಗೆ ದುಡಿಯುವ ಕಲಾವಿದರು ನಮ್ಮ ಮಧ್ಯೆ ಇರುವುದು ಅಭಿಮಾನಪಡುವ ಸಂಗತಿ. ಜಾನಪದದ ಬಗೆಗೆ ಅಪಾರ ಕಾಳಜಿ, ಕಳಕಳಿಯನ್ನು ಹೊಂದಿದ ವಿರಳ ಕಲಾವಿದರಲ್ಲಿ ಶ್ರೀ ಅಪ್ಪಗೆರೆ ತಿಮ್ಮರಾಜು ಅವರೂ ಒಬ್ಬರು. ತಮ್ಮ ಬದುಕಿನುದ್ದಕ್ಕೂ ಪಟ್ಟ ಪಾಡನ್ನು ಹಾಡುವ ಮೂಲಕ ಮರೆತು ಬದುಕಿನ ಗತಿಯನ್ನು ಬದಲಿಸಿಕೊಂಡ ಶ್ರೀ ಅಪ್ಪಗೆರೆಯವರಿಗೆ ಜಾನಪದವು ಜೀವನದ ಪರಮಸ್ನೇಹಿಯಾಗಿ ಅವರನ್ನು ಪೊರೆದಿದೆ. ಜನಪದ ಹಾಡುಗಳನ್ನು ಸುಶ್ರಾವ್ಯವಾಗಿ ಹಾಡುವ ಮೂಲಕ 'ಅಪ್ಪಗೆರೆಯಿಂದ ಅಮೆರಿಕಾದವರೆಗೂ' ಜಾನಪದದ ಸೊಗಡನ್ನು ಬಿತ್ತರಿಸಿದವರು ಅವರು. ಇಂತಹ ಅಪ್ಪಗೆರೆಯವರ ಹಾಡು ಕೇಳಿದ ನಾಡಿನ ಜನಕ್ಕೆ ಅವರ ಜೀವನದ ಯಶೋಗಾಥೆಯನ್ನು ಓದಿ ತಿಳಿಯುವ ಭಾಗ್ಯವನ್ನು ಈ ಕೃತಿಯ ಮೂಲಕ ದೊರಕಿಸಿಕೊಟ್ಟ ಕುಮಾರಿ ಎಂ.ಬಿ. ಶ್ವೇತಾ ಅವರು ಅಭಿನಂದನಾರ್ಹರು.

ಪ್ರೊ. ಅಂಬಳಿಕೆ ಹಿರಿಯಣ್ಣ
ಕುಲಪತಿ

Printed at Raja Printers, Bangalore -27 Ph:22234066

ISBN 978-93-83149-08-7

9 789383 149087

ವಿಸ್ತರಣೆ ಹಾಗೂ ಸಲಹಾ ಕೇಂದ್ರ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ

₹ ೮೦/-